ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ, ದಿನಾಂಕ ೨೬ನೇ ಮಾರ್ಚಿ ೧೯೮೭, ಚೈತ್ರ ೫, ೧೯೦೯ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೮–೩೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ವರದಿಯನ್ನೊಪ್ಪಿಸುವುದು

ಶ್ರೀ ಬಿ. ಜಿ. ಜಮಖಂಡಿ.— ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಅಂದಾಜು ಸಮಿತಿಯ ಮೂರನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.— ವರದಿಯನ್ನು ಒಪ್ಪಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇಲ್ಲಿ ಮುಖ್ಯ ಮಂತ್ರಿಗಳೇ ಇಲ್ಲ, ಅವರದ್ದೇ ಡಿಮ್ಯಾಂಡ್ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿಮ್ಮನ್ನೇ ಮುಖ್ಯ ಮಂತ್ರಿಯನ್ನಾಗಿ ಮಾಡಿದ್ದರೆ ಸಂತೋಷ ನಮ್ಮದೇನೂ ಇಲ್ಲ.

ಅಧ್ಯಕ್ಷರು.— ಅವರು ಬರುತ್ತಾರೆ. ನೀವು ಮಾತನಾಡಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) — ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಸುಮಾರು ೧೩ ಬೇಡಿಕೆಗಳನ್ನು ಮಂಡಿಸಿದ್ದಾರೆ. ಇದರಲ್ಲಿ ಯುವಜನ ಸೇವೆ, ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ, ವರಮಾನ ಮತ್ತು ವೃತ್ತಿಗಳ ಮೇಲೆ ತೆರಿಗೆ ಮಾರಾಟ ಮತ್ತು ಇತರ ಸೇವೆಗಳು, ವಿಮೆ ಖಜಾನೆ ಮತ್ತು ಲೆಕ್ಕಾ ಇಲಾಖೆಗಳ ಆಡಳಿತ, ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು, ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು ವಿವಿಧ ಸಾಮಾನ್ಯ ಸೇವೆಗಳು, ವಾರ್ತೆ ಮತ್ತು ಪ್ರಚಾರ. ಚುನಾವಣೆಗಳು, ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ, ಸಚಿವಾಲಯ, ಜಿಲ್ಲಾಡಳಿತ, ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ—ಹೀಗೆ ಸುಮಾರು ೧೩ ಡಿಮ್ಯಾಂಡ್ಸ್‌ಗಳನ್ನು ಮುಖ್ಯ ಮಂತ್ರಿಗಳು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಕೆಲವು ಡಿಮ್ಯಾಂಡ್ಸ್ ಮೇಲೆ ಮಾತ್ರ ನಾನು ಮಾತನಾಡ ಬಯಸುತ್ತೇನೆ. ಮತ್ತು ಅನಿವಾರ್ಯವಾಗಿ ಕೆಲವು ತೆಗೆದುಕೊಂಡಂತಹ ನಿರ್ಣಯಗಳು ಏನಿವೆ, ಅವುಗಳನ್ನು ಇಲ್ಲಿಯವರೆಗೂ ಅವರು ಆಚರಣೆಯಲ್ಲಿ ತಂದಿಲ್ಲ, ಇಂಪ್ಲಿಮೆಂಟ್ ಮಾಡಿಲ್ಲ. ವಿಶೇಷವಾಗಿ, ಮುಖ್ಯ ಮಂತ್ರಿಗಳಿಗೆ ನಾನು ಹೋದಸಲ ಹೈದರಾಬಾದ್ ಕರ್ನಾಟಕದ ಕಡೆ ಪ್ರವಾಸ ಬಂದಾಗ ಒಂದು ಮನವಿಯನ್ನು ಮಾಡಿಕೊಂಡಿದ್ದೆ. ಇಡೀ ರಾಜ್ಯದಲ್ಲಿ ಉತ್ತರ ಕರ್ನಾಟಕದಲ್ಲಿರ ತಕ್ಕಂಥ ಜಿಲ್ಲೆಗಳು ಅತಿ ದೊಡ್ಡ ಜಿಲ್ಲೆಗಳು ಇವೆ. ಆಡಳಿತದ ದೃಷ್ಟಿಯಿಂದ ಮತ್ತು ಆರ್ಥಿಕ

ಭಿವೃದ್ಧಿ ದೃಷ್ಟಿಯಿಂದ ವಿಯೋಬಲ್ ಯೂನಿಟ್ ಮಾಡಿ, ಸಾಮಾನ್ಯ ಜನರಿಗೆ ಸಹಾಯಕ ಆಗ ತಕ್ಕಂಥ ದೃಷ್ಟಿಯಿಂದ ಇವನ್ನು ವಿಂಗಡಿಸಬೇಕು. ಬೈಫರ್‌ಕೇಷನ್ ಮಾಡಬೇಕು ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟವಾಗಿ ಅವರಿಗೆ ಕೊಟ್ಟ ಮನವಿಯಲ್ಲಿ ಹೇಳಿದ್ದೆ. ನನಗನಿಸಿದ್ದ ಮಟ್ಟಿಗೆ ಆ ಭಾಗದ ಶಾಸಕ ಮಿತ್ರರೂ ಕೂಡ ನನ್ನ ಜೊತೆಯಲ್ಲಿದ್ದರು. ಆಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಸಾಧ್ಯವಾದ ಮಟ್ಟಿಗೂ ರೀಆರ್ಗನೈಸೇಷನ್ ಮಾಡತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ ಅದಕ್ಕೆ ಏನು ಬೇಕೋ ಆ ಸಿದ್ಧತೆಯನ್ನು ಮಾಡುತ್ತೇನೆ ಎನ್ನತಕ್ಕ ಆಶ್ವಾಸನೆಯನ್ನು ಸುಮಾರು ೨ ವರ್ಷದ ಹಿಂದೆ ಕೊಟ್ಟಿದ್ದರು. ಬಹುಶಃ ಈ ಆಶ್ವಾಸನೆಯನ್ನು ಅಲ್ಲಿಗೆ ಬಂದಾಗ, ಪಾರ್ಲಿಮೆಂಟ್ ಬೈ ಎಲೆಕ್ಷನ್ ಸಂಬಂಧದಲ್ಲಿ ಕೊಟ್ಟರೋ ಅಥವಾ ಕೊಟ್ಟು ಮರೆತು ಹೋದರೋ ನನಗೆ ಗೊತ್ತಿಲ್ಲ. ಆಡಳಿತದ ದೃಷ್ಟಿಯಿಂದ ಇದು ಮಾಡತಕ್ಕಂತಾದ್ದು ಬಹಳ ಅವಶ್ಯ ಎನ್ನುವುದನ್ನು ಇಲ್ಲಿ ನಾನು ಒತ್ತಿ ಹೇಳುತ್ತೇನೆ. ಇವತ್ತು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ. ಒಳ್ಳೆಯ ಆಡಳಿತವನ್ನು ಕೊಡಬೇಕಾದರೆ, ಸಾಮಾನ್ಯ ಜನರಿಗೆ ನಾವು ಹಾಕಿಕೊಂಡ ಕಾರ್ಯಕ್ರಮಗಳು ಅವರಿಗೆ ತಲುಪಬೇಕಾದರೆ, ಮುಟ್ಟಬೇಕಾದರೆ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಗಳನ್ನು ನೇಮಿಸತಕ್ಕಂಥದ್ದು ಬಹಳ ಅವಶ್ಯ. ಆ ಒಂದು ದೃಷ್ಟಿಯಿಂದ ಕೆಲವು ಅಧಿಕಾರಿಗಳು, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಇಲ್ಲದೇಹೋದರೆ, ನಮ್ಮ ಯಾವ ಕಾರ್ಯಕ್ರಮಗಳೂ ಯಶಸ್ವಿಯಾಗುವುದಿಲ್ಲ. ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಉದಾಹರಣೆಗೆ ೨೦ ಅಂಶಗಳ ಕಾರ್ಯಕ್ರಮ. ಈ ೨೦ ಅಂಶದ ಕಾರ್ಯಕ್ರಮ ಎಮರ್ಜೆನ್ಸಿ ಪೀರಿಯಡ್‌ನಲ್ಲಿ ಉತ್ತರ ಪ್ರದೇಶದಲ್ಲಿ ಏನಾಗಿದೆ, ಯಾವ ಪರಿಣಾಮವನ್ನು ಭೋಗಿಸಿದರು ? ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಈ ಒಂದು ಅವಧಿಯಲ್ಲಿ ಬಹಳ ಒಳ್ಳೆಯ ಕೆಲಸಗಳು ಈ ಭಾಗದಲ್ಲಿ, ಕರ್ನಾಟಕ ರಾಜ್ಯದಲ್ಲಿ ಆಯಿತು, ಹಿಂದೆ ಎಂದೂ ಕೂಡ ಈ ರೀತಿ ಆಗಿರಲಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಅವರೂ ಕೂಡ ಅದನ್ನು ಒಪ್ಪುತ್ತಾರೆ. ೨೦ ಅಂಶಗಳ ಕಾರ್ಯಕ್ರಮದಲ್ಲಿ, ಭೂ ಸಂಧಾರಣಾ ಕಾರ್ಯಕ್ರಮ, ಡೆಟ್ ರಿಲೀಫ್, ನಿವೇಶನಗಳನ್ನು ಕೊಡುವುದು ; ಜನತಾ ಮನೆಗಳ ಕಾರ್ಯಕ್ರಮ ರಿಸರ್ವೇಷನ್ ಪಾಲಿಸಿ ಇಂಪ್ಲಿಮೆಂಟ್ ಮಾಡುವಂತಾದ್ದು, ಹೀಗೆ ಅನೇಕ ಕೆಲಸ ಕಾರ್ಯಗಳಲ್ಲಿ, ಪ್ರಗತಿ ಪರವಾದಂಥ ಕಾರ್ಯಕ್ರಮಗಳನ್ನು ಆಚರಣೆಗೆ ತಂದಿದ್ದು ಆ ಒಂದು ಸಂದರ್ಭದಲ್ಲಿ ಮಾತ್ರ. ಆದರೆ, ಮುಂದೆ ಈ ಕಾರ್ಯಕ್ರಮ ಕುಂಠಿತವಾಯಿತು. ಏಕೆಂದರೆ, ಆಡಳಿತದಲ್ಲಿ ಯಾರು ಇರುತ್ತಾರೋ, ಅವರು ಒಳ್ಳೆಯ ಅಧಿಕಾರಿಗಳನ್ನು ನೋಡಿ ಕಮಿಟೆಡ್ ಆಫೀಸರ್ಸ್‌ಗಳನ್ನು ಸರ್ಕಾರದ ಕಾರ್ಯಕ್ರಮಗಳನ್ನು ಸರಿಯಾದ ರೀತಿಯಲ್ಲಿ ಆಚರಣೆಯಲ್ಲಿ ತರತಕ್ಕಂಥ, ಜಾರಿಯಲ್ಲಿರತಕ್ಕಂಥ ಅಧಿಕಾರಿಗಳನ್ನು ಜಿಲ್ಲಾಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಉಪವಿಭಾಗ ಮಟ್ಟದಲ್ಲಿ ಹಾಕಿದ್ದರೆ ಯಶಸ್ವಿಯಾಗಿ ಅವುಗಳನ್ನು ಆಚರಣೆಯಲ್ಲಿ, ಜಾರಿಯಲ್ಲಿ ತಂದರೆ, ಅದರ ಲಾಭ ಸಾಮಾನ್ಯ ಜನರಿಗೆ ದೊರೆಯುತ್ತದೆ. ಇವತ್ತು ಅತ್ಯಾವಶ್ಯಕವಾಗಿ ಕೆಳ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಗಳನ್ನು ನೇಮಿಸತಕ್ಕದ್ದು ಬಹಳ ಮುಖ್ಯವಾಗಿದೆ. ಆದರೆ ಇವರ ಆಡಳಿತದಲ್ಲಿ ಯಾರು ಅವರಿಗೆ ಬೇಕೋ, ಪ್ರಭಾವಿ ಶಾಸಕರುಗಳು ಪಕ್ಷದಲ್ಲಿರುತ್ತಾರೋ, ಮಂತ್ರಿಗಳಿರುತ್ತಾರೋ ಅಂಥವರು ತಮಗೆ ಬೇಕಾದಂಥ, ಅವನು ಒಳ್ಳೆಯವನೋ, ಕೆಟ್ಟವನೋ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಾನೋ, ಇಲ್ಲವೋ ಇಂಥವರನ್ನು ಹಾಕಿಸಿಕೊಳ್ಳುತ್ತಿರುವುದರಿಂದ, ಸರ್ಕಾರದ ಅನೇಕ ಕಾರ್ಯಕ್ರಮಗಳು ಕುಂಠಿತವಾಗಿ, ಜನರಿಗೆ ಯಾವ ರೀತಿಯಲ್ಲಿ ಲಾಭಸಿಗಬೇಕಾಗಿತ್ತೋ ಅದು ಕೂಡ ಸಿಗದಂತಾಗಿದೆ. ಇವತ್ತು ಸರ್ಕಾರ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಶಾಸಕರುಗಳು ಎಷ್ಟೇ ಪ್ರಭಾವ ಶಾಲಿಗಳಾಗಿರಲಿ, ಮಂತ್ರಿಗಳು ಎಷ್ಟೇ ಪ್ರಭಾವ ಶಾಲಿಗಳಾಗಿರಲಿ ಅವರಿಗೆ ಮಣಿಯಬಾರದು. ದಿವಂಗತ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಎಲ್ಲೆಲ್ಲಿ ಯಾವ ಯಾವ ಜನಾಂಗದವರು ಮೆಜಾರಿಟಿ ಇರುತ್ತಾರೆ. ಅಂಥ ಕಡೆಗಳಲ್ಲಿ ಮೈನಾರಿಟೀಸ್ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಅಧಿಕಾರಿಗಳನ್ನು ಹಾಕುತ್ತಿದ್ದರು. ನಮ್ಮಲ್ಲಿ ಈ ಜಾತೀಯ ಪಿಡುಗು ಹೋಗುವುದಿಲ್ಲ. ಅದಕ್ಕೆ ಅವಕಾಶವೂ ಇಲ್ಲ. ಅಲ್ಲಿ ಇಲ್ಲಿ ಗೆದಿದ್ದೇವೆಂದು ನಾವು ಹೇಳಿಕೊಳ್ಳುತ್ತಿದ್ದೇವೆ. ಸಂಬಂಧಪಟ್ಟ ಮಂತ್ರಿ ಇದ್ದರೆ, ಅದೇ ಜಾತಿಯವರು ಮೇಲ್ಪಟ್ಟದ ಅಧಿಕಾರಿಗಳು, ಶಾಸಕರು ಅದೇ ಜಾತಿಯವರು ಇರುವುದನ್ನು ಇವತ್ತು ನಾವು ನೋಡುತ್ತಿದ್ದೇವೆ. ಎಲ್ಲರೂ ಹಾಗೆ ಮಾಡುತ್ತಾರೆಂದು ನಾನು

ಹೇಳುವುದಿಲ್ಲ. ಅನೇಕಸಾರಿ ದುರುಪಯೋಗ ಪಡೆದುಕೊಂಡಿರುವುದನ್ನು ನಾವು ನೋಡುತ್ತಿದ್ದೇವೆ. ಅನೇಕ ಶಾಸಕರುಗಳು ಮಂತ್ರಿಗಳು ಪಡೆದುಕೊಂಡಿದ್ದಾರೆ. ಇದರಿಂದ ಅಲ್ಲಿರತಕ್ಕ ಅಲ್ಪಸಂಖ್ಯಾತರಿಗೆ ದುರ್ಬಲವರ್ಗದವರಿಗೆ ನೂರಾರು ವರ್ಷಗಳಿಂದ ಏನೊಂದು ದಬ್ಬಾಳಿಕೆ, ತೊಂದರೆಗಳನ್ನು ಕೊಡುತ್ತಾ ಬಂದಿದ್ದಾರೆ. ಅದು ಮತ್ತೆ ಮುಂದುವರಿಯುವುದಕ್ಕೆ ಅವಕಾಶವಾಗುತ್ತದೆ. ಇದನ್ನು ಬದಲಾಯಿಸುವ ದೃಷ್ಟಿಯಿಂದ ದೇವರಾಜ ಅರಸು ಅವರು ಒಂದು ಪದ್ಧತಿಯನ್ನು ಹಾಕಿದ್ದರು. ೮೩ರವರೆಗೂ ಅದೇ ಪದ್ಧತಿ ಮುಂದುವರಿದಕೊಂಡು ಬಂತು. ಮಂಡ್ಯ ಜಿಲ್ಲೆ ಯಾವ ಅಧಿಕಾರಿಗಳನ್ನು ಹಾಕಬೇಕೆಂದರೆ, ಬ್ರಾಹ್ಮಣರು, ಹರಿಜನರು. ಧಾರವಾಡ ಜಿಲ್ಲೆಯಲ್ಲಿ ವಕ್ಕಲಿಗರು ಇನ್ನಿತರೆ ಜಾತಿಯವರು ಹೀಗೆ ಹಾಕುತ್ತಾ ಬರಲಾಗುತ್ತಿತ್ತು. ನಾನು ಎಲ್ಲರೂ ಕೆಟ್ಟ ಅಧಿಕಾರಿಗಳೆಂದು ಹೇಳುವುದಿಲ್ಲ ಆಡಳಿತದಲ್ಲಿ ನಿಮ್ಮ ಕಮಿಟ್‌ಮೆಂಟ್ ಇದೆ. ಜನರಿಗೆ ಕಾರ್ಯಕ್ರಮಗಳನ್ನು ಮುಟ್ಟಿಸುವಂಥ ಯೋಜನೆಗಳನ್ನು ತಲುಪಿಸುವಂಥ ಅಧಿಕಾರಿಗಳನ್ನು ಹಾಕಿ, ಅವರಿಂದ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಇವೊತ್ತು ತಮಗೆ ಬೇಕಾದ ಅಧಿಕಾರಿಗಳನ್ನು ಹಾಕಿಕೊಂಡಿರುವುದರಿಂದ ತಾಲ್ಲೂಕು ಮಟ್ಟದಲ್ಲಿ ಅಟ್ರಾಸಿಟೀಸ್, ಕರಪ್ಷನ್ ಜಾಸ್ತಿಯಾಗಿದೆ. ನಮ್ಮ ಕಾಲದಲ್ಲಿ ಇರಲಿಲ್ಲ ಎಂದು ನಾನು ಹೇಳುವುದಿಲ್ಲ. ಕಾಂಗ್ರೆಸ್ ಪಕ್ಷದ ಕಾಲದಲ್ಲೂ ಇತ್ತು. ಇವತ್ತು ಮಾನ್ಯ ಮುಖ್ಯಮಂತ್ರಿಗಳು ೧೬ನೇ ಬಜೆಟ್ ಮಂಡನೆ ಮಾಡಿದ್ದಾರೆ. ಇದರಲ್ಲಿ ಸುಮಾರು ೭೫ ಪರ್ಸೆಂಟ್ ಪಾಲು ಅವರಿಗೇ ಹೋಗುತ್ತದೆ. ಅದಕ್ಕಾಗಿ ನಾವು ಇವತ್ತಿನ ದಿವಸ ಈ ಬಗ್ಗೆ ಒಂದು ಚಿಂತನೆಯನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ನಮ್ಮ ಆಡಳಿತ ಸುಧಾರಣೆಯಾಗುತ್ತದೆ. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಇಂತಹ ಅಧಿಕಾರಿಗಳನ್ನು ನೇಮಿಸತಕ್ಕಂಥ ವ್ಯವಸ್ಥೆಯನ್ನು ತಾವು ಏತಕ್ಕೆ ಮಾಡಬಾರದು ? ಇವತ್ತು ತಾವು ಮಾಡುತ್ತಿರುವ ಆಡಳಿತವನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ನಾನು ಮೊನ್ನೆಯ ದಿವಸ ಶ್ರೀಮಾನ್ ಜಾಲಪ್ಪನವರನ್ನು ಒಂದು ಪ್ರಶ್ನೆಯನ್ನು ಕೇಳಿದೆ. ಆದರೆ ಅಧ್ಯಕ್ಷರು ಹೇಳಿದರು ಬಡ್ಜೆಟ್ ಬಂದಾಗ ಮಾತನಾಡಿ ಎಂದು ಅದಕ್ಕೆ ನಾನು ಸುಮ್ಮನಾದೆ. ನಾನು ಸತತವಾಗಿ ಮೂರು ವರ್ಷಗಳಿಂದ ಒಂದು ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆ ಪ್ರಶ್ನೆಗೆ ಇದುವರೆವಿಗೂ ಉತ್ತರ ಬರಲಿಲ್ಲ ಆ ಪ್ರಶ್ನೆಯಾದರೂ ಏನೆಂದರೆ ಅಗ್ರಿಕಲ್ಚರ್ ಡೆಟ್ ರಿಲೀಫ್ ಆಕ್ಟ್ ಕೆಳಗೆ ಈ ಹಿಂದೆ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದಂಥ ದೇವರಾಜ ಅರಸುರವರ ಕಾಲದಲ್ಲಿ ಅಗ್ರಿಕಲ್ಚರ್ ಲೇಬರರ್ಸ್, ಬಡವರು ಯಾರಿದ್ದಾರೋ ಅವರ ವಾರ್ಷಿಕ ಆದಾಯ ೩,೬೦೦ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಅಂತಹವರು ಎಲ್ಲಿಯೋ ಸಾಲ ಮಾಡಿರಲಿ ಆ ಸಾಲವನ್ನು ಮಾಫಿ ಮಾಡಬೇಕೆಂದು ೨೦ ಅಂಶಗಳ ಕಾರ್ಯಕ್ರಮದಲ್ಲಿ ಸೇರಿಸಿದ್ದರು. ಆ ಕೆಲಸವನ್ನು ಕರ್ನಾಟಕ ರಾಜ್ಯದಲ್ಲಿ ಇಂಪ್ಲಿಮೆಂಟ್ ಮಾಡತಕ್ಕಂಥ ಗೋಜಿಗೆ ತಾವು ಇದುವರೆವಿಗೂ ಹೋಗಿಲ್ಲ. ತಾಲ್ಲೂಕು ಮಟ್ಟದಲ್ಲಿ ಒಬ್ಬ ಅಸಿಸ್ಟೆಂಟ್ ಕಮಿಷನರ್ ಸಹ ಈ ಯೋಜನೆಯನ್ನು ಇದುವರೆವಿಗೂ ಇಂಪ್ಲಿಮೆಂಟ್ ಮಾಡಿಲ್ಲ. ಒಬ್ಬ ಅಸಿಸ್ಟೆಂಟ್ ಕಮಿಷನರ್ ಆಗಲಿ, ತಹಶೀಲ್ದಾರ್ ಆಗಲಿ ಈ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಿಲ್ಲ. ಈ ಬಗ್ಗೆ ಸನ್ಮಾನ್ಯ ಮಂತ್ರಿಗಳು ಸಹ ಚಿಂತನೆ ಮಾಡಿಲ್ಲ. ಸನ್ಮಾನ್ಯ ಮಂತ್ರಿಗಳು ಜಿಲ್ಲೆಗಳಿಗೆ ವಿಜಿಟ್ ಹೋದಾಗ ಅಥವಾ ಪ್ರವಾಸ ಹೋದಂತಹ ಕಾಲದಲ್ಲಿ ಈ ಯೋಜನೆಯನ್ನು ರಿವ್ಯೂ ಮಾಡಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡಬೇಕು. ಇದರ ಜೊತೆಗೆ ಪ್ರತಿ ಸಾರಿ ಪ್ರವಾಸ ಹೋದಂತಹ ಕಾಲದಲ್ಲಿ ಎಷ್ಟು ಕೇಸುಗಳು ಇದ್ದವು. ಅವುಗಳಲ್ಲಿ ಎಷ್ಟು ಕೇಸುಗಳನ್ನು ತಾವು ಡಿಸ್‌ಪೋಜ್ ಮಾಡಿದ್ದೀರಿ, ಎಷ್ಟು ಕೇಸುಗಳು ಇನ್ನೂ ಪೆಂಡಿಂಗ್ ಇವೆ ಎನ್ನುವುದನ್ನು ರಿವ್ಯೂ ಮಾಡಬೇಕು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಲಾಗಾಯ್ತು ಈ ಬಡವರ ಕಲ್ಯಾಣ ಕಾರ್ಯಕ್ರಮದ ಬಗ್ಗೆ ಯಾವುದೇ ಚಿಂತನೆಯನ್ನು ತಾವು ಮಾಡಿಲ್ಲ. ಏನು ಆಡಳಿತವನ್ನು ತಾವು ಮಾಡುತ್ತಿದ್ದೀರಿ ? ಯಾರಿಗಾಗಿ ತಾವು ಆಡಳಿತವನ್ನು ಮಾಡುತ್ತಿದ್ದೀರಿ? ಸರ್ಕಾರದವರು ಯಾವುದೋ ಒಂದು ಗೌರ್ನಮೆಂಟ್ ಆರ್ಡರ್ ಹೊರಡಿಸಿ ಅದನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಡುವುದು. ಜಿಲ್ಲಾಧಿಕಾರಿಗಳು ಅದನ್ನು ಸ್ಟೆನ್ಸಿಲ್ ಕಾಪಿ ಮಾಡಿ ಅಸಿಸ್ಟೆಂಟ್ ಕಮಿಷನರ್ಸ್‌ಗೆ ಕಳುಹಿಸಿಕೊಡುವುದು ಅಸಿಸ್ಟೆಂಟ್ ಕಮಿಷನರ್ ಸ್ಟೆನ್ಸಿಲ್ ಮಾಡಿ ತಹಶೀಲ್ದಾರ್‌ಗೆ ಕಳುಹಿಸಿ ಕೊಡುವುದು ಈ ರೀತಿ ಆಡಳಿತ ಮಾಡಿದರೆ ಹೇಗೆ ? ನಿಮ್ಮ ಆಡಳಿತದಿಂದ ಜನರ ಕಲ್ಯಾಣವಾಗುತ್ತದೆಯೋ ? ಯಾರಾದರೂ ಅಧಿಕಾರದಲ್ಲಿ ಇರಲಿ ಅವರ ಕಾಲದಲ್ಲಿ ಒಳ್ಳೆಯ ಸುಧಾರಣೆಯಾಗಬೇಕು. ಅದನ್ನು ಬಿಟ್ಟು ಸುಮ್ಮನೆ ಏನೋ ಒಂದು ರೊಟಿನ್ ಆಗಿ ಕೆಲಸ ಮಾಡಿ ಹೇಗೋ ಒಂದು ಐದು

ವರ್ಷಗಳು ಕಳೆದರೆ ಸಾಕೆಂದು ಇರುವಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಿದರೆ ಹೇಗೆ ? ತಾವು ಕೆಲಸ ಮಾಡುತ್ತಿರುವ ಪರಿಸ್ಥಿತಿಯನ್ನು ನೋಡಿದರೆ ನನಗೆ ಹಾಗೆ ಅನಿಸುತ್ತದೆ. ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತಾವು ಒತ್ತಾಸೆಯನ್ನು ಕೊಡುತ್ತಿಲ್ಲ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಅಸರ್ಟ್ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಪ್ರಭಾವಶಾಲಿ ಕೋಮುಗಳ ಕೈಯಲ್ಲಿ ಸಿಕ್ಕಿಹಾಕಿ ಕೊಂಡಿದ್ದಾರೆ. ಅವರು ಬಡವರ ಬಗ್ಗೆ ಏನಾದರೂ ಒಂದು ಕಲ್ಯಾಣ ಕಾರ್ಯಕ್ರಮವನ್ನು ಮಾಡ ಬೇಕೆಂದು ಹೊರಟರೆ ಅದಕ್ಕೆ ನಾನಾ ರೀತಿಯ ಪ್ರಭಾವಗಳು ಬರುತ್ತವೆ. ಅವರ ಮೇಲೆ ಶಾಸಕರು ಒತ್ತಡ ತರುತ್ತಾರೆ. ಶಾಸಕರು ಏನೇ ಹೇಳಲಿ ಅದೂ ಅವರ ಪಕ್ಷದ ಶಾಸಕರು ಆ ಕೆಲಸವನ್ನು ಮಾಡು ತ್ತಾರೆ. ಅದು ಸರಿ ಇಲ್ಲದಿರಲಿ ಸರಿ ಇರಲಿ. ಶಾಸಕರು ಅವರ ಪಕ್ಷದವರು ಹೇಳಿದರೆ ಸಾಕು...

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ಪ್ರಭಾವಶಾಲಿ ಕೋಮುಗಳು ಎಂದರೆ ಯಾವುವು ? ದಯಮಾಡಿ ಸ್ವಲ್ಪ ಹೇಳಿದರೆ ನಾವು ಸಹ ತಿಳಿದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅದು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಬಡವರ ದುರಾದೃಷ್ಟ. ಪಾಪ ತಾವು ಇನ್ನು ಪ್ರಭಾವಶಾಲಿ ಕೋಮುಗಳು ಎಂದರೆ ಯಾರು ಎಂದು ತಿಳಿದು ಕೊಳ್ಳದಿರುವುದು ಬಹಳ ದುಃಖದ ಸಂಗತಿ. ಪ್ರಭಾವ ಶಾಲಿ ಕೋಮುಗಳೆಂದರೆ ಯಾವ ಕೋಮಿನಲ್ಲಿ ನೂರಕ್ಕೆ ಎಂಬತ್ತು ಭಾಗದಷ್ಟು ಜನರು ಲ್ಯಾಂಡ್‌ಲಾರ್ಡ್ಸ್‌ಗಳಾಗಿ ಆಗಿರುತ್ತಾರೋ ಯಾರು ಹಣವಂತ ರಾಗಿರುತ್ತಾರೋ, ಯಾರು ಬಡ್ಡಿ ವ್ಯವಹಾರ ಮಾಡುತ್ತಾರೋ, ಯಾರು ರಾಜಕೀಯವಾಗಿ ಮುನ್ನಡೆದಿರುತ್ತಾರೋ ಅವರು ಇವತ್ತು ಪ್ರಭಾವಶಾಲಿಗಳು...

ಶ್ರೀ ಎಸ್. ಆರ್. ಲಕ್ಷ್ಮಯ್ಯ.— ರಾಜಕೀಯವಾಗಿ ಮುನ್ನಡೆಯುವುದು ದೈವದತ್ತವಾಗಿ ಬಂದಿರುವುದು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೌದು...

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ರಾಜಕೀಯವಾಗಿ...

ಶ್ರೀ ಎ. ಲಕ್ಷ್ಮೀಸಾಗರ್.—ದಯಮಾಡಿ ತಾವು ಯಾರು ಇಂಟರ್‌ಫಿಯರೆನ್ಸ್ ಮಾಡಬೇಡಿ. ಮಾನ್ಯ ವಿರೋಧಪಕ್ಷದ ಉಪನಾಯಕರು ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ...

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ನಮ್ಮ ನಾಯಕರೇ ಅವರು. ಅವರ ಮೇಲೆ ನಮಗೆ ಪ್ರೀತಿ ಇದೆ. ವಿಶ್ವಾಸ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಗೊತ್ತು ನಮಗೆ ನಿಮಗೆ ಅವರ ಮೇಲೆ ಎಷ್ಟು ಪ್ರೀತಿ ಇದೆ ಎಂದು. ಅವರನ್ನು ಬಿಟ್ಟರೆ ನಿಮಗೆ ಬೇರೆ ಯಾರು ಗತಿ ? ಅವರನ್ನು ಅತ್ತು ಕರೆದು ಬರಮಾಡಿ ಕೊಂಡಿದ್ದೀರಿ.

ಅಧ್ಯಕ್ಷರು.—ಇಂಟರ್‌ಫಿಯರೆನ್ಸ್ ಬೇಡ. ಅದು ಏನೇನೋ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾವಾಗಲೂ ಈ ರೀತಿ ರನ್ನಿಂಗ್ ಕಾಮೆಂಟರಿ ಆದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ಯಾರು ಪ್ರಭಲ ಕೋಮಿನವರು ಎಂದು ಗೊತ್ತಾಯಿತು. ಅವರು ಎದ್ದೆದ್ದು ಮಾತನಾಡುವುದನ್ನು ನೋಡಿದರೆ ಬಹುಶಃ ಅವರೇ ಇರಬಹು ದೆಂದು ಕಾಣುತ್ತದೆ. (ಶ್ರೀ ಎಸ್. ಆರ್. ಲಕ್ಷ್ಮಯ್ಯನವರನ್ನು ಉದ್ದೇಶಿಸಿ) ನಾನು ಹೇಳಿದ್ದರ ಅರ್ಥ ಏನೆಂದರೆ, ಸೋಶಿಯಲ್ ಜಸ್ಟೀಸ್‌ನ್ನು ಮತ್ತು ರಾಜಕೀಯ ಅಧಿಕಾರವನ್ನು ಎಲ್ಲಾ ಸರ್ವೇ ಸಾಮಾನ್ಯ ಜನರಲ್ಲಿ ಹಂಚತಕ್ಕ ಕೆಲಸ ಮಾಡಬೇಕಾದರೆ ಕೆಲವು ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ, ಯಾರು ಬಲವಂತರಾಗಿದ್ದಾರೆ, ಯಾರು ರಾಜಕೀಯವಾಗಿ ಶಕ್ತಿಯುಳ್ಳವರಾಗಿದ್ದಾರೆ, ಅವರು ಗಳು ಸ್ವಲ್ಪ ಮನಸ್ಸು ಮಾಡಿ ಹಿಂದುಳಿದಿರುವವರನ್ನು ಮತ್ತು ಬಡವರನ್ನು ಮೇಲಕ್ಕೆ ಕೈಹಿಡಿದು ಮುಂದೆ ತರಬೇಕಾಗುತ್ತದೆ. ಬಲಶಾಲಿಗಳಾದವರು ಬಡವರನ್ನು ಮುಂದಕ್ಕೆ ತರಬೇಕು. ಅಮೆರಿಕಾ ಮತ್ತು ರಷ್ಯಾ ದೇಶಗಳು ಬಲಶಾಲಿ ರಾಷ್ಟ್ರಗಳು. ಆ ರಾಷ್ಟ್ರಗಳು ಬಡ ರಾಷ್ಟ್ರಗಳನ್ನು ಕ್ಯಾಪ್ಚರ್

ಮಾಡಿಕೊಂಡರೆ ಅದನ್ನು ನಾವು ಸಮರ್ಥನೆ ಮಾಡುವುದಕ್ಕಾಗುತ್ತದೆಯೇ ? ಕ್ಯಾಪ್ಚರ್ ಮಾಡುವ ಬದಲು ಸಹಾಯ ಮಾಡಿದರೆ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಅಂದರೆ, ನಮ್ಮ ಸಂವಿಧಾನದ ಪ್ರಕಾರ ನಮ್ಮ ಒಂದು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಾವು ಬಡವರನ್ನು ಮೇಲೆ ಎತ್ತಬೇಕು. ಆರ್ಥಿಕವಾಗಿ ದುರ್ಬಲರಾಗಿರುವವರಿಗೆ, ಸಾಮಾಜಿಕವಾಗಿ ದುರ್ಬಲರಾಗಿರುವವರಿಗೆ ಮೇಲೆ ಎತ್ತತಕ್ಕಂಥ ಧ್ಯೇಯವನ್ನು ನಾವು ಇಟ್ಟುಕೊಂಡಿದ್ದೇವೆ. ಆ ಗುರಿಯನ್ನು ಸಾಧಿಸಬೇಕಾದರೆ ಈ ಕೆಲಸವನ್ನು ನಾವು ಮಾಡಬೇಕಾಗುತ್ತದೆ ಈ ಕೆಲಸ 4 ವರ್ಷಗಳಲ್ಲಿ ಆಗಿಲ್ಲ, ಆಗುತ್ತಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಪ್ರಭಾವಶಾಲಿ ಕೋಮುಗಳು ಬಡವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಮಾಡುವ ಪ್ರೋಗ್ರಾಂಗಳು ಮತ್ತು ಪಾಲಿಸಿಗಳೆಲ್ಲಾ ಪೇಪರ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ರೂಪದಲ್ಲಿ ಇದೆಯೇ ಹೊರತು ಜಾರಿಯಲ್ಲಿ ಇಲ್ಲ. ಅವರ ಕಮಿಟ್‌ಮೆಂಟ್ ಬರೀ ಪಬ್ಲಿಕ್ ಭಾಷಣದಲ್ಲಿ ಇರುತ್ತದೆ. ಆದರೆ ಜಾರಿಯಲ್ಲಿ ತರತಕ್ಕಂಥ ಕೆಲಸ ಮಾಡಿಲ್ಲ. ನಿನ್ನೆ ತಾನೇ ಈ ವಿಷಯ ಸದನದಲ್ಲಿ ಬಂದಿತ್ತು ಅಧ್ಯಕ್ಷರೇ, ಷೆಡ್ಯೂಲ್ಡ್ ಕ್ಯಾಸ್ಟ್ ಮೇಲೆ ಆಗತಕ್ಕಂಥ ಅನ್ಯಾಯಗಳು ಹೋದ ವರ್ಷ ನಡೆದಿದ್ದಕ್ಕಿಂತ ಈ ವರ್ಷ ಜಾಸ್ತಿಯಾಗಿದೆಯೆಂದು ಮಾನ್ಯ ಗೃಹ ಸಚಿವರಾದ ರಾಚಯ್ಯನವರೇ ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಇವರ ಆಡಳಿತದಲ್ಲಿ ಬಿಗಿ ಇಲ್ಲ. ಬಡವರಿಗೆ ರಕ್ಷಣೆ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಜಿಲ್ಲೆಯ ಮಟ್ಟದಲ್ಲಿ ಹಳ್ಳಿಯ ಮಟ್ಟದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ರಕ್ಷಣೆಯನ್ನು ಇವರು ಕೊಡುತ್ತಿಲ್ಲ. ನೀವು ತತ್ವನಿಷ್ಠರಾಗಿ ಬಡವರ ರಕ್ಷಣೆ ಮಾಡುತ್ತೀರೆಂದು ಜನತೆ ಅಧಿಕಾರ ಕೊಟ್ಟಿದ್ದಾರೆ. ಮೊದಲು ಇಷ್ಟು ಅಟ್ರಾಸಿಟಿಗಳು ಆಗುತ್ತಿರಲಿಲ್ಲ. ಏಳು ಸಾವಿರಕ್ಕಿಂತಲೂ ಹೆಚ್ಚಿನ ಕೇಸ್‌ಗಳನ್ನು ಮಾನ್ಯ ರಾಚಯ್ಯನವರು ಓದಿ ಹೇಳಿದರು. ಮೊದಲು ಈ ಪ್ರಮಾಣದಲ್ಲಿ ಆಗುತ್ತಿರಲಿಲ್ಲ. ಅಟ್ರಾಸಿಟಿಯ ಪ್ರಮಾಣ ಕಮ್ಮಿ ಇತ್ತು. ಜನರಿಗೆ ರಕ್ಷಣೆ ಕೊಡುವುದರಲ್ಲಿ ಸಂಪೂರ್ಣವಾಗಿ ಈ ಸರ್ಕಾರ ವಿಫಲಗೊಂಡಿದೆ. ಮಾನ್ಯ ಮುಖ್ಯ ಮಂತ್ರಿಗಳು ಈ ಕಡೆ ಲಕ್ಷ್ಯ ಕೊಟ್ಟಿಲ್ಲ. ಅಟ್ರಾಸಿಟಿಗಳ ಬಗ್ಗೆ ಮತ್ತು ಆಡಳಿತದ ಬಗ್ಗೆ ಮಾತನಾಡುವಾಗ ಮುಖ್ಯ ಮಂತ್ರಿಯವರು ಯಾವಾಗಲೂ ಬೇರ ರಾಜ್ಯಗಳ ಕಂಪಾರಿಸನ್ ಮಾಡುತ್ತಾರೆ. ಬಿಹಾರ್ ರಾಜ್ಯದಲ್ಲಿ ಇಷ್ಟು ಆಗಿದೆ, ಉತ್ತರ ಪ್ರದೇಶದಲ್ಲಿ ಇಷ್ಟಾಗಿದೆ, ಮಧ್ಯ ಪ್ರದೇಶದಲ್ಲಿ ಇಷ್ಟಾಗಿದೆ ಎಂದು ಹೇಳುತ್ತಾರೆ. ಈ ರಾಜ್ಯದಲ್ಲಿ ನಿಮ್ಮ ಸರ್ಕಾರ ಬಂದ ಮೇಲೆ ಏನು ಮಾಡಿದ್ದೀರಿ ? ಎಂಬುದು ಇಂಪಾರ್ಟೆಂಟೇ ಹೊರತು ಬೇರೆ ಕಡೆ ಏನಾಗಿದೆ ಎನ್ನುವುದು ಇಂಪಾರ್ಟೆಂಟ್ ಅಲ್ಲ, ನಮ್ಮ ರಾಜ್ಯದ ಹಿಂದಿನ ಸರ್ಕಾರಗಳದ್ದೇ ಹೋಲಿಸಿ ನೋಡಿ. ಮಾನ್ಯ ನಿಜಲಿಂಗಪ್ಪನವರ ಸರ್ಕಾರದಲ್ಲಿ ದೇವರಾಜ ಅರಸರ ಸರ್ಕಾರದಲ್ಲಿ ಗುಂಡೂರಾವ್‌ರವರ ಸರ್ಕಾರದಲ್ಲಿ, ವೀರೇಂದ್ರ ಪಾಟೀಲರ ಸರ್ಕಾರಗಳನ್ನು ನಿಮ್ಮ ಸರ್ಕಾರದ ಜೊತೆಗೆ ಹೋಲಿಸಿ ನೋಡಿ. ಅದು ಬಿಟ್ಟು ಬಿಹಾರದಲ್ಲಿ ನೋಡಿ, ಯು.ಪಿ. ಯಲ್ಲಿ ನೋಡಿ, ಮಧ್ಯಪ್ರದೇಶದಲ್ಲಿ ನೋಡಿ ಎಂದು ಹೇಳಬೇಡಿ ಈ ರಾಜ್ಯದಲ್ಲಿ ಹಿಂದೆ ಎಂದೂ ಇಷ್ಟು ಮಟ್ಟಿಗೆ ಅಟ್ರಾಸಿಟಿಗಳು ಆಗುತ್ತಿರಲಿಲ್ಲ. ನೀವು ಜನರಿಗೆ ತರಾತುರಿಯಲ್ಲಿ ಭಾಷಣ ಕೊಟ್ಟು ಸಮಾಧಾನ ಮಾಡುವುದು ಸರಿಯಲ್ಲ. ಖಂಡಿತವಾಗಿ ನೀವು ಜನರನ್ನು ಮೋಸ ಮಾಡುತ್ತಿದ್ದೀರಿ. ನೀವೇ ನಿಮಗೆ ಮೋಸ ಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಕಾನ್ಷಿಯಸ್‌ನ್ನು ನೀವೇ ನೋಡಿಕೊಳ್ಳಿ. ಡಿಫೆಂಡ್ ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ. ನಿಮ್ಮ ಆಡಳಿತದಲ್ಲಿ ಮರ್ಡರ್‌ಗಳು ಹೆಚ್ಚಿಗೆ ಆಗುತ್ತಿವೆ. ನಿಮ್ಮ ಆಡಳಿತದಲ್ಲಿ ಡಕಾಯಿಟ್ಸ್ ಹೆಚ್ಚಿಗೆ ಆಗುತ್ತಿವೆ. ನಿಮ್ಮ ಆಡಳಿತದಲ್ಲಿ ಥೆಫ್ಟ್ ಕೇಸಸ್ ಜಾಸ್ತಿಯಾಗುತ್ತಿವೆ. ನಿಮ್ಮ ಆಡಳಿತದಲ್ಲಿ ರಾಬರಿ ಹೆಚ್ಚಿಗೆ ನಡೆಯುತ್ತಿವೆ. ನೀವು ಕೊಟ್ಟಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ವರ್ಷೇ ವರ್ಷೇ ಹೆಚ್ಚು ಅಟ್ರಾಸಿಟಿಗಳು ಏರುತ್ತಿವೆಯೆಂದು ಗೊತ್ತಾಗುತ್ತದೆ. ಹೀಗೇ ಆದರೆ ಹಳ್ಳಿಯಲ್ಲಿರತಕ್ಕಂಥ ಬಡ ಜನರಿಗೆ ನಿಮ್ಮ ಆಡಳಿತದಿಂದ ಏನು ರಕ್ಷಣೆ ಇದೆ ?

ಈ ಮಾತನ್ನು ನಾನು ಏಕೆ ಹೇಳುತ್ತಾ ಇದ್ದೇನೆ ಅಂದರೆ, ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ಸಾಮಾನ್ಯವಾಗಿ ಒಬ್ಬ ಎಸ್.ಡಿ.ಸಿ, ಎಫ್ ಡಿ.ಸಿ.ಯ ಟ್ರಾನ್ಸ್‌ಫರ್ ಆಗಬೇಕೆಂದರೂ ಮುಖ್ಯ ಮಂತ್ರಿಗಳವರ ಪರ್ಮಿಷನ್ ಬೇಕಾಗಿದೆ. ಆಡಳಿತ ನಡೆಸತಕ್ಕಂಥವರು ಇವರು, ಮತ್ತು ಎಲ್ಲಾ ಸದಸ್ಯರುಗಳು ಕೂಡ, ನಮ್ಮನ್ನೂ ಸೇರಿಸಿಕೊಂಡು, ಅಧಿಕಾರಿಗಳು ಕೆಟ್ಟವರು, ಕೆ. ಎ. ಎಸ್. ಅಧಿಕಾರಿಗಳು, ಐ.ಎ.ಎಸ್. ಅಧಿಕಾರಿಗಳು, ಕೆಟ್ಟವರು ಎಂದು ಹೇಳುತ್ತಾ ಇದ್ದೇವೆ. ಎಲ್ಲಾ ಅಧಿಕಾರಿಗಳು ಕೆಟ್ಟವರು ಅಂದು ಹೇಳುವುದಾದರೆ, ನಾನು ಕೇಳುತ್ತೇನೆ ನಾವು ಯಾರು ಕೆಟ್ಟವರು ಇದ್ದಾರೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದನ್ನು ಬಿಟ್ಟು ಎಲ್ಲರೂ ಕೆಟ್ಟವರು ಎಂದು ಹೇಳುವುದು ಸರಿಯೇ ?

ಅಲ್ಲದಿದ್ದರೆ ಅಂತಹ ಕೆಟ್ಟವರು ಅನಿಸಿಕೊಳ್ಳುವ ಅಧಿಕಾರಿಗಳನ್ನು ಸುಧಾರಣೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಈಗ ಏನಾಗಿದೆ ಎಂದರೆ ಯಾವುದೇ ತಪ್ಪು ಮಾಡಿದರೆ, ಅದಕ್ಕೆ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುತ್ತಾರೆಯೋ ಹೊರತು, ಇದು ನಮ್ಮ ಸರಕಾರದ ಜವಾಬ್ದಾರಿಯೂ ಕೂಡ ಆಗಿದೆ ಎನ್ನತಕ್ಕಂಥ ಮಾತು ಬರುವುದಿಲ್ಲ. ಯಾರು ಆಡಳಿತವನ್ನು ನಡೆಸುತ್ತಿದ್ದಾರೋ ಅವರು ಇದಕ್ಕೆ ಜವಾಬ್ದಾರರಾಗುತ್ತಾರೆ. ಅಧಿಕಾರಿಗಳು ಆಡಳಿತ ಮಾಡುವವರು ಏನು ಆರ್ಡರ್ ಕೊಡುತ್ತಾರೆ ಅದನ್ನು ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಮೊನ್ನೆ ಮೇಲ್ಮನೆಯಲ್ಲಿ ಗೃಹ ಸಚಿವರಾದ ಮಾನ್ಯ ರಾಚಯ್ಯನವರು ಒಂದು ಸ್ಟೇಟ್‌ಮೆಂಟ್‌ನ್ನು ತುಮಕೂರಿನ ಎಸ್. ಪಿ. ಯವರ ಬಗ್ಗೆ ಕೊಟ್ಟಿದ್ದಾರೆ. ನಿಮ್ಮ ಆರ್ಡರ್ ತಪ್ಪಿದ್ದರೂ ಕೂಡ ಅದನ್ನು ಜಾರಿಗೆ ತರತಕ್ಕಂಥದ್ದು ಅವರ ಕರ್ತವ್ಯ. ಅವನು ನೀವು ಕೊಟ್ಟ ಆರ್ಡರನ್ನು ಇಂಪ್ಲಿಮೆಂಟ್ ಮಾಡುತ್ತಾನೆ. ರಕ್ಷಣೆ ಕೊಡಿ ಎಂದು ನೀವು ಹೇಳಿದರೆ ರಕ್ಷಣೆ ಕೊಡುತ್ತಾನೆ, ಗುಂಡು ಹಾರಿಸಿ ಎಂದು ಹೇಳಿದರೆ ಗುಂಡು ಹಾರಿಸುತ್ತಾನೆ, ಅಥವಾ ನೀವು ಹೇಳಿದ ಯಾವುದೇ ನಿರ್ದೇಶನವನ್ನು ಅವನು ಪಾಲಿಸುತ್ತಾನೆ. ಇಲ್ಲಿ ನಿಮ್ಮ ಆಡಳಿತದ ವೈಫಲ್ಯತೆಯೇ ಎದ್ದು ಕಾಣುತ್ತದೆ. ಅದಕ್ಕೆ ಇತ್ತೀಚೆಗೆ ನಡೆದು ಹೋದ ಎಷ್ಟೋ ಘಟನೆಗಳನ್ನು ಉದಾಹರಣೆಯಾಗಿ ಹೇಳಬಹುದು. ಪಾವಗಡದಲ್ಲಿ ಏನಾಯಿತು ? ತುಮಕೂರು, ಬೆಂಗಳೂರು, ಮೈಸೂರು, ಇಲ್ಲೆಲ್ಲಾ ಏನಾಯಿತು ? ಇಂತಹ ನೂರಾರು ಘಟನೆಗಳನ್ನು ನಾವು ತೋರಿಸಬಹುದು. ಇಲ್ಲಿ ನಾವು ಗಮನಿಸಬೇಕಾದುದು ಆಡಳಿತ ನಡೆಸತಕ್ಕಂಥಹವರು ಹೇಗೆ ಇರಬೇಕೆಂಬುದು ಆಗಿದೆ. ಅದಕ್ಕಾಗಿ ದಿವಂಗತ ಡಾಕ್ಟರ್ ಅಂಬೇಡ್ಕರ್‌ರವರು ಹೇಳಿದ್ದರು "ಸೇವಾ ನಿಯಮಗಳು, ಅಧಿಕಾರಿ ವರ್ಗಗಳು, ಎಷ್ಟೇ ಒಳ್ಳೆಯದು ಇದ್ದರೂ ಕೂಡ ಅದನ್ನು ನಡೆಸಿಕೊಂಡು ಹೋಗತಕ್ಕವರು ಸರಿಯಾಗಿ ಇಲ್ಲದೇ ಹೋದರೆ ಅದು ಕೆಟ್ಟು ಹೋಗುತ್ತದೆ, ಆದರಿಂದ ಪ್ರಯೋಜನವಿಲ್ಲ. ಹಾಗೆಯೇ ನಾವುಗಳು ಕಾನೂನನ್ನು ಎಷ್ಟೇ ಒಳ್ಳೆಯದು ಮಾಡಿದ್ದರೂ ಕೂಡ ಆಚರಣೆಯಲ್ಲಿ ತರತಕ್ಕಂಥ ಜನ ಸರಿಯಾಗಿ ಇಲ್ಲದೇ ಹೋದರೆ ಅಧಿಕಾರಿಗಳನ್ನು ಬೈದು ಕೊಂಡರೆ ಏನು ಪ್ರಯೋಜನ ? ಆದರಿಂದಾಗಿ ನಾವು ಚೆನ್ನಾಗಿ ಇದ್ದರೆ ಅವರು ಚೆನ್ನಾಗಿ ಇರುತ್ತಾರೆ, ಸರಿಯಾಗಿ ಇರುತ್ತಾರೆ. ಅಧಿಕಾರಿಗಳು ತಪ್ಪು ಮಾಡಿದ್ದರೆ, ನಿರ್ದಾಕ್ಷಿಣ್ಯವಾಗಿ ಅವರನ್ನು ತೆಗೆದುಹಾಕಿ. ಅದನ್ನು ಬಿಟ್ಟು, ಅಧಿಕಾರಿಗಳು ಹಾಗೆ ಮಾಡುತ್ತಾರೆ, ಹೀಗೆ ಮಾಡುತ್ತಾರೆ ಎಂದು ಹೇಳುತ್ತಾ ಇರತಕ್ಕಂಥಾದ್ದು ಸರಿಯಲ್ಲ. ತಪ್ಪು ಮಾಡಿದವರನ್ನು ಶಿಕ್ಷಿಸಬೇಕು. ಗಂಗಾವತಿಯ ಶಾಸಕರೊಬ್ಬರ ಅನುಭವವನ್ನು ಮಾನ್ಯ ವೆಂಕಟರಾಮಯ್ಯನವರು ಹೇಳಿದರು. ಅಲ್ಲಿಯ ಶಾಸಕರು ಬಿ.ಡಿ.ಓ. ದವರಿಗೆ ಪತ್ರ ಬರೆದು ನನ್ನ ಕ್ಷೇತ್ರದಲ್ಲಿನ ಜನರಿಗೆ ಅರ್ಹರಾದವರಿಗೆ ಇಷ್ಟು ಮನೆಗಳನ್ನು ಕೊಡಿ, ಆ ವಿಷಯದಲ್ಲಿ ರಾಜಕೀಯ ಮಾಡಬಾರದು. ಅರ್ಹರಾದವರಿಗೆ ಕೊಡಬೇಕು ಎಂದು ಅರ್ಜಿ ಕೊಟ್ಟರೆ, ಆ ಅಧಿಕಾರಿ ಅದಕ್ಕೆ ಉತ್ತರಿಸಿ, ಮೊದಲು ನೀವು ಸರಿಯಾಗಿ ಬರೆಯುವುದನ್ನು ರೂಢಿಸಿ ಕೊಳ್ಳಿ ಎಂದು ಬರೆದಿದ್ದಾನೆ. ಅದರಲ್ಲಿ ತನ್ನ ಸಹಿ ಮತ್ತು ಶಿಕ್ಕ ಕೂಡ ಹಾಕಿದ್ದಾನೆ. ಇದು ಅಧಿಕಾರಿಯ ತಪ್ಪು. ಒಬ್ಬ ಶಾಸಕರ ಪತ್ರಕ್ಕೆ ಈ ರೀತಿಯ ಉದ್ಧಟತನದ ಉತ್ತರ ಕೊಡುವುದು ಸರಿಯಲ್ಲ, ಇಂತಹ ವರ್ತನೆಯನ್ನು ಇನ್ನೊಬ್ಬ ಅಧಿಕಾರಿ ಮಾಡಬಾರದು. ಅಂತಹವರನ್ನು ಡಿಸ್‌ಮಿಸ್ ಮಾಡಿ. ಇದನ್ನು ನೋಡಿದರೆ, ಅವನ ಹಿಡಿತದಲ್ಲಿ ನೀವು ಇದ್ದೀರಿ, ನಿಮ್ಮ ಹಿಡಿತದಲ್ಲಿ ಅವನು ಇಲ್ಲ ಎಂದು ತೋರುತ್ತದೆ.

ನೀವುಗಳು ಡೆಪ್ಯುಟಿ ಕಮಿಷನರ್‌ಗಳನ್ನು ಮೂರು ತಿಂಗಳಿಗೊಮ್ಮೆ ಇಲ್ಲಿ ಕರೆಯುತ್ತಾ ಇರುತ್ತೀರಿ ಕಾನ್‌ಫರೆನ್ಸ್ ಮಾಡುತ್ತಾ ಇರುತ್ತೀರಿ. ಅಂತಹ ಸಮಯದಲ್ಲಿ ನಿಮ್ಮ ಆದೇಶವನ್ನು ಎಷ್ಟರಮಟ್ಟಿಗೆ ಅವರು ಜಾರಿಗೆ ತಂದಿದ್ದಾರೆ ಎಂದು ನೋಡಬೇಕು. ಅದನ್ನು ರಿವ್ಯೂ ಮಾಡಬೇಕು. ಅಧಿಕಾರಿಗಳಲ್ಲಿ ಒಂದು ಕರ್ತವ್ಯ ಮನೋಭಾವನೆಯನ್ನು ಹುಟ್ಟಿಸುವಂತಹ ವಾತಾವರಣವನ್ನು ಸೃಷ್ಟಿಸಬೇಕಾಗಿತ್ತು. ಇವೊತ್ತು ನಿಮ್ಮ ಅಧಿಕಾರಿಗಳಿಗೆ ಆ ಒಂದು ರೀತಿಯ ಹೆದರಿಕೆ ಇದ್ದಿದ್ದರೆ ಆ ಬಿ.ಡಿ.ಓ., ಎಂ.ಎಲ್.ಎ. ಯವರಿಗೆ ಈ ರೀತಿಯಾದ ಉತ್ತರವನ್ನು ಕೊಡತಕ್ಕಂತಹ ಹಂತಕ್ಕೆ ಮುಟ್ಟುತ್ತಿರಲಿಲ್ಲ. ಆಡಳಿತವನ್ನು ಚೆನ್ನಾಗಿ ನಡೆಸತಕ್ಕಂಥ ಜವಾಬ್ದಾರಿ ನಿಮ್ಮ ಮೇಲೆ ಇದೆ. ಆದರೆ ನೀವು ಆಡಳಿತ ನಡೆಸುವುದರಲ್ಲಿ ವಿಫಲರಾಗಿದ್ದೀರಿ ಎಂಬ ಮಾತನ್ನು ನಾನು ಹೇಳುತ್ತಾ ಇದ್ದೇನೆ.

೯-೦೫ ಎ.ಎಂ.

ಎರಡನೆಯದಾಗಿ ಒಳ್ಳೆಯ ರೀತಿಯಲ್ಲಿ ಆಡಳಿತ ನಡೆಯಬೇಕಾದರೆ ಈಗಿರುವ ಡಿಸ್ಟ್ರಿಕ್ಟ್‌ಗಳನ್ನು ರೀಆರ್ಗನೈಜ್ ಮಾಡುವ ಅವಶ್ಯಕತೆ ಇದೆ. ಇದರ ಬಗ್ಗೆ ನಾನು ಒಂದು ಅಂಶವನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ತಾಲ್ಲೂಕುಗಳು ಕೂಡ ಕಂಪ್ಯಾಕ್ಟಾಗಿರಬೇಕು. ನಿಮ್ಮ ಪ್ರೋಗ್ರಾಮ್ ಇಂಪ್ಲಿಮೆಂಟ್ ಮಾಡುವುದು ಮತ್ತು ಲಾ ಅಂಡ್ ಆರ್ಡರ್ ಸುವ್ಯವಸ್ಥಿತವಾಗಿ ಆಗಬೇಕಾದರೆ ಡಿಸ್ಟ್ರಿಕ್ಟ್ ರೀಆರ್ಗನೈಜೇಷನ್ ತಾಲ್ಲೂಕು ಮಟ್ಟದಲ್ಲಿ ಹಾಗೂ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಆಗುವುದು ಬಹಳ ಅವಶ್ಯಕ. ಇದರ ಬಗ್ಗೆ ಹಿಂದೆ ವಾಸುದೇವ್ ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟರು. ರೀಸೆಂಟಾಗಿ ಹುಂಡೇಕರ್ ಕಮಿಟಿ ಅವರೂ ಕೂಡ ವರದಿಯನ್ನು ಒಪ್ಪಿಸಿದ್ದಾರೆ. ಈ ಡಿಸ್ಟ್ರಿಕ್ಟ್ ರೀಆರ್ಗನೈಜೇಷನ್ ಆಗಬೇಕೆಂಬ ವಾದ ಇವತ್ತಿನದಲ್ಲ, ಸುಮಾರು ೩೫ ವರ್ಷಗಳಿಂದ ಇದೆ, ತಮಗೆ ಗೊತ್ತಿದ್ದ ಹಾಗೆ ಇಡೀ ರಾಜ್ಯದಲ್ಲಿ ಬಿಜಾಪುರ ಎಲ್ಲದಕ್ಕಿಂತ ದೊಡ್ಡ ಜಿಲ್ಲೆ, ತದನಂತರ ಗುಲ್ಬರ್ಗ, ಧಾರವಾಡ, ಬೆಳಗಾಂ ಆಮೇಲೆ ಮೈಸೂರು ಹೀಗೆ ನಾಲ್ಕೈದು ದೊಡ್ಡ ಜಿಲ್ಲೆಗಳಿವೆ. ಈ ಕಡೆಗಳಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿ ಇರಬೇಕಾದರೆ ನಾವು ಜಿಲ್ಲೆಗಳನ್ನು ಸರಿಯಾಗಿ ವಿಭಜನೆ ಮಾಡಿ ಸರಿಯಾದ ವ್ಯವಸ್ಥೆ ಮಾಡಬೇಕು. ಇದಕ್ಕೆಲ್ಲಾ ಎಕ್ಸ್‌ಪೆಂಡೀಚರ್, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಬರುತ್ತದೆಂದರೆ ನಾವು ಮಾಡುವ ಪ್ರೋಗ್ರಾಮ್‌ಗಳು ಯಾವುದೂ ನಮ್ಮ ಜನರಿಗೆ ತಲುಪುವುದಿಲ್ಲ. ನಮ್ಮ ಕಡೆ ಎಷ್ಟೋ ಹಳ್ಳಿಗಳಿಗೆ ನಾವು ಹೋಗಿ ತಲುಪಲು ವೆಹಿಕಲ್ಸ್, ಕೆಎಸ್‌ಆರ್‌ಟಿಸಿ ಇಲ್ಲ ಯಾವುವೂ ಇಲ್ಲ. ಇದರ ಬಗ್ಗೆ ಮೊದಲನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲೇ ಚಿಂತನೆ ಮಾಡಿ ಹೇಳಿದ್ದಾರೆ. ತದನಂತರ ಇದಕ್ಕೆ ಪುಷ್ಟಿಯಾಗಿ ಹಿಂದಿನ ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್‌ನವರೂ ಕೂಡ ಹೇಳಿದ್ದಾರೆ ಅಡ್ಮಿನಿಸ್ಟ್ರೇಷನ್ ಕನ್ವೀನಿಯೆಂಟ್‌ಗೋಸ್ಕರ ಜನರ ಹಿತದೃಷ್ಟಿಯಿಂದ ಮತ್ತು ಎಕನಾಮಿಕ್ ಡೆವಲಪ್‌ಮೆಂಟ್‌ಗೋಸ್ಕರ ಇದು ಬಹಳ ಅವಶ್ಯಕ. ಇದನ್ನು ಮಾಡದೇಹೋದರೆ ಅನೇಕ ಜನರಿಗೆ ಸವಲತ್ತುಗಳು ತಲುಪುವುದಿಲ್ಲ. ಇವೊತ್ತಿಗೆ ಸ್ವಾತಂತ್ರ್ಯ ಸಿಕ್ಕಿ ನಮಗೆ ನಲವತ್ತು ವರ್ಷಗಳಾಗಿದ್ದರೂ ಈಗಲೂ ಅನೇಕ ಹಳ್ಳಿಗಳಲ್ಲಿ ಬಡವರ ತಿಪ್ಪೆಗಳನ್ನು ಸಾಹುಕಾರರು ದಬ್ಬಾಳಿಕೆ ಮಾಡಿ ಹೊಡೆದುಕೊಂಡು ಹೋಗುತ್ತಿದ್ದಾರೆ. ಬಡವರಿಗೆ ಒಂದು ಚೀಲ ಜೋಳ ಕೊಟ್ಟು ಎಲ್ಲವನ್ನೂ ಬರೆಯಿಸಿಕೊಳ್ಳುವಂತಹ ಜನರಿದ್ದಾರೆ, ನಾಲ್ಕು ಚೀಲ ಜೋಳ ಕೊಟ್ಟು ಒಂದು ವರ್ಷ ದುಡಿಸಿಕೊಂಡಂತಹ ಜನರಿದ್ದಾರೆ ಇದು ಇನ್ನೂ ಅನೇಕ ಕಡೆಗಳಲ್ಲಿ ನಡೆಯುತ್ತಿದೆ. ಅಲ್ಲಿ ಸಂಪರ್ಕ ಇಲ್ಲ, ಆಡಳಿತ ವ್ಯವಸ್ಥೆ ಇಲ್ಲ ಅನೇಕ ತಹಸೀಲ್ದಾರ್‌ಗಳು ಅಲ್ಲಿಗೆ ಹೋಗುವ ಹಾಗೆಯೇ ಇಲ್ಲ, ಅಸಿಸ್ಟೆಂಟ್ ಕಮೀಷನರ್‌ನವರೂ ಹೋಗುವ ಹಾಗಿಲ್ಲ, ಇನ್ನು ಜಿಲ್ಲಾಧಿಕಾರಿಗಳಂತೂ ಅಲ್ಲಿಗೆ ಹೋಗುವ ಪ್ರಶ್ನೆಯೇ ಬರುವುದಿಲ್ಲ. ಇದಕ್ಕೆಲ್ಲಾ ಸೂಕ್ತ ವ್ಯವಸ್ಥೆ ಮಾಡುವುದು ಬಹಳ ಅವಶ್ಯಕ. ಹಿಂದೆ ಪ್ರಧಾನ ಮಂತ್ರಿಗಳಾಗಿದ್ದಂತಹ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಒಂದು ಮಾತನ್ನು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಆಗುವಾಗ ಅಂದರೆ ದಿನಾಂಕ ೨೭ನೇ ಅಕ್ಟೋಬರ್ ೧೯೬೪ರಲ್ಲಿ ಏನು ಹೇಳಿದ್ದಾರೆಂದರೆ,

> " All too often we think of these things, at the national level and at the state level, while there is neglect or even confusion at the village level. The farmer has now to deal separately with representatives of different Government agencies, each owing allegiance to a Department or ministary at the head quartersof the State or Central Government. The co-ordinattng role which the District officer used to play in the past has been lost. I would suggest to all the Chief Ministers present here today that they should restore to the District Officer, whether he is known as the Collector or the Deputy

Commissioner the status of a co,ordinator of all Governmental activities in the district and confer upon him the responsibility for guiding all the efforts undertaken an behalf of the Government, Central or State ..." ಎಂದು.

ಆಗ ಅವರು ಅರ್ಥಸಚಿವರಾಗಿರಬಹುದು

"...This may well mean splitting up the larger districts into more compact administrative units. This task should be faced as one of urgency. I would like to emphasis this point. Some of the districts for instance in U.P. Bihar and West Bengal are very large indeed. It would be advisable for better administration to break these districts even if it means more expenditure which will be worth while."

ಆಗ ಸ್ಟೇಟ್ ರೀಆರ್ಗನೈಸೇಷನ್ ಅನ್ನು ಅವರು ಸಮರ್ಥನೆ ಮಾಡಿದ್ದಾರೆ. ಹಿಂದೆ ಪ್ಲಾನಿಂಗ್ ಕಮಿಷನ್‌ನಲ್ಲಿ ಇದರ ಬಗ್ಗೆ ಚರ್ಚೆಯಾದಾಗ ಕೂಡ ಹೇಳಿದ್ದಾರೆ, ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರೂ ಕೂಡ ಸಮರ್ಥನೆ ಮಾಡಿದ್ದಾರೆ, ನೀವು ಆ ರೀತಿ ಡಿಸ್ಟ್ರಿಕ್ಟ್ ಅನ್ನು ಕಂಪ್ಯಾಕ್ಟ್ ಆಗಿ ಮಾಡದೇ ಹೋದರೆ ಅಡ್ಮಿನಿಸ್ಟ್ರೇಷನ್ ಅನ್ನು ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ, ಎಷ್ಟೇ ಖರ್ಚಾದರೂ ಕೂಡ ಇದು ಒಳ್ಳೆಯದೆಂದು ಹೇಳಿದ್ದಾರೆ ಈ ಕಂಪಾಕ್ಟ್ ಅನ್ನು ತಾಲ್ಲೂಕುಗಳಿಗೆ, ಡಿಸ್ಟ್ರಿಕ್ಟ್‌ಗಳಿಗೆ ಮಾಡಿದರೆ ನಿಮ್ಮ ಆಡಳಿತವನ್ನು ಹತೋಟಿಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಸರಕಾರ ಕೊಡತಕ್ಕಂತಹ ಬೆನಿಫಿಟ್ ನೇರವಾಗಿ. ಅವರ ಕೈಗೆ ತಲುಪುತ್ತದೆ. ಹಿಂದೆ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಮಂಡ್ಯ ತಾಲ್ಲೂಕಿನಲ್ಲಿ ಅಮೆರಿಕನ್ ಮಹಿಳೆಯೊಬ್ಬಳು ೧೯೫೪ನೇ ಇಸವಿಯಲ್ಲಿ ಬಂದು ಅಲ್ಲಿನ ಹಳ್ಳಿಗಳ ಪರಿಸ್ಥಿತಿಯನ್ನು ನೋಡಿ ಅಭ್ಯಾಸ ಮಾಡಿ ಒಂದು ಪುಸ್ತಕವನ್ನು ಬರೆದಿದ್ದಾಳೆ. ಅಲ್ಲಿರತಕ್ಕಂತಹ ಹರಿಜನರ ಸಮಸ್ಯೆ, ರೈತರ ಸಮಸ್ಯೆ ಮುಂತಾದವುಗಳ ಬಗ್ಗೆ ಮತ್ತೆ ಪುನಃ ಯಾವ ರೀತಿಯಾಗಿ ಅಲ್ಲಿ ಬದಲಾವಣೆಯಾಗಿದೆ ಅವರ ಆರ್ಥಿಕ ಪರಿಸ್ಥಿತಿಯಲ್ಲಿ, ಅವರ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರ ಶೈಕ್ಷಣಿಕ ಪರಿಸ್ಥಿತಿಯಲ್ಲಿ ಎಂಬುದನ್ನು ತಿಳಿದುಕೊಳ್ಳಲು ೧೯೭೦ರಲ್ಲಿ ಮತ್ತೆ ಅದೇ ಹಳ್ಳಿಗಳಿಗೆ ಭೇಟಿ ನೀಡಿ ಆಕೆ ತನ್ನ ಅಭಿಪ್ರಾಯವನ್ನು ಕೊಟ್ಟಿದ್ದಾಳೆ ಅದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಇದನ್ನು ಗಮನಿಸಬೇಕೆಂದು ಅವರಲ್ಲಿ ವಿನಂತಿಸುತ್ತೇನೆ.

" Dr. Scarlett Epstein's study of two villages in Karnataka which she visited in 1954 and again in 1970, entitled ' South India yesterday, today and tomorrow, shows that community development Panchayat raj and even intensive District agricultural programmes all put together have left Halemakkalu (harijans) wholly dependent on rich farmers, whose dominance in wealth, political power and control of local institutions was enhanced by irrigation and development schemes. The rural rich had become richer and the poor poorer. The elite could spend lavishly. But real wages of the poor had fallen their indebtedness to hereditary masters on whose lands they toiled had increased. Economic growth does not

have any connection with social justice. As a result a separate parallel set of co-operatives have to be set up and managed by Government officials to help the small farmer and landless labourer. The intensity of administration in the district has incresed and will go on increasing. Therefore, most Deputy Commissioners prefer small compact districts".

ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಜನರಿಗೆ ಸರಿಯಾದ ಆಡಳಿತ ಕೊಡಬೇಕು. ಬಡವರನ್ನು ಮೇಲಕ್ಕೆ ಎತ್ತತಕ್ಕಂಥಾದ್ದು ನಿಮ್ಮ ಧ್ಯೇಯ ಇದ್ದರೆ ಅದು ಬಹಳ ಅವಶ್ಯಕ ಎಂದು ಹೇಳುತ್ತೇನೆ. ಇದಕ್ಕೆ ಎರಡು ಕಮಿಟಿಗಳು ಇವೆ. ಆದರೆ ಇಲ್ಲಿಯವರೆಗೂ ಇದರ ಬಗ್ಗೆ ಯಾವುದೂ ಇಂಪ್ಲಿಮೆಂಟೇಷನ್ ಆಗಿಲ್ಲ ನಿಮಗೆ ಬೇಕಾಂಥ ಕಾರ್ಯಕ್ರಮಗಳನ್ನು ಇಂಪ್ಲಿಮೆಂಟ್ ಮಾಡಿದ್ದೀರಿ. ಆದರೆ ಜನರಿಗೆ ಯಾವುದು ಅವಶ್ಯಕವಾಗಿ ಬೇಕು, ಯಾವುದು ಸಹಾಯವಾಗುತ್ತದೆ ಅಂಥ ಕಾರ್ಯಕ್ರಮಗಳನ್ನು ಮರೆತು ಹೋಗಿದ್ದೀರಿ. ಇವೊತ್ತಿನ ದಿವಸ ಅವರ ಬಗ್ಗೆ ಏನು ಮಾಡಿದ್ದೀರಿ ಎಂದು ಅವರನ್ನು ಕೇಳುತ್ತೇನೆ. ಇದರ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯ ಕೊಡುವಿರೆಂದು ನಾನು ಭಾವಿಸಿದ್ದೇನೆ. ಒಂದು ವೇಳೆ ಈ ವರ್ಗದವರ ಬಗ್ಗೆ ನೀವು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಹಿಂದುಳಿದ ಭಾಗಗಳಲ್ಲಿ ದೊಡ್ಡ ದೊಡ್ಡ ಜಿಲ್ಲೆಗಳಲ್ಲಿ ಇರತಕ್ಕಂಥ ಈ ವರ್ಗದವರು ಆರ್ಥಿಕವಾಗಿ ಮುಂದೆ ಬರುವುದಕ್ಕೆ ಸಾಧ್ಯವಿಲ್ಲ. ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರು ಮೇಲಕ್ಕೆ ಬರುವುದಕ್ಕೆ ಆಗುವುದಿಲ್ಲ. ಈ ಮಾತನ್ನು ನಾನು ಒಬ್ಬನೇ ಹೇಳುತ್ತಾ ಇಲ್ಲ, ಅನೇಕ ಮಾನ್ಯ ಸದಸ್ಯರೂ ಸಹ ಹೇಳಿದ್ದಾರೆ. ಈಗಾಗಲೇ ನಾನು ಹೇಳಿದ ಹಾಗೆ ೧೯೫೪ ರಲ್ಲಿ ಈ ಒಬ್ಬ ಮಹಿಳೆ ಆ ಹಳ್ಳಿಗಳಲ್ಲಿರತಕ್ಕಂಥ ಸಮಸ್ಯೆಗಳನ್ನು ಸ್ಟಡಿ ಮಾಡಿಕೊಂಡು ಮತ್ತೆ ೧೯೭೦ರಲ್ಲಿ ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಹೀಗೆ ಹೇಳಿದ್ದಾರೆ, ೨೦ ವರ್ಷ ಆದ ಮೇಲೂ ಅವರು ಇದೇ ಗತಿಯಲ್ಲಿ ಇದ್ದಾರೆ ಎಂದು ಹೇಳಿದ್ದಾರೆ, ಇದನ್ನು ನೀವೇ ನೋಡಿ. ಇವೊತ್ತಿನ ದಿವಸವೂ ಅಲ್ಲಿ ಯಾವ ಪರಿಸ್ಥಿತಿ ಇದೆ ಎನ್ನುವುದನ್ನು ನೋಡಿ. ಆದುದರಿಂದ ನಾನು ಹೇಳುವುದು ಯಾವುದು ಅವಶ್ಯಕ ಇದೆ, ಅದರ ಕಡೆಗೆ ಅವರು ಈಗಾಲಾದರೂ ಸಹ ಗಮನ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

ಇನ್ನು ಎರಡನೆಯದಾಗಿ, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಹೈಪವರ್ ಕಮಿಟಿಯ ಅಧ್ಯಕ್ಷರಾಗಿದ್ದಾರೆ. ಎಂದರೆ ಎಸ್ ಸಿ ಮತ್ತು ಎಸ್‌ಟಿಯ ರಿಸರ್ವೇಷನ್ ಮತ್ತು ಪ್ರಮೋಷನ್ ವಿಚಾರದ ಈ ಒಂದು ಕಮಿಟಿ ಏನು ಇದೆ ಅದರ ಅಧ್ಯಕ್ಷರಾಗಿದ್ದಾರೆ, ಇವರಿಗೆ ಯಾವ ಡಿಪಾರ್ಟ್‌ಮೆಂಟಿನಲ್ಲಿ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸುವುದಕ್ಕೆ ಈ ಒಂದು ಕಮಿಟಿ ಇದೆ. ಆದರೆ ಆ ಕಮಿಟಿ ಇಲ್ಲಿಯವರೆವಿಗೂ ಒಂದು ಮೀಟಿಂಗ್‌ನ್ನೂ ಕರೆದಿಲ್ಲ. ಪಿ ಡಬ್ಲ್ಯು ಡಿ ಇಲಾಖೆಯಲ್ಲಾಗಲಿ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಾಗಲಿ, ಕೆ ಇ ಬಿ ನಲ್ಲಾಗಲಿ ಇಲ್ಲಿಯವರೆಗೂ ಈ ವಿಚಾರವನ್ನು ರಿವ್ಯೂವ್ ಮಾಡಿಲ್ಲ, ಅಥವಾ ಇದರ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ಒಂದು ಮೀಟಿಂಗ್‌ನ್ನೂ ಕೂಡ ಕರೆದಿಲ್ಲ. ನಾನು ಮೊನ್ನೆ ಪೇಪರ್‌ನಲ್ಲಿ ನೋಡಿದೆ ಏನೆಂದರೆ ಇದಕ್ಕೆ ಮೇಲ್ಮನೆಯ ಸದಸ್ಯರೊಬ್ಬರನ್ನು ನಾಮಕರಣ ಮಾಡಿದ್ದಾರೆಂದು. ಈಗ ಅವರು ಇವರ ಬಗ್ಗೆ ಏನು ಕೆಲಸ ಮಾಡಿದ್ದಾರೆ, ಇದರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಯಾವುದೂ ನಮಗೆ ಗೊತ್ತಿಲ್ಲ. ಅನೇಕ ಇಲಾಖೆಗಳಲ್ಲಿ ಅನ್ಯಾಯಗಳು ನಡೆಯುತ್ತಾ ಇವೆ. ಉದಾಹರಣೆಗೆ ಹೇಳುವುದಾದರೆ ಹೋದ ಸಲ ಈ ಬಗ್ಗೆ ಒಂದು ಪ್ರಶ್ನೆ ಬಂದಾಗ ಶ್ರೀ ಹೆಚ್. ಡಿ. ದೇವೇಗೌಡರ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥ ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ಎಕ್ಸಿಕೂಟೀವ್ ಇಂಜಿನೀಯರ್ ಆಗಿ ಪ್ರಮೋಷನ್ ಆಗಿ ಕೊಡುವುದಕ್ಕೆ, ಎಕ್ಸಿಕ್ಯೂಟೀವ್ ಇಂಜಿನೀಯರ್‌ದು ಸ್ವಲ್ಪ ಹೈಯ್ಯರ್ ಸ್ಕೇಲ್ ಇದೆ ಆದುದರಿಂದ ಅವರಿಗೆ ಪ್ರಮೋಷನ್ ಕೊಡುವುದಕ್ಕಾಗುವುದಿಲ್ಲ ಎನ್ನುವ ಒಂದು ವಾದವನ್ನು ಇಟ್ಟು ನಾವು ಅದಕ್ಕೆ ರೋಸ್ಟರ್ ಸಿಸ್ಟಂ ಅನ್ನು ಅಪ್ಲೈ ಮಾಡಿಲ್ಲ ಎಂದು ಹೇಳಿದರು. ಈ ಬಗ್ಗೆ ಎಷ್ಟೋ ಮನವಿಗಳನ್ನು ಕೊಟ್ಟರೂ ಏನೂ ಆಗಿಲ್ಲ. ಇನ್ನು ಇವರು ಬಡವರ ಬಗ್ಗೆ ಏನು ಚಿಂತನೆ ಮಾಡುತ್ತಾರೋ ಗೊತ್ತಿಲ್ಲ ಈಗ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ಎಲ್ಲಾ

ಜಿಲ್ಲೆಗಳಲ್ಲೂ ಮಾಡಿದ್ದೀರಿ. ಅವರು ಈಗ ಏನು ಕೆಲಸ ಮಾಡುತ್ತಿದ್ದಾರೆ. ಅವರು ಈ ಕೆಲಸ ಏತಕ್ಕೆ ಮಾಡಿಲ್ಲ, ಅವರು ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೋ ಏನೋ ನನಗೆ ಗೊತ್ತಿಲ್ಲ, ನಾನು ಈ ಮಾತನ್ನು ಪದೇ ಪದೇ ಕೇಳುತ್ತಿದ್ದೇನೆ. ಅದಕ್ಕೆ ಅವರಿಂದ ಉತ್ತರ ಇದು ನನ್ನ ಕಡೆ ಇಲ್ಲ, ಈ ಡಿ ಪಿ ಎ ಆರ್ ನನ್ನ ಕಡೆ ಇಲ್ಲ, ಇದನ್ನು ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿ ಹೇಳುತ್ತಾರೆ. ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಕೇಳುತ್ತೇನೆ, ಏತಕ್ಕಾಗಿ ಈ ಕಮಿಟಿಯನ್ನು ಕಾನಿಸ್ಟಿಟ್ಯೂಟ್ ಮಾಡಿದ್ದೀರಿ ? ಈ ಕಮಿಟಿ ಏನು ಇದೆ, ನನಗೆ ಗೊತ್ತಿರುವ ಹಾಗೆ ಇದುವರೆವಿಗೂ ಅದು ಯಾವ ಡಿಪಾರ್ಟ್‌ಮೆಂಟ್ ಬಗ್ಗೆಯೂ ರಿವ್ಯೂ ಮಾಡಿಲ್ಲ. ತಾವು ಇದನ್ನು ರೆವ್ಯೂ ಮಾಡದೆ, ಅವರ ಪ್ರಮೋಷನ್ ಬಗ್ಗೆ ಚಿಂತನೆ ಮಾಡದೆ ಇದನ್ನು ಹಾಗೆಯೇ ಕೈ ಬಿಟ್ಟರೆ ನಾವು ನಿಜವಾಗಿ ಹೇಳಬೇಕಾಗುತ್ತದೆ ಅವರ ಬಗ್ಗೆ ತಾವು ಚಿಂತನೆ ಮಾಡುತ್ತಿಲ್ಲವೆಂದೂ ಮತ್ತು ಅವರ ಬಗ್ಗೆ ಕಾಳಜಿ ಇಲ್ಲವೆಂದು, ಮೂರು ವರ್ಷವಾದರೂ ಈ ಕಮಿಟಿಯ ಮೀಟಿಂಗ್ ಇಲ್ಲ, ಮೊನ್ನೆ ತಾನೆ ಇದನ್ನು ರೀಕಾನ್‌ಸ್ಟಿಟ್ಯೂಟ್ ಮಾಡಿದ್ದೀರಿ. ಇದು ಆದ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಒಂದು ಲಿಸ್ಟ್ ಮಾಡಬೇಕು. ಏಕೆಂದರೆ ಈಗ ತಾವು ನಾಯಕ ಮತ್ತು ನಾಯಕಡ ಎಂದು ಏನು ಕಮ್ಯೂನಿಟಿಗಳು ಇವೆ ಅವರನ್ನೂ ಸಹ ಸೇರಿಸಬೇಕು ಎಂದು ಒಂದು ಕಮಿಟಿಯನ್ನು ವಿ. ಎಲ್. ಪಾಟೀಲ್‌ರವರು ಮಂತ್ರಿಗಳಾಗಿದ್ದಾಗ ಮಾಡಿದ್ದರು. ಅದಕ್ಕೆ ನಾನು ಒಬ್ಬ ಸದಸ್ಯನಾಗಿದ್ದೆ ಈ ಎರಡೂವರೆ ವರ್ಷವಾಗಿದ್ದರೂ ಸಹ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ. ಇನ್ನು ಒಂದು ಮೀಟಿಂಗ್ ನಡೆದಿಲ್ಲ ಇದು ನಿಮ್ಮ ಅಡ್‌ಮಿನಿಸ್ಟ್ರೇಷನ್, ಇದು ನಿಮ್ಮ ಆಡಳಿತ. ಇದು ಬಡವರ ಬಗ್ಗೆ ನಿಮಗೆ ಇರತಕ್ಕಂಥ ಕಳಕಳಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರ ಬಗ್ಗೆ ನೀವು ಮಾಡತಕ್ಕಂತಹ ಚಿಂತನೆ.

ಶ್ರೀ ಜಿ. ಬಸವಣ್ಣಪ್ಪ.—ಈಗ ಪ್ರೆಸೆಂಟ್ ಲಿಸ್ಟ್‌ನ ಪ್ರಕಾರ ನಾಯಕ ಮತ್ತು ನಾಯಕಡ comes under the category of scheduled caste and scheudled tribes as per article 342. ಈಗ ವಾಲ್ಮೀಕಿಯವರೂ ಕೂಡ ತಮ್ಮನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಗುಂಪಿಗೆ ಸೇರಿಸಬೇಕೆಂದು ಮನವಿಯನ್ನು ಸಲ್ಲಿಸಿದ್ದಾರೆ. We have recommended this to Government of India. ನಾವು ಇದನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ It is the duty of Government of India as per article 342

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರಿಗಾದರೂ ತೊಂದರೆ ಆದರೆ ಆಗ ಒಂದು ಸಮಿತಿಯನ್ನು ರಚನೆ ಮಾಡಬೇಕು, ಈ ಸದನದಲ್ಲಿ ಅದನ್ನು ಚರ್ಚಿಸಬೇಕು. ಈಗ ತಾವು ಒಂದು ಸಮಿತಿಯನ್ನು ರಚನೆ ಮಾಡಿದ ಮೇಲೆ ಏನಾದರೂ ಹೇಳಬೇಕಲ್ಲ, ಗವರ್ನ್‌ಮೆಂಟ್ ಆಫ್ ಇಂಡಿಯಾದಿಂದ ಬಂದಿದೆಯೋ, ಇಲ್ಲವೇ ಎಂದು ತಾವು ಏನಾದರೂ ಹೇಳಬೇಕಲ್ಲ ? ಇದುವರೆಗೂ ಒಂದೂ ಕೂಡ ಆಗಿಲ್ಲ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ some times we must have guts to say ಇದು ಆಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಒಂದು ಸಲ ವರುಣ ಕೆನಾಲ್ ಮಾಡಬೇಕೆಂದು ಅಂದುಕೊಂಡಾಗ ದೇವರಾಜ್ ಅರಸ್ ಅವರನ್ನು ಮಂಡ್ಯ ಜಿಲ್ಲೆಯಲ್ಲಿ ಎಲ್ಲರೂ ಘೇರಾವ್ ಮಾಡಿದರು, ಕೆಲವರು ಕಲ್ಲು ತೆಗೆದುಕೊಂಡು ಹೊಡೆದರು, ಆದರೆ ಅವರು ಯಾವುದಕ್ಕೂ ಹೆದರಲಿಲ್ಲ. ಕೊನೆಗೆ ಅವರು ವರುಣ ಕೆನಾಲ್‌ನ್ನು ಮಾಡಿದರು. ಆಗ ನಾವು ೧೯೭೮ರಲ್ಲಿ ಲಕ್ಕಿ ಲ ಸೀಟ್‌ನ್ನು ಸೋತೆವು. ಹೀಗಾಗಿ some time we have to take bold decision. ಅದನ್ನು ಬಿಟ್ಟು ಇದು ಆಗುವುದಿಲ್ಲ, ಅವರನ್ನು ಹಿಡಿತಿನಿ, ಇವರನ್ನು ಹಿಡಿತಿನಿ ಅಂದರೆ ಕೊನೆಗೆ ನೀವು ಯಾರ ಕೈಯನ್ನು ಹಿಡಿಯುವುದಿಲ್ಲ, ನೀವು ನೀವಾಗಿಯೇ ಬಿದ್ದು ಬಿಡುತ್ತೀರಿ. ಅದಕ್ಕಾಗಿ ಇದನ್ನು ಚಿಂತನೆ ಮಾಡುವುದು ಅವಶ್ಯಕ. ಈ ಕಮಿಟಿಗಳ ಬಗ್ಗೆ ತಾವು ನಿಜವಾಗಿಯೂ ಕ್ವಿಕ್ ಆಗಿ ಡಿಸಿಷನ್ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲ ಅಂದರೆ, ಅನೇಕ ಡಿಪಾರ್ಟ್‌ಮೆಂಟ್‌ಗಳಲ್ಲಿ ಪ್ರಮೋಷನ್ ಇರುವುದಿಲ್ಲ, ಜನರಿಗೆ ಬೇರೆ ಗತಿ ಇಲ್ಲದೆ ಅವರು ಅಲ್ಲಿಯೇ ಕೊಳೆಯಬೇಕು, ಯಾರೂ ಅವರನ್ನು ಕೇಳುವುದಿಲ್ಲ. ನಾವು ಇಲ್ಲಿ ಬರೀ ಇಶ್ಯೂಸ್ ರೈಸ್ ಮಾಡುತ್ತಿರಬೇಕು. ನೀವು ನಮಗೆ ಸಮಾಧಾನದ ಉತ್ತರವನ್ನು ಕೊಡುತ್ತಿರಬೇಕು, ಇದರಿಂದ ಏನಾಗುತ್ತದೆ ? ಆದ್ದರಿಂದ ನಿಮಗೆ ಇದರ ಬಗ್ಗೆ ನಿಜವಾಗಿಯೂ ಚಿಂತನೆ ಇದ್ದರೆ ಅದನ್ನು ತರಿಸಿ, ಮೀಟಿಂಗ್ ಮಾಡಿ ರೆವ್ಯೂ ಮಾಡಿ ಅಲ್ಲಿ ಜಾರಿಯಲ್ಲಿರುವಂತೆ ಮಾಡಬಹುದು.

ಇನ್ನು ಒಂದು ವಿಷಯ, ಈಗ ನಾವು ಯಾರಾದರೂ ಡಿಮ್ಯಾಂಡ್ ಮಾಡಿದರೆ ಸೋಮೋಟೊ ಎಂದು ಮುಖ್ಯ ಮಂತ್ರಿಗಳು ಜ್ಯೂಡಿಷಿಯಲ್ ಎನ್‌ಕ್ವೈರಿಗೆ, ಅನೌನ್ಸ್ ಮಾಡಿಬಿಡುತ್ತಾರೆ. ನನಗೆ ಗೊತ್ತಿರುವ ಮಟ್ಟಿಗೆ ಬೈರೇಗೌಡರ ಮತ್ತು ಮಾನ್ಯ ವೀರಪ್ಪಮೊಯಿಲಿಯವರ ಟೇಪ್ ಹಗರಣ. ಇದರ ಬಗ್ಗೆ ತಾವು ಜ್ಯೂಡಿಷಿಯಲ್ ಎನ್‌ಕ್ವೈರಿ ಮಾಡಿದಿರಿ, ಆದರೆ ರಿಪೋರ್ಟ್ ಏನಾಯಿತು ನನಗೆ ಗೊತ್ತಾಗಲಿಲ್ಲ, ಆಗಲೇ ಎರಡೂವರೆ ಮೂರು ತಿಂಗಳು ಆಗುತ್ತಾ ಬರುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಎರಡೂವರೆ ತಿಂಗಳು ಆಗಿಲ್ಲ, ಆದರ ಬಗ್ಗೆ ರಿಪೋರ್ಟ್ ಬಂದಿದೆ, ನಾವು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡಿಲ್ಲ, ಬರುವ ಕ್ಯಾಬಿನೆಟ್‌ನಲ್ಲಿ ಇದರ ಬಗ್ಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ ನಿನ್ನೆ ರಾಚಯ್ಯನವರನ್ನು ಕೇಳಿದಾಗ ರಿಪೋರ್ಟ್ ಬಂದಿಲ್ಲ ಎಂದು ಹೇಳಿದರು, ಇದಕ್ಕೆ ನೀವೇ ಸಾಕ್ಷಿ ಇದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಿನ್ನೆ ರಾಚಯ್ಯನವರು ಕ್ಯಾಬಿನೆಟ್ ಮುಂದೆ ಬಂದಿಲ್ಲವೆಂದು ಹೇಳಿದರು, ಆದರೆ ನೀವು ಸರಿಯಾಗಿ ಕೇಳಿಸಿಕೊಂಡಿಲ್ಲ.

ಅಧ್ಯಕ್ಷರು.—ಅವರು ಕ್ಯಾಬಿನೆಟ್ ಮುಂದೆ ಬಂದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮೊನ್ನೆ ಮುಖ್ಯಮಂತ್ರಿಯವರ ಮೇಲೆ ಇದ್ದಂಥ ಬೋಪಣ್ಣ ಕಮಿಷನ್ ರಿಪೋರ್ಟ್‌ನನ್ನು ಜಾಗ್ರತೆ ಇಟ್ಟುಬಿಟ್ಟರಿ. ಆದರೆ ಇದನ್ನು ಏಕೆ ಇಟ್ಟಿಲ್ಲ ಎಂದು ಕೇಳುತ್ತಿದ್ದೇನೆ ಅಷ್ಟೇ, ಬೇರೇನೂ ಉದ್ದೇಶ ಇಲ್ಲ. ಏಕೆಂದರೆ ಇವುಗಳ ವರದಿ ಹೆಚ್ಚು ಕಡಿಮೆ ಸೈಮಲ್ಟೇನಿಯಸ್‌ಲೀ ಬಂದವು. ಆದ್ದರಿಂದ ಅದನ್ನು ಕೂಡ ಈ ಸದನದ ಮುಂದೆ ಇಡಬೇಕೆಂದು ಕೇಳುತ್ತೇನೆ, ಮತ್ತೆ ಇನ್ನೂ ಸುಮಾರು ೭-೮ ರಿಪೋರ್ಟ್‌ಗಳು ಬರತಕ್ಕಂಥವು ಇವೆ. ಅವುಗಳನ್ನು ಕೂಡ ಈ ಸದನದ ಮುಂದೆ ಇಡಬೇಕು. ನಂತರ ಈ ರಿಪೋರ್ಟ್‌ಗಳು ಬಂದಮೇಲೆ ಅನೇಕ ಕಡೆ ತಾವು ಆಫೀಸರ್‌ಗಳನ್ನು ಇನ್‌ಡಕ್ಟ್ ಮಾಡಿದಿರಿ ಕೆಲವು ನಾನ್ ಅಫಿಷಿಯಲ್ಸ್‌ನ್ನು ಮಾಡಿದ್ದೀರಿ. ಇದಕ್ಕೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ? ಏಕೆಂದರೆ ಇಲ್ಲಿ ಒಂದು ತಿಳಿವು ಇರಬೇಕು. ಈಗ ಯಾವುದೇ ಒಂದು ವಿಷಯಕ್ಕೆ ಜನ ಭಯಬೀಳಬೇಕು. ಅಥವಾ ಮುಂದೆ ಈ ರೀತಿಯಾಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ನಾವು ಮಾಡುತ್ತೇವೆ, ಅದಕ್ಕೋಸ್ಕರ ಕೊನೆಯ ಪಕ್ಷ ಅವರಿಗೆ ಒಂದು ಶಿಕ್ಷೆಯಾಗಬೇಕು, ಅದರ ಬಗ್ಗೆ ತಾವು ಯಾವ ಕಾರ್ಯಕ್ರಮನನ್ನು ಹಾಕಿಕೊಂಡಿದ್ದೀರೆಂದು ಇದುವರೆಗೂ ತಿಳಿಸಲಿಲ್ಲ. ನಂತರ ಇನ್ನೊಂದು ವಿಷಯ, ಬಹಳ ಎಮ್‌ಬ್ರೇಸಿಂಗ್ ವಿಷಯ. ಇದನ್ನು ಇಲ್ಲಿ ಹೇಳಬೇಕೋ, ಹೇಳಬಾರದೋ ಗೊತ್ತಿಲ್ಲ. ಏಕೆಂದರೆ ತಮ್ಮ ಆಡಳಿತದಲ್ಲಿ ಈಗ ಸುಮಾರು ೧೪-೧೬ ಮಂತ್ರಿಗಳನ್ನು ಡ್ರಾಪ್ ಮಾಡಿದಿರಿ. ಡ್ರಾಪ್ ಮಾಡಿದ ನಂತರ ಅವರು ಇರತಕ್ಕಂಥ ರೆಸಿಡೆನ್ಸ್‌ಗಳನ್ನು ಅವರಿಗೆ ಅಲಾಟ್ ಮಾಡಿ ಅಥವಾ ಬೇರೆ ವ್ಯವಸ್ಥೆ ಮಾಡಿ. ಈಗ ಏನಾಗಿದೆಯೆಂದರೆ ನಾಳೆ ನಮ್ಮ ಲೆಜಿಸ್‌ಲೇಟರ್ಸ್ ಬಗ್ಗೆ ಅಥವಾ ಮಂತ್ರಿಗಳ ಬಗ್ಗೆ ಜನ ಲಘುವಾಗಿ ಮಾತನಾಡುವ ಒಂದು ಪರಿಸ್ಥಿತಿ ಉಂಟಾಗಿದೆ. ಜನ ಮಾತನಾಡುತ್ತಿದ್ದಾರೆ ಒಂದು ವರ್ಷವಾದರೂ ಏನೂ ಪೆನಾಲ್ಟೀ ಇದೆಯೆಂದು. ಅದು ೪-೫ ಸಾವಿರವಾಗಿದೆ. ಇವೊತ್ತು ಇವರಿಗೆ ಹೊರಗಡೆ ೫-೧೦ ಸಾವಿರ ಕೊಟ್ಟು ಇರತಕ್ಕಂಥ ಸಾಮರ್ಥ್ಯ ಹೇಗೆ ಬರುತ್ತದೆ? ಜನ ಏನೋ ಲಘುವಾಗಿ ಮಾತನಾಡುತ್ತಿದ್ದಾರೆ, ಆದರೆ ನಾವು, ನೀವು ಅದನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದೇವೆ. ಈ ಸಂದರ್ಭದಲ್ಲಿ ಸಮಂಜಸವಾದ ಉತ್ತರವನ್ನು ತಾವು ಕೊಡಬೇಕು. ಜನರಿಗೆ ನೀವು ಏನು ಉತ್ತರ ಕೊಡುತ್ತೀರಿ? ಒಬ್ಬರಿಗೊ, ಇಬ್ಬರಿಗೊ ಎಕ್ಸ್‌ಪ್‌ಷನ್ ಕೇಸ್ ಇದೆ. ಕೆಲವು ಸಲ ಮನೆ ಸಿಕ್ಕಲಿಲ್ಲ ಎಂದರೆ ಅದು ಬೇರೆ ಮಾತು. ಆದರೆ ಇಡೀ ತಮ್ಮ ಬೆಟಾಲಿಯನ್‌ನ್ನು ತೆಗೆದುಕೊಂಡು ಇವೊತ್ತಿನ ದಿವಸ ಅಲ್ಲಿ ಗುಡಾರ ಹಾಕಿದರೆ ಹೇಗೆ? How are you going to face the public? How you are going to meet their expenses? Who is going to meet this expenses? ಇವತ್ತು ಈ ರೀತಿ ಲಕ್ಷಾಂತರ ರೂಪಾಯಿಗಳು ಹೋಗುತ್ತಿವೆ. ಒಂದು ಕಡೆ ಎಕ್ಸ್‌ಪ್ಯಾನ್‌ಷನ್ ಆಗುವುದಿಲ್ಲ. ಮತ್ತೊಂದು ಕಡೆ ಅವರಿಗೆ ಮನೆಗಳನ್ನು ಅಲಾಟ್ ಕೂಡ ಮಾಡುವುದಿಲ್ಲ. ಇನ್ನೊಂದು ಕಡೆ ಲಕ್ಷಾಂತರ ರೂಪಾಯಿಗಳು ಅಪವ್ಯಯವಾಗುತ್ತಿದೆ. ಹಿಂದೆ

ನನಗೆ ಚೀಫ್ ಸೆಕ್ರೆಟರಿಯಿಂದ ೩೦ ದಿನಗಳ ಒಂದು ನೋಟೀಸ್ ಬಂತು. ತಕ್ಷಣ ಅದರ ಪ್ರಕಾರ ೩೦ ರಿಂದ ೬೦ ದಿನಗಳಲ್ಲಿ ನಾವು ವೆಕೇಟ್ ಮಾಡಿದೆವು. ಇವೊತ್ತು ನೀವು ಆ ರೀತಿ ಮಾಡಿದರೆ ನಮ್ಮ ಅಭ್ಯಂತರ ಇಲ್ಲ. ಮಾನ್ಯ ಮಂತ್ರಿಗಳಿಗೆ ಸೌಲಭ್ಯ ಕೊಡಬೇಕು. ಅದೇ ರೀತಿ ಸೌಲಭ್ಯಗಳನ್ನು ಕೊಡಿ. ಇಲ್ಲಿ ನೀವು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಮತ್ತೆ ನೀವು ಏನೋ ಒಂದು ಕಾನೂನು ಮಾಡಿದಿರಿ. ಒಂದು ವರ್ಷ ಜಾಸ್ತಿ ಇದ್ದರೆ ಇಷ್ಟು ಪೆನಾಲ್ಟೀ, ಎರಡು ವರ್ಷ ಇದ್ದರೆ ಅದಕ್ಕೆ ಎರಡರಷ್ಟು ಮತ್ತೆ ಮೂರು ವರ್ಷ ಇದ್ದರೆ ಅದಕ್ಕೆ ಮೂರರಷ್ಟು ಎಂದು ಕಾನೂನು ಮಾಡಿದಿರಿ. ಇವೊತ್ತಿನ ದಿವಸ ಈ ವ್ಯವಸ್ಥೆಯನ್ನೇ ತಾವು ಕಂಟಿನ್ಯೂ ಮಾಡಿದರೆ, ಅದು ಅಷ್ಟು ಸರಿಯಾಗುವುದಿಲ್ಲ. ಆದರಿಂದ ತಾವು ಬಹಳ ಕಷ್ಟದಲ್ಲಿ ಸಿಕ್ಕಿಹಾಕಿಕೊಳ್ಳುತ್ತೀರೆಂದು ನಾನು ಹೇಳುತ್ತೇನೆ. ಕೊನೆಯದಾಗಿ ಕನ್ಸಲ್‌ಟೇಟಿವ್ ಕಮಿಟಿಗಳನ್ನು ಮಾಡಿದ್ದಾರೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿಗೂ ಈ ಕನ್ಸಲ್‌ಟೇಟಿವ್ ಕಮಿಟಿಗಳು ಇವೆ. ಇಂಡಸ್ಟ್ರೀಯಲ್ ಡಿಪಾರ್ಟ್‌ಮೆಂಟ್, ರೆವಿನ್ಯೂ ಡಿಪಾರ್ಟ್‌ಮೆಂಟ್ ಹೀಗೆ ಎಲ್ಲಾ ಡಿಪಾರ್ಟ್‌ಮೆಂಟ್‌ಗಳಿಗೂ ಈ ಕಮಿಟಿಗಳು ಇವೆ. ಒಂದು ದಿವಸವಾದರೂ ಕೂಡ ಕನ್ಸಲ್‌ಟೇಟಿವ್ ಕಮಿಟಿಯನ್ನು ಕರೆದಿಲ್ಲ. ಏನೋ ಒಂದು ನೋಟಿಫಿಕೇಷನ್ ಪ್ರಿಂಟ್ ಮಾಡಿ ಕೊಟ್ಟರಿ. ಆದರೆ ಕನ್ಸಲ್‌ಟೇಟಿವ್ ಕಮಿಟಿಯನ್ನು ಒಂದು ದಿವಸವಾದರೂ ತಾವು ಕರೆದಿಲ್ಲ. ಇದರಲ್ಲಿ ಏನಾದರೂ ತೊಂದರೆ ಇದೆಯೇ ? ಏಕೆಂದರೆ ಅನೇಕ ವಿಷಯಗಳನ್ನು ನಾವು ಈ ಕನ್ಸಲ್‌ಟೇಟೀವ್ ಕಮಿಟಿಯಲ್ಲಿ ಬಗೆಹರಿಸಬಹುದು. ಆದರೆ ಒಂದು ದಿವಸವು ಈ ಕನ್ಸಲ್‌ಟೇಟಿವ್ ಕಮಿಟಿಯ ಮೀಟಿಂಗ್ ಮಾಡಿಲ್ಲ. ಅಥವಾ ಇದನ್ನು ಮಾಡಿ ಎಂದು ಮುಖ್ಯಮಂತ್ರಿಗಳು ಆದೇಶ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಮಂತ್ರಿಗಳು ಆದೇಶ ಕೊಟ್ಟರೂ ಇವರು ಸುಮ್ಮನಿದ್ದಾರೋ ಏನೋ ಅದು ಗೊತ್ತಿಲ್ಲ. ಇದು ಒಂದು ದುರ್ದೈವದ ಸಂಗತಿ. ಇವತ್ತು ನೀವು ಒಳ್ಳೆಯ ಆಡಳಿತವನ್ನು ಕೊಡುತ್ತೇವೆ ಎಂದು ಹೇಳುತ್ತಿದ್ದೀರಿ ? ಕೆಲವು ಸಮಿತಿಗಳ, ಕಮಿಟಿಗಳನ್ನು ಕರೆಯುವುದಕ್ಕೆ ಪುರುಸೊತ್ತು ಇಲ್ಲವೆಂದರೆ ಬೇರೆ ಏನು ಕೆಲಸ ಮಾಡುತ್ತಿದ್ದೀರಿ ? ಇದನ್ನು ಬಿಟ್ಟು ನಿಮಗೆ ಇನ್ನು ಬೇರೆ ಏನು ಕೆಲಸ ಇದೆಯೋ ಗೊತ್ತಿಲ್ಲ.

೯–೩೫ ಎ.ಎಂ.

ಕನ್ಸಲ್‌ಟೇಟೀವ್ ಕಮಿಟಿ ಕರೆಯತಕ್ಕ ಅಥವಾ ಹೈ ಪವರ್ ಕಮಿಟಿ ಮಾಡತಕ್ಕದ್ದು, ಇದು ಬಿಟ್ಟರೆ ಬೇರೆ ಕೆಲಸ ಏನು ಇದೆ. ಮಾನ್ಯ ಮುಖ್ಯಮಂತ್ರಿಗಳು ಹರಿದ್ವಾರ್, ಟ್ರಿವೆಂಡ್ರಮ್ ಪ್ರವಾಸ ಮಾಡತಕ್ಕದ್ದು, ಇದೇ ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯವನ್ನು ನೆಗ್ಲೆಕ್ಟ್ ಮಾಡಿ ತಾವು ನೆರೆ ಮನೆಯನ್ನು ಉದ್ಧಾರ ಮಾಡುತ್ತಿದ್ದೀರಿ. ನೆರೆ ಮನೆಯನ್ನು ಉದ್ಧಾರ ಮಾಡಲು ಜನರು ಓಟು ಕೊಟ್ಟು ನಿಮ್ಮನ್ನು ಆರಿಸಿದ್ದಾರೆಯೇ ? ಇವೊತ್ತು ನಾನು ಒಂದು ಬಹಳ ವಿಷಾದವಾದ ಮಾತನ್ನು ಹೇಳಬೇಕಾಗಿದೆ. ಕನ್ಸಲ್‌ಟೇಟೀವ್ ಕಮಿಟಿ ಬಹಳ ಮುಖ್ಯವಾದುದು. ಪಾರ್ಲಿಮೆಂಟ್‌ನಲ್ಲಿ ಕೂಡ ಅದನ್ನು ಕರೆಯುತ್ತಾರೆ. ಆದರೆ ಇಲ್ಲಿ ಮಾತ್ರ ಒಂದು ಮೀಟಿಂಗ್ ಕೂಡ ಆಗಿಲ್ಲ. ಒಬ್ಬ ಮಂತ್ರಿಗಳೂ ಕೂಡ ಈ ಮೀಟಿಂಗ್‌ಗೆ ಕರೆದಿಲ್ಲ. ಮೀಟಿಂಗ್‌ಗೆ ಕರೆಯುತ್ತಾರೋ ಅಥವಾ ಇಲ್ಲವೋ ಈ ಬಗ್ಗೆ ಯೋಚಿಸಲೂ ಮುಖ್ಯಮಂತ್ರಿಗಳಿಗೆ ಪುರಸೊತ್ತು ಇಲ್ಲ.

ಕೊನೆಯದಾಗಿ, ಅಧ್ಯಕ್ಷರೇ, ಈ ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಇದೆ. ಈ ಪಬ್ಲಿಸಿಟಿ ಮತ್ತು ಇನ್‌ಫರ್ಮೇಷನ್ ಡಿಪಾರ್ಟ್‌ಮೆಂಟ್ ಯಾವಾಗಲೂ ಸರ್ಕಾರದ ಕೆಲಸ ಕಾರ್ಯಗಳನ್ನು, ಕಾರ್ಯಕ್ರಮಗಳನ್ನು ಪಬ್ಲಿಸಿಟಿ ಕೊಡತಕ್ಕಂಥದ್ದು, ಇದರ ಬಗ್ಗೆ ಮತ್ತು ಈ ಪತ್ರಿಕೆಗಳ ಬಗ್ಗೆ ಚಿಂತನೆ ಮಾಡತಕ್ಕ ಒಂದು ಡಿಪಾರ್ಟ್‌ಮೆಂಟ್. ಆದರೆ ಈ ಡಿಪಾರ್ಟ್‌ಮೆಂಟ್‌ನಲ್ಲಿ ಕೂಡ ಇವೊತ್ತಿನ ದಿವಸ ಏನು ಆಗಿದೆ ಎಂದರೆ, ನಿಮಗೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ, ಇದಕ್ಕೆ ಕೊನೆಯದಾಗಿ ಒಂದೇ ಒಂದು ಕ್ಲಾರಿಫಿಕೇಶನ್ ಮುಖ್ಯಮಂತ್ರಿಗಳು ಕೊಡಬೇಕು. ರೂರಲ್ ಡೆವಲಪ್‌ಮೆಂಟ್ ಮೇಲೆ ಒಂದು ಫಿಲಂ ತಯಾರು ಮಾಡಬೇಕೆಂದು ಹೇಳಿ, ಮದ್ರಾಸಿನ ಒಂದು ಹೆಣ್ಣುಮಗಳಿಗೆ ಸುಮಾರು ೨ ಲಕ್ಷ ಅಡ್ವಾನ್ಸ್ ಕೊಟ್ಟಿದ್ದಾರೆಂದು ವರದಿ ಆಗಿದೆ. ಇದು ಇನ್‌ಕ್ವಿಸ್ಟ್ ಮ್ಯಾಗಜಿನ್‌ನಲ್ಲಿ ವಿ. ವೇಣುಗೋಪಾಲ್ ಎನ್ನುವವರು ಕೊಟ್ಟಿದ್ದಾರೆ. ಆದುದರಿಂದ ಇದು ಒಂದು ಅಥೆಂಟಿಕೇಟೆಡ್ ಇನ್‌ಫರ್ಮೇಷನ್. ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ತಮಗೆ ಬೇಕಾದ ಪತ್ರಿಕೆಗಳು

ಅಥವಾ ಮ್ಯಾಗಜಿನ್ ರೆಫರ್ ಮಾಡುತ್ತಾರೆ. ಯಾವ ಪತ್ರಿಕೆಯಲ್ಲಿ ಬಂದಿದೆ, ಅದರ ಹೆಸರು ಕೂಡ ಕೊಟ್ಟಿದ್ದಾರೆ. ಅಧ್ಯಕ್ಷರೇ ತಮ್ಮ ಅಪ್ಪಣೆಯನ್ನು ಪಡೆದು ಅದನ್ನು ಓದುತ್ತೇನೆ. I am quoting "INQUEST" Magazine. "Case of the Mysterious Film-makor. If you have R. K. connection you can get away with anything in Karnataka. 'This is published under the main heading" Did Hegde tamper with judiciary ?"

ಶ್ರೀ ರಾಮಕೃಷ್ಣ ಹೆಗಡೆ.--ಅದರಲ್ಲಿ ಬರೆದಿರುವುದು ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಬೇಕಾದ್ದನ್ನು ಮಾತ್ರ ನೀವು ಹೇಳುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಬಹಳ ತರಹದ ಪತ್ರಿಕೆಗಳು ಇರಬಹುದು. ಕೆಲವು ಪತ್ರಿಕೆಗಳಿಗೆ ಇಂಥ ಕಥೆಗಳನ್ನು ಬರೆಯುವುದೇ ಅವರ ಉದ್ಯೋಗ. ಇದರಿಂದ ಯಾರ ಮನಸ್ಸಿಗೆ ಖುಷಿ ಆಗುತ್ತದೆಯೋ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ಇದರಲ್ಲಿ ಹೆಸರನ್ನು ಕೊಟ್ಟಿರುವುದರಿಂದ ಇದು ಅಥೆಂಟಿಕೇಟೆಡ್ ಆಗಿದೆ. ಇದು ಸರಿಯಿಲ್ಲ ಎಂದರೆ ಡಿಫಮೇಷನ್ ಕೇಸ್ ಹಾಕಿ. 'some months ago, a jeans-clad woman materialised before a Senior Official of the Government of Karnataka and demanded a cheque for Rs. 80,000 The official was simply baffled. On enquiry he was told by the visitor that she is a film-maker from Madras who has been assigned to produce a colour documentary on Rural Development in Karnataka. The official was further non-plussed because he is supposed to know who has been assigned what job. In any case, the woman's name was not in the panel drawn up by the Government. Puffing hard at her cigarette, the woman demanded "Has not R.K. told you? I must get my cheque as I am flying back to Madras this evening?" The official made frantic telephone calls as R.K. is a formidable figure in Karnataka and he would not take chances, especially when it is a R.K. woman tie up. On behalf of R.K., then Information Minister Alva told the official that the woman had indeed been assigned the job. But then there was no money in the kitty, the official pointed out. Now it was the turn of the Rural Development Minister who stepped in. He ordered that the woman be paid Rs. 80,000 from the "available funds". What about the script? No Questions will be entertained as R K. is involved. Yes, the woman walked away with the cheque as the same evening. A couple of days more and the same sequence ending in another cheque being given to the woman from available funds. Later, it turned out that the woman was ready to produce only a Video film. This is because there was stiff resistance from officials to make payments to the woman who had not even produced a script for weeks after taking the money. The Government Order which was issued after making the initial payments to the woman was subsequently modified to say that she will produce only a video film. An Insider says that the commentary and visuals had been synchronised, not to speak of the

quality of the woman's product. But then a hefty Rs. 2 lakhs has been bagged by the woman from Madras. Well, that is the value-based politics under Ramakrishna Hegde, doubting Thomasses can try their luck. But then make sure that you have an access to R.K.''

This is the story appeared in the "INQUEST'' Magazine. The Hon'ble C. M. can deny it. But the woman has taken the cheque for Rs. 2 lakhs.

SRI M. VEERAPPA MOILY.—It reads like a romantic story. Is it an old story or a new story?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನನ್ನ ಮಗನ ಹೆಸರೂ ಆರ್. ಕೆ. ಆಗುತ್ತದೆ, ಅಂದರೆ ಅದು ರಾಹುಲ್ ಖರ್ಗೆ. ನಾನು ಈ ಮ್ಯಾಗಜೀನ್ ನೋಡಿದಾಗ ಅವನನ್ನು ಕೇಳಿದೆ. ಅದಕ್ಕೆ ಅವನು ನಾನಲ್ಲ ಎಂದು ಹೇಳಿದ. ಆಮೇಲೆ ಗೊತ್ತಾಯಿತು ಆರ್. ಕೆ. ಎಂದರೆ ರಾಮಕೃಷ್ಣ ಹೆಗಡೆ ಎಂದು. ನಾನು ಏತಕ್ಕೆ ಈ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಸ್ಕ್ರಿಪ್ಟ್ ಇಲ್ಲದೇ ಹೇಗೆ ಹಣ ಕೊಟ್ಟಿದ್ದಾರೆ? ಆ ಹೆಂಗಸು ಮೊದಲನೆಯ ಸಲ ೮೦ ಸಾವಿರ ಮತ್ತು ಎರಡನೆಯ ಸಲ ಒಂದು ಲಕ್ಷ ಹಣ ತೆಗೆದುಕೊಂಡಿದ್ದಾರೆ. ಇವೊತ್ತು ನಮ್ಮ ರಾಜ್ಯದಲ್ಲಿ ಕನ್ನಡ ಚಿತ್ರವನ್ನು ತಯಾರು ಮಾಡುವಂತಹ ಅನೇಕ ಪ್ರತಿಭಾವಂತರು ಇದ್ದಾರೆ. ನಿಮ್ಮಲ್ಲಿಯೇ ಅನಂತನಾಗ್, ಶಂಕರ್‌ನಾಗ ಇದ್ದಾರೆ. ಇಂತಹವರಿಗೆ ಅವಕಾಶ ಕೊಡದೇ ಹೊರ ರಾಜ್ಯದವರಿಗೆ ಮುಖ್ಯಮಂತ್ರಿಗಳ ಹೆಸರು ಹೇಳಿ ಎಕ್ಸ್‌ಪ್ಲಾಯಿಟ್ ಮಾಡಲು ಏತಕ್ಕೆ ಅವಕಾಶ ಮಾಡಿಕೊಡಬೇಕಾಗಿತ್ತು? ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಈ ವಿಷಯದ ಬಗ್ಗೆ ಕ್ಲಾರಿಫಿಕೇಷನ್ ಕೊಡುತ್ತಾರೆಂದು ನಾನು ಭಾವಿಸಿದ್ದೇನೆ. ಇನ್ನೂ ಹೆಚ್ಚು ಮಾತನಾಡದೆ ನಾನು ಏನು ೩—೪ ವಿಷಯಗಳನ್ನು ಅಂದರೆ ಡಿಸ್ಟ್ರಿಕ್ಟ್ ರೀಆರ್ಗನೈಜೇಷನ್ ಮುಂತಾದ ವಿಚಾರಗಳ ಬಗ್ಗೆ ಹೇಳಿದ್ದೇನೆ ಅವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಭಾವಿಸಿದ್ದೇವೆ. ನನಗೆ ಮಾತನಾಡಲು ಹೆಚ್ಚು ಸಮಯ ಕೊಟ್ಟಿರುವುದಕ್ಕಾಗಿ ನಾನು ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ.ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅವರ ವಿಷಯದ ಬಗ್ಗೆ, ಏನು ಬೇಡಿಕೆಗಳನ್ನು ಈ ಸದನದ ಮುಂದೆ ಏನು ಮಂಡಿಸಿದ್ದಾರೆ ಅದರ ಬಗ್ಗೆ ನಾನು ನಾಲ್ಕಾರು ಮಾತುಗಳನ್ನಾಡುವುದಕ್ಕೆ ಇಚ್ಛಿಸುತ್ತೇನೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಇದರ ಬಗ್ಗೆ ಬಹಳಷ್ಟು ದೀರ್ಘವಾಗಿ ವಿವರಗಳನ್ನು ಹೇಳಿದ್ದಾರೆ. ನಾನು ಹೇಳುವುದೇನೆಂದರೆ ಮಾನ್ಯ ಮುಖ್ಯಮಂತ್ರಿಗಳ ಡಿಮ್ಯಾಂಡ್‌ನಲ್ಲಿ ಮೊದಲು ಆಗಬೇಕಾದಂಥಾದ್ದು ನಮಗೆ ಎಷ್ಟು ರೀಸೋರ್ಸಸ್ ಸಿಗಬೇಕು ಅಷ್ಟು ಸಿಗುತ್ತಾ ಇದೆಯೋ. ಮತ್ತು ಯಾವರೀತಿಯಾಗಿ ಕಾರ್ಯಕ್ರಮಗಳು ಕಾರ್ಯಗತವಾಗಬೇಕೋ ಆ ರೀತಿ ಆಗುತ್ತಿದೆಯೋ? ನಮಗೆ ರಿಸೋರ್ಸಸ್ ಸಿಗತಕ್ಕಂಥ ಕಾಲದಲ್ಲಿ ಅವರು ನೀರಾವರಿ, ವಿದ್ಯುಚ್ಛಕ್ತಿ, ಸಣ್ಣ ನೀರಾವರಿ, ಅತಿ ಸಣ್ಣ ನೀರಾವರಿ ಇದನ್ನು ಹೆಚ್ಚು ಹೆಚ್ಚು ಬೆಳೆಸತಕ್ಕಂಥ ಇದನ್ನು ಹೆಚ್ಚು ಅಭಿವೃದ್ಧಿ ಮಾಡತಕ್ಕಂಥ ಒಂದು ವ್ಯವಸ್ಥೆ ಮಾಡಬೇಕಾದಂಥಾದ್ದು ಅವರ ಆದ್ಯ ಕರ್ತವ್ಯ. ಏತಕ್ಕೆಂದರೆ ಈಗ ಹೈಡ್ರಾಲಿಕ್ ಪ್ರಾಜೆಕ್ಟ್, ಪವರ್ ಜನರೇಷನ್ ಇನ್ನೂ ಬೇರೆ ಬೇಗೆ ಸಣ್ಣ ಸಣ್ಣ ಜನರೇಷನ್ ಇದನ್ನು ಮಾಡಿದರೆ ಅದರಿಂದ ಉತ್ಪಾದನೆ ಜಾಸ್ತಿಯಾಗುತ್ತದೆ. ಇವು ಮೂರಕ್ಕೂ ಅವರು ಹೆಚ್ಚಿನ ಆದ್ಯತೆ ಕೊಟ್ಟು ಕೆಲಸ ಮಾಡಿದರೆ ಆದರ ಪ್ರಕಾರ ನಾವು ಉತ್ಪಾದನೆಯನ್ನು ಹೆಚ್ಚಿಸಲಿಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶದಲ್ಲಿ ನೀರಾವರಿ ಸೌಲಭ್ಯ ಇದೆ. ಈ ನೀರಾವರಿ ಸೌಲಭ್ಯಕ್ಕೆ ಪವರ್ ಜನರೇಷನ್, ಸ್ಮಾಲ್ ಥರ್ಮಲ್ ಪವರ್ ಪ್ಲಾಂಟ್ ಇದನ್ನು ಮಾಡಿದರೆ ನಮ್ಮ ದೇಶದ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕೆ ಸಾಧ್ಯ. ಈ ದಿಶೆಯಲ್ಲಿ ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕಾಗಿ ಇದಕ್ಕೆ ಹೆಚ್ಚಿಗೆ ಹಣವನ್ನು ಸರ್ಕಾರ ಇಡಬೇಕು. ಇದಕ್ಕೆ ಹೆಚ್ಚಿಗೆ ಹಣವನ್ನು ಇಡದೇ ಇರುವುದರಿಂದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರಿಂದ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಸಂಪನ್ಮೂಲಗಳು ಬಹಳಷ್ಟು ಕಡಿಮೆಯಾಗಿದೆ. ನಮಗೆ ಸಂಪನ್ಮೂಲಗಳು ಬರತಕ್ಕಂಥಾದ್ದು ಯಾವುದರಲ್ಲಿ ಎಂದರೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ, ಪ್ರೊಫೆಷನಲ್ ಟ್ಯಾಕ್ಸ್‌ನಿಂದ ಬರಬೇಕು. ನಮಗೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಒಟ್ಟು ೭೩೪ ಕೋಟಿ ರೂಪಾಯಿಗಳು ಬರಬೇಕಾದದ್ದು ಅದರಲ್ಲಿ ೫೮೯ ಕೋಟಿ ರೂಪಾಯಿಗಳು ಬಂದಿವೆ. ಇನ್ನೂ ೧೪೪ ಕೋಟಿ ರೂಪಾಯಿಗಳು ಬಾಕಿ ಇದೆ. ಅವರು ಈ ಬಾಕಿ ಹಣವನ್ನು ಏತಕ್ಕೆ ವಸೂಲ್ ಮಾಡಲಿಲ್ಲ? ಸರ್ಕಾರ ಇದನ್ನು ಗಮನಿಸಬೇಕು. ಅಷ್ಟೇ ಅಲ್ಲ ಅವರು ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಕೆಲವೊಂದನ್ನು ನಾವು ವಸೂಲ್ ಮಾಡುವುದಕ್ಕಾಗುತ್ತಿಲ್ಲ, ೩ ವರ್ಷ ಕಳೆದ ನಂತರ ಅದನ್ನು ವಸೂಲ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಅವರು ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರ ಈ ಒಂದು ನ್ಯೂನತೆಯನ್ನು ಮೊದಲಿನಿಂದಲೂ ಕೂಡ ಪರಿಪಾಲಿಸಿಕೊಂಡು ಬಂದಿರುವುದರಿಂದ ಈ ಬಾಕಿ ಹಣವನ್ನು ವಸೂಲ್ ಮಾಡುವುದಕ್ಕಾಗಲಿಲ್ಲ. ಇದೇ ರೀತಿಯಾಗಿ ಎಲ್ಲಾ ಅಸಸ್‌ಮೆಂಟ್‌ನಲ್ಲೂ ಸೆಂಟ್ರಲ್ ಟ್ಯಾಕ್ಸ್‌ನಲ್ಲೂ, ಕೆಎಸ್‌ಟಿನಲ್ಲೂ ಎಲ್ಲಾ ಟ್ಯಾಕ್ಸ್‌ಗಳಲ್ಲೂ ಕೂಡ ವಸೂಲ್ ಮಾಡಬೇಕಾದ ಬಹಳ ಅಷ್ಟು ಇದೆ. ಬಹಳಷ್ಟು ಹಣ ಅವುಗಳಿಂದ ಬರಬೇಕಾಗಿತ್ತು. ಬರಲಿಲ್ಲವಾದ್ದರಿಂದ ನಮಗೆ ಸಂಪನ್ಮೂಲಗಳು ಬಹಳಷ್ಟು ಕಡಿಮೆಯಾಗಿದೆ. ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಸರ್ಕಾರದವರು ವಿಲೇಜುವಾರು ಯಾವರೀತಿಯಾಗಿ ೨೦ಅಂಶದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತೋ ಆ ರೀತಿಯಾಗಿ ಹಾಕಿಕೊಳ್ಳದೇ ಇರುವುದರಿಂದ ವಿಲೇಜಿನಲ್ಲಿರತಕ್ಕಂಥ ಜನರ ಅಭಿವೃದ್ಧಿಗೆ ಹೆಚ್ಚಿನ ಪ್ರಯೋಜನ ಮಾಡಿಕೊಡಲಿಕ್ಕಾಗಲಿಲ್ಲ. ಉದಾಹರಣೆಗೆ ಹೇಳುವುದಾದರೆ ಈಗಾಗಲೇ ಅವರು ಮಾಡಿರತಕ್ಕಂಥ ಜಿಲ್ಲಾ ಪರಿಷತ್ ಮಂಡಲ್ ಪಂಚಾಯಿತಿಗಳು ಏನು ಇವೆ ಅದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಿಕೊಡುತ್ತೇವೆಂದು ಹೇಳುತ್ತಿದ್ದಾರೆ ವಿನಃ ಅಲ್ಲಿಗೆ ಹೆಚ್ಚು ಹಣವನ್ನು ಒದಗಿಸುತ್ತಾ ಇಲ್ಲ. ಅವರಿಗೆ ಹೆಚ್ಚು ಹಣವನ್ನು ಒದಗಿಸದೇ ಹೋದಪಕ್ಷದಲ್ಲಿ ಆ ಜಿಲ್ಲೆಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಆಗಲಿಕ್ಕಿಲ್ಲ. ಈಗ ಪ್ರತಿಜಿಲ್ಲೆಗೆ ೨-೨ ಮಂತ್ರಿಗಳನ್ನು ಮಾಡಿದ್ದೀರಿ. ಅಧ್ಯಕ್ಷರು ಉಪಾಧ್ಯಕ್ಷರು ಎಂದು ಮಾಡಿದ್ದೀರಿ ಅಲ್ಲಿಯ ಅಧ್ಯಕ್ಷರಿಗೆ ಮಂತ್ರಿ ಪದವಿ ಇದ್ದಹಿಗೆ, ಉಪಾಧ್ಯಕ್ಷರು, ಡೆಪ್ಯೂಟಿ ಮಿನಿಸ್ಟರ್ ಇದ್ದಹಾಗೆ. ಇವರಿಬ್ಬರಿಗೆ ೧೯ ಜಿಲ್ಲೆಗಳಿಂದ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ನೋಡಬೇಕು, ಅವರ ಸಂಬಳ, ಡಿಎ, ಟಿಎ, ಕಾರ್ ಇನ್ನು ಇತರ ಅಲೋಯೆನ್ಸ್‌ಗಳು ಏನು ಇವೆ ಇವೆಲ್ಲಕ್ಕೂ ಅನಾವಶ್ಯಕವಾಗಿ ಹಣವನ್ನು ಖರ್ಚು ಮಾಡುತ್ತೀರಿ. ಅಷ್ಟೇ ಅಲ್ಲದೆ ೧೯ ಜಿಲ್ಲೆಗಳಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸೇರಿಕೊಂಡು ಒಟ್ಟು ೩೮ ಜನರು ಏನು ಇದ್ದಾರೆ ಅವರಿಗೆ ಮಂತ್ರಿ ಸ್ಥಾನ ಮತ್ತು ಡೆಪ್ಯೂಟಿ ಮಿನಿಸ್ಟರ್ ಸ್ಥಾನವನ್ನು ಕೊಟ್ಟಿದ್ದೀರಿ. ಇದರ ಜೊತೆಗೆ ಮಿನಿಸ್ಟರನ್ನು ಎಕ್ಸ್‌ಪ್ಯಾಂಡ್‌ಗೆ ಮಾಡತಕ್ಕಂಥ ಒಂದು ಯೋಜನೆಯನ್ನೂ ಸಹ ಮಾಡಿದ್ದೀರಿ. ನಾನು ಹೇಳುತ್ತೇನೆ ಈ ಮಿನಿಸ್ಟ್ರಿ ಎಕ್ಸ್‌ಪ್ಯಾಂಡ್ ಮಾಡುವುದು ಅವಶ್ಯಕವಾಗಿಲ್ಲ. ಪ್ರತಿಯೊಂದುಜಿಲ್ಲೆಯಲ್ಲೂ ಕೂಡ ಇಬ್ಬಿಬ್ಬರು ಮಂತ್ರಿಗಳ ಪದವಿ ಹಾಗೆ ಇರುವುದರಿಂದ ಇನ್ನು ಮಿನಿಸ್ಟರ್ಸ್‌ನ್ನು ಎಕ್ಸ್‌ಪ್ಯಾಂಡ್ ಮಾಡುವುದು ಅವಶ್ಯಕವಾಗಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಇಲ್ಲಿ ನಮಗೆ ಅನೇಕ ಸಲ ಅಧಿಕಾರಿಗಳನ್ನು ಪದೇ ಪದೇ ವರ್ಗ ಮಾಡುವುದಿಲ್ಲವೆಂದು ಭರವಸೆ ಕೊಟ್ಟಿದ್ದರೂ ಸಹ ಅದರ ಪ್ರಕಾರ ನಡೆದುಕೊಳ್ಳುತ್ತಿಲ್ಲ. ಮೂರು ಮೂರು ತಿಂಗಳಿಗೆಲ್ಲಾ ವರ್ಗ ಮಾಡುವುದರ ಮೂಲಕ ಅಧಿಕಾರಿಗಳಿಗೆ ತೊಂದರೆ ಕೊಡುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಕೊಡಬೇಕೆಂದರೆ, ಜಿಲ್ಲಾ ಪರಿಷತ್‌ಗೆ ಚೀಫ್-ಸೆಕ್ರೆಟರಿ ಅವರನ್ನು ಮತ್ತು ಡೆಪ್ಯೂಟಿ ಕಮೀಷನರ್ ಒಬ್ಬರನ್ನು ನೇಮಕ ಮಾಡಿದ ಎರಡು ದಿವಸಗಳಲ್ಲಿಯೇ ಬೇರೆ ಕಡೆಗೆ ವರ್ಗ ಮಾಡಿ ತೊಂದರೆ ಕೊಟ್ಟಿದ್ದಾರೆ. ಹೀಗೆ ನೇಮಕ ಮಾಡಿದ ಒಂದೆರಡು ದಿನಗಳಲ್ಲಿಯೇ ಮತ್ತೆ ವರ್ಗ ಮಾಡಿದರೆ ಅಂತಹ ಅಧಿಕಾರಿಗಳಿಗೆ ಬಹಳ ತೊಂದರೆ ಆಗುತ್ತದೆ. ಇದರ ಜೊತೆಗೆ ಕೆಲವು ಅಧಿಕಾರಿಗಳನ್ನು ಅವರು ಇಷ್ಟಪಡದ ಜಾಗಗಳಿಗೆ ಹಾಕಿ ತೊಂದರೆ ಕೊಡುತ್ತಿದ್ದಾರೆ, ಇದು ಸರಿಯಾದ ಕ್ರಮವಲ್ಲ. ಅಧಿಕಾರಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವರ್ಗಾವಣೆ ಮಾಡಬೇಕೆಂದು ನಾನು ಹೇಳುತ್ತೇನೆ

ಮಾನ್ಯ ಗುಂಡೂರಾವ್ ಅವರ ಕಾಲದಲ್ಲಿ ಸುಮಾರು ೪೦ ಕಾರ್ಪೊರೇಷನ್‌ಗಳನ್ನು ರದ್ದು ಮಾಡಲಾಯಿತು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಾರ್ಪೊರೇಷನ್‌ಗಳ ಸಂಖ್ಯೆ ಹೆಚ್ಚುತ್ತಿದೆ. ಈ ಕಾರ್ಪೊರೇಷನ್‌ಗಳಿಗೆ ಸರ್ಕಾರದವರು ತಮಗೆ ಬೇಕಾದವರನ್ನು ಅಧ್ಯಕ್ಷರನ್ನಾಗಿ ಮತ್ತು ಸದಸ್ಯರನ್ನಾಗಿ ನೇಮಕ ಮಾಡುತ್ತಿದ್ದಾರೆ. ಈ ಕಾರ್ಪೊರೇಷನ್‌ಗಳಿಗೆ ಸರ್ಕಾರದವರು ಒದಗಿಸುತ್ತಿರುವ ಹಣ ಸರಿಯಾಗಿ ಖರ್ಚಾಗದ ಕಾರಣ, ಸರ್ಕಾರಕ್ಕೆ ನಷ್ಟವಾಗುತ್ತಿದೆ. ಈಗ ಇರುವಂಥ ಯಾವ

ಕಾರ್ಪೊರೇಷನ್‌ಗಳು ಸಹಸರಿಯಾಗಿ ಕೆಲಸ ಮಾಡುತ್ತಿಲ್ಲ. ಆದ್ದರಿಂದ ಇವುಗಳಲ್ಲಿ ಕೆಲವನ್ನು ರದ್ದು ಮಾಡುವುದು ಸೂಕ್ತ ಎಂದು ನಾನು ಹೇಳುತ್ತೇನೆ. ಸರಿಯಾಗಿ ಕೆಲಸ ಮಾಡದ ಕಾರ್ಪೊರೇಷನ್‌ಗಳಿಗೆ ವ್ಯರ್ಥವಾಗಿ ಹಣ ಖರ್ಚು ಮಾಡುವ ಬದಲು ಅದೇ ಹಣವನ್ನು ಕರ್ನಾಟಕ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದು ಒಳ್ಳೆಯದು. ಈ ಕಾರ್ಪೊರೇಷನ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಬದಲು, ಅತಿ ಮುಖ್ಯವಾದ ಕಾರ್ಪೊರೇಷನ್‌ಗಳನ್ನು ಉಳಿಸಿಕೊಂಡು ಇನ್ನಿತರ ಕಾರ್ಪೊರೇಷನ್‌ಗಳನ್ನು ರದ್ದು ಮಾಡುವುದು ಒಳ್ಳೆಯದೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ಪಬ್ಲಿಕ್ ಗ್ರಿವೆನ್ಸಸ್ ಸೆಲ್ ಎಂದು ಇದೆ. ಇದು ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಮಾಡುತ್ತಿದೆ. ಈ ಸೆಲ್‌ಗೆ ಬರುವಂತಹ ಮನವಿಗಳ ಪೈಕಿ ಎಷ್ಟು ಇತ್ಯರ್ಥವಾಗಿವೆ ಎಂಬುದನ್ನು ನೋಡಿದಾಗ, ಬಹಳ ಕಡಿಮೆ ಸಂಖ್ಯೆಯಲ್ಲಿ ಇತ್ಯರ್ಥವಾಗಿವೆ. ಅನೇಕ ಮನವಿಗಳನ್ನು ಇತ್ಯರ್ಥ ಮಾಡದೆ ಹಾಗೆಯೇ ಉಳಿಸುತ್ತಾರೆ. ಇಲ್ಲಿಗೆ ಬಂದಂಥ ಎಲ್ಲಾ ಪಿಟಿಷನ್‌ಗಳನ್ನು ಸಹ ಜಾಗ್ರತೆ ಇತ್ಯರ್ಥ ಮಾಡಬೇಕು. ಒಟ್ಟಿನಲ್ಲಿ ಈ ವಿಭಾಗ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂದು ನಾನು ಹೇಳುತ್ತೇನೆ.

ಇನ್ನು ಕನ್ನಡದ ಅಭಿವೃದ್ಧಿಯಾಗಬೇಕೆಂದು ಅನೇಕ ವರ್ಷಗಳಿಂದ ಚಳುವಳಿ ನಡೆಯುತ್ತಿವೆ, ಆದರೆ ಇವೊತ್ತಿನ ದಿವಸ ಎಲ್ಲಾ ಶಾಲೆಗಳಲ್ಲಿಯೂ ಕನ್ನಡವನ್ನು ಹೇಳಿ ಕೊಡುವ ವ್ಯವಸ್ಥೆ ಇಲ್ಲ. ಹೊಸದಾಗಿ ಕನ್ನಡ ಶಾಲೆಗಳನ್ನು ತೆರೆಯುವುದಕ್ಕೆ ಬದಲು ಇಂಗ್ಲೀಷ್ ಶಾಲೆಗಳನ್ನು ತೆರೆಯುವಂತಹ ಪ್ರಸಂಗ ಈ ಸರ್ಕಾರದ ಆಡಳಿತದಲ್ಲಿ ನಡೆದಿದೆ. ೧೫೦ ಇಂಗ್ಲೀಷ್ ಕಾನ್‌ವೆಂಟ್ ಶಾಲೆಗಳನ್ನು ತೆರೆಯಲು ಸರ್ಕಾರ ಅನುಮತಿ ಕೊಟ್ಟಿರುವ ಸುದ್ದಿ ಪತ್ರಿಕೆಗಳಲ್ಲಿ ಬಂದಿದೆ ಈ ರೀತಿಯಾದರೆ ನಮ್ಮ ರಾಜ್ಯದಲ್ಲಿ ಕನ್ನಡಭಾಷೆ ಯಾವ ರೀತಿ ಬೆಳೆಯುತ್ತದೆ? ಕನ್ನಡಭಾಷೆಯು ಬೆಳವಣಿಗೆ ಆಗಬೇಕೆಂದು ಪ್ರತಿಯೊಬ್ಬರೂ ಬಾಯಲ್ಲಿ ಹೇಳಿದರೆ ಆಗುತ್ತದೆಯೇ? ಕನ್ನಡಭಾಷೆಯು ಬೆಳವಣಿಗೆ ಆಗಬೇಕೆಂದು ಸಾಕಷ್ಟು ಗ್ರಂಥಗಳನ್ನು ಬರೆಯಿಸಿ ಅವುಗಳನ್ನು ಬೈಬಲ್ ತರಹ ಒಂದು ಕಡೆ ಇಟ್ಟರೆ ಕನ್ನಡಭಾಷೆ ಬೆಳೆಯುವುದಿಲ್ಲ. ಮಕ್ಕಳಿಗೆ ಸಣ್ಣ ವಯಸ್ಸಿನಲ್ಲಿಯೇ ಅಂದರೆ ಮೊದಲನೆಯ ತರಗತಿಯಿಂದಲೇ ಕನ್ನಡವನ್ನು ಕಲಿಸುವುದಕ್ಕೆ ವ್ಯವಸ್ಥೆ ಮಾಡಿದರೆ ಕನ್ನಡಭಾಷೆ ಬೆಳೆಯುತ್ತದೆ ಇಲ್ಲದಿದ್ದರೆ ಬೆಳೆಯುವುದಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಅನೇಕ ಭಾಷೆಗಳಲ್ಲಿ ಮಾತನಾಡುವಂತಹ ಜನರು ಇದ್ದಾರೆ. ಹೀಗೆ ಬೇರೆ ಬೇರೆ ಭಾಷೆಗಳನ್ನು ಬಳಸುವಂತಹ ಜನರ ಮಕ್ಕಳಿಗೂ ಸಹ ಮೊದಲನೆಯ ತರಗತಿಯಿಂದಲೇ ಕನ್ನಡಭಾಷೆ ಕಲಿಸುವಂತಹ ವ್ಯವಸ್ಥೆ ಮಾಡಬೇಕೆ ಹೊರತು, ಇದಕ್ಕಾಗಿ ಪ್ರತ್ಯೇಕ ಸಮಿತಿಗಳನ್ನು ನೇಮಕ ಮಾಡಿದರೆ ಇಲ್ಲವೆ ಕಾನೂನುಗಳನ್ನು ಮಾಡಿದರೆ ಕನ್ನಡಭಾಷೆ ಖಂಡಿತ ವಾಗಿ ಬೆಳೆಯುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ತಮಿಳು, ತೆಲುಗು, ಹಾಗೂ ಇನ್ನಿತರ ಭಾಷೆಗಳ ಶಾಲೆಗಳು ಏನಿವೆ, ಅಲ್ಲಿ ಕನ್ನಡವನ್ನು ಮೊದಲನೆಯ ತರಗತಿಯಿಂದಲೇ ಮಕ್ಕಳಿಗೆ ಕಲಿಸಲು ಸರ್ಕಾರದವರು ಪ್ರಯತ್ನ ಮಾಡಬೇಕು.

ಆಗ ಪ್ರತಿಯೊಬ್ಬರ ಮನಸ್ಸಿನಲ್ಲಿ ಕನ್ನಡದ ಬೆಳವಣಿಗೆಯಾಗುತ್ತದೆ, ಕರ್ನಾಟಕದಲ್ಲಿ ಕನ್ನಡ ಖಂಡಿತವಾಗಿ ಮಾತೃ ಭಾಷೆಯಾಗಿ ಉಳಿಯುತ್ತದೆ. ಇಲ್ಲದೇ ಹೋದರೆ ಇದು ಆಗಲಿಕ್ಕೆ ಸಾಧ್ಯವಿಲ್ಲ. ನೀವು ಕನ್ನಡವನ್ನು ಬೆಳೆಸತಕ್ಕಂಥ ಮನೋಭಾವವನ್ನು ಮಾಡದೇಹೋದರೆ ಖಂಡಿತವಾಗಿಯೂ ಕನ್ನಡ ದಿನದಿನಕ್ಕೆ ನಶಿಸಿ ಹೋಗುತ್ತದೆಯೇ ವಿನಹ ಅದು ಬೆಳೆಯಲಾರದು. ಇವತ್ತು ಬೆಂಗಳೂರು ಸಿಟಿಯನ್ನು ತೆಗೆದುಕೊಂಡರೆ ಇಲ್ಲಿ ೨೫ ಪರ್ಸೆಂಟ್ ಕನ್ನಡ ಮಾತನಾಡುವವರಿಲ್ಲ. ಈ ಪರಿಸ್ಥಿತಿಯಲ್ಲಿ ಕನ್ನಡವನ್ನು ಬೆಳೆಸತಕ್ಕ ಕೆಲಸವನ್ನು ಮಾಡದೇ ಹೋದರೆ ಖಂಡಿತವಾಗಿ ಕನ್ನಡ ಬೆಳೆಯುವುದಕ್ಕೆ ಸಾಧ್ಯವಾಗಲಾರದು ಎಂದು ಇಲ್ಲಿ ನಾನು ಹೇಳುತ್ತಾ ಇದ್ದೇನೆ.

ಮಾನ್ಯ ಅಧ್ಯಕ್ಷರೆ, ಸೆಕ್ರೆಟರಿಯೇಟ್ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುವುದಾದರೆ ಇವತ್ತು ಸುಮಾರು ೧೨ ಸಾವಿರಕ್ಕಿಂತ ಹೆಚ್ಚು ಜನ ಸೆಕ್ರೆಟರಿಯೇಟ್‌ನಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಆದರೆ ಏನು ಕೆಲಸ ಆಗುತ್ತದೆ, ಏನು ಆಗುತ್ತಾ ಇಲ್ಲ ಎಂದು ತಿಳಿಯುವುದಿಲ್ಲ, ಒಂದೊಂದು ಫೈಲು ೩ ವರ್ಷ, ೪ ವರ್ಷ ಒಂದೊಂದು ಆಫೀಸಿನಲ್ಲಿ ಉಳಿಯುವುದಾದರೆ ಯಾವ ರೀತಿ ಜನರ ಕೆಲಸ ಕಾರ್ಯಗಳು ಆಗುತ್ತವೆ ಎಂದು ನೋಡಬೇಕಾಗಿದೆ. ಬೆಳಿಗ್ಗೆ ಹತ್ತೂವರೆ ಗಂಟೆಗೆ ನೌಕರರು ಆಫೀಸಿಗೆ ಬಂದರೆ ಮತ್ತೆ ಹನ್ನೊಂದೂವರೆ ಗಂಟೆಗೆ ಕಾಫಿಗೆ ಹೋಗತಕ್ಕಂಥಾದ್ದು ಮತ್ತೆ ೧೨ ಗಂಟೆಗೆ ಊಟಕ್ಕೆ ಹೋಗತಕ್ಕಂಥಾದ್ದು, ಪುನಃ ಕಾಫಿಗೆ ಹೋಗತಕ್ಕಂಥಾದ್ದು ಹೀಗೆ ಹೋಗಿ ಬರುವುದರಲ್ಲೇ ನಾಲ್ಕೈದು

ಗಂಟೆಗಳ ಕಾಲ ಕಳೆದುಹೋಗುತ್ತದೆ. ಇದರ ಬಗ್ಗೆ ಏನಾದರೂ ಒಂದು ಕ್ರಮವನ್ನು ಸರ್ಕಾರ ತೆಗೆದುಕೊಳ್ಳದೇ ಹೋದರೆ ಖಂಡಿತವಾಗಿ ಕೆಲಸ ಆಗಲಿಕ್ಕೆ ಸಾಧ್ಯವಿಲ್ಲ, ಇಲ್ಲಿಂದ ಹಿಡಿದು ವಿಲೇಜ್ ಅಕೌಂಟೆಂಟ್‌ರವರೆಗೆ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಇದಕ್ಕೋಸ್ಕರ ಭ್ರಷ್ಟಾಚಾರ ಹೆಚ್ಚಾಗ ತಕ್ಕಂಥಾದ್ದು ಇದೆ ಎಂದು ಹೇಳಬೇಕಾಗುತ್ತದೆ. ಈ ಭ್ರಷ್ಟಾಚಾರವನ್ನು ನಿಲ್ಲಿಸುವ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಎಲ್ಲರೂ ಒಂದೇ ಹಂತದಲ್ಲಿ ಇದನ್ನು ಮಾಡುತ್ತಾ ಹೋದರೆ ಯಾವ ರೀತಿಯಲ್ಲಿ ಜನಸೇವೆ ಮಾಡುವುದಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ನೀವು ಯೋಚಿಸಬೇಕಾಗುತ್ತದೆ. ಎಲ್ಲಾ ಅಧಿಕಾರಿಗಳೂ ಕೆಟ್ಟ ಅಧಿಕಾರಿಗಳಲ್ಲ. ಕೆಲವು ಒಳ್ಳೆಯ ಅಧಿಕಾರಿಗಳನ್ನು, ಕೆಟ್ಟ ಅಧಿಕಾರಿಗಳಾಗಿ ಮಾಡುತ್ತಾರೆ. ಇಂತಹ ಪ್ರಸಂಗ ಇಲ್ಲಿ ನಡೆದಿದೆ. ಸರ್ಕಾರದ ಅಧಿಕಾರಿಗಳಲ್ಲಿ ಮತ್ತು ಮಂತ್ರಿಗಳಲ್ಲಿ ಮತ್ತು ಜನಗಳಲ್ಲಿ ಹೊಂದಾಣಿಕೆ ಇಲ್ಲದೇ ಹೋದರೆ ಖಂಡಿತವಾಗಿಯೂ ಸರ್ಕಾರವನ್ನು ನಡೆಸಲಿಕ್ಕೆ ಸಾಧ್ಯತೆ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಮರಗೋಡು ಎಂಬ ಜಾಗದಲ್ಲಿ ಶಾಲಾ ಮಕ್ಕಳಿಗೋಸ್ಕರ ಪೈಪು ಮೂಲಕ ನೀರು ಹೋಗುತ್ತಿತ್ತು. ನಂತರ ಒಬ್ಬ ವ್ಯಕ್ತಿಗೋಸ್ಕರ ಹೊಸ ಪೈಪನ್ನು ಹಾಕಿ ನೀರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟರು. ಅಸಿಸ್ಟೆಂಟ್ ಕಮೀಷನರ್ ಮೇಲೆ ಜನತಾ ಕಾರ್ಯಕರ್ತರು ಭಾರ ಹೇರಿ ಅಲ್ಲಿಂದ ಒಂದು ಹೊಸ ಪೈಪನ್ನು ಅವರ ಮನೆಗೆ ತೆಗೆದುಕೊಂಡು ಹೋಗತಕ್ಕ ಪ್ರಯತ್ನ ಮಾಡಿದರು. ಆದಗೆ ಮಕ್ಕಳು ಸ್ಟ್ರೈಕ್ ಮಾಡುವುದರ ಮೂಲಕ ಇದನ್ನು ನಿಲ್ಲಿಸಿದರು. ಈ ರೀತಿ ವಿಲೇಜಿನಲ್ಲಿ ಸಣ್ಣ ಸಣ್ಣ ಅಧಿಕಾರಿಗಳು ಇದ್ದಾರೆ. ವಿಲೇಜ್ ಅಕೌಂಟೆಂಟ್ ವರ್ಷಾನುಗಟ್ಟಲೆ ಕೆಲಸ ಮಾಡುತ್ತಾ ಇಲ್ಲ, ತಹಶೀಲ್ದಾರ್ ಕೆಲಸ ಮಾಡುತ್ತಾ ಇಲ್ಲ. ಮುಂದೆ ಬರತಕ್ಕಂಥ ಪ್ರತಿಯೊಬ್ಬ ಅಧಿಕಾರಿಯೂ ಕೆಲಸವನ್ನು ನಿಧಾನ ಮಾಡುವುದಾದರೆ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಕಡತ ವಿಲೇವಾರಿ ಯಾವ ರೀತಿ ಮಾಡುತ್ತಿದ್ದರೋ ಆ ರೀತಿ ಮಾಡುವುದಾದರೆ ಸ್ವಲ್ಪವಾದರೂ ಮುಂದೆ ಪ್ರಯೋಜನವಾಗಲಿಕ್ಕೆ ಸಾಧ್ಯತೆ ಇದೆ ಎಂದು ನಾನು ಇಲ್ಲಿ ಹೇಳಬಯಸುತ್ತಾ ಇದ್ದೇನೆ. ಆದುದರಿಂದ ಸರ್ಕಾರ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು. ಯಾವ ಅಧಿಕಾರಿಗಳಿಗೆ ಕೆಲಸ ಮಾಡಲಿಕ್ಕೆ ಆಗುವುದಿಲ್ಲ, ಕೆಲಸ ಮಾಡುವ ಮನಸ್ಸಿಲ್ಲ ಅವರು ನೇರವಾಗಿ ರೆಸಿಗ್ನೇಷನ್ ಕೊಟ್ಟು ಮನೆಗೆ ಹೋಗ ಬೇಕು. ಅವರಿಗೆ ಸರ್ಕಾರ ಗ್ರಾಚ್ಯುಯಿಟಿ, ಪ್ರಾವಿಡೆಂಟ್‌ಫಂಡ್ ಮುಂತಾದ ಸೌಲಭ್ಯಗಳನ್ನು ಕೊಟ್ಟು ಕಳುಹಿಸಬೇಕು, ಬೇರೆ ಯಾರಾದರೂ ಆ ಕೆಲಸವನ್ನು ಮಾಡಿಕೊಳ್ಳಬಹುದು. ಅಂತಹ ಅಧಿಕಾರಿಗಳಿದ್ದರೆ ಈ ದೇಶ ಅಭಿವೃದ್ಧಿಯಾಗುವಂಥ ಸಾಧ್ಯತೆ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಸುಮಾರು ೫೦ರಿಂದ ೬೦ ಸಾವಿರ ಹುದ್ದೆಗಳು ಖಾಲಿ ಇವೆ, ಇದನ್ನು ಭರ್ತಿ ಮಾಡುತ್ತಾ ಇಲ್ಲ, ಆಮೇಲೆ ಕಾಂಟ್ರಾಕ್ಟ್ ಲೇಬರರ್ಸ್ ಇದ್ದಾರೆ, ಕಾಂಟ್ರಾಕ್ಟ್ ಟೀಚರ್ಸ್ ಇದ್ದಾರೆ, ಸ್ಟೈಫಂಡರಿ ಗ್ರಾಜುಯೇಟ್ಸ್ ಇದ್ದಾರೆ. ಇವರು ಸ್ಟ್ರೈಕ್ ಮಾಡುತ್ತಾ ಇದ್ದಾರೆ. ಅವರಿಗೆ ಕಷ್ಟವಾಗುತ್ತಿದೆ. ಅವರ ಕಷ್ಟವನ್ನು ಪರಿಹಾರ ಮಾಡತಕ್ಕಂಥ ಯೋಚನೆ ಇವತ್ತಿನ ಸರ್ಕಾರದಲ್ಲಿಲ್ಲ, ಇದನ್ನು ಮಾಡದೇ ಹೋದ ಪಕ್ಷದಲ್ಲಿ, ೫೨ ಸಾವಿರ ವೆಕೆನ್ಸೀಸ್ ಏನಿದೆ ಅದನ್ನು ಫಿಲಪ್ ಮಾಡಿದರೆ ಈ ಕೆಲಸ ಮುಗಿದು ಹೋಗುತ್ತದೆ. ಮುಂದೆ ೩೦–೪೦ ಸಾವಿರ ಅಧಿಕಾರಿಗಳು ನಿವೃತ್ತರಾಗಲಿದ್ದಾರೆ. ಇವರಿಗೆ ಹಿಂದೆ ಮೂರು ವರ್ಷಗಳ ಅವಧಿಯನ್ನು ಹೆಚ್ಚಿಸಿದ್ದರಿಂದ ಈ ವರ್ಷ ಬಹಳಷ್ಟು ಜನ ನಿವೃತ್ತಿಯಾಗಲಿದ್ದಾರೆ. ಆ ಸ್ಥಾನಗಳನ್ನು ಭರ್ತಿ ಮಾಡತಕ್ಕ ಕಾಲದಲ್ಲಿ ಸ್ಟೈಫಂಡರೀ ಗ್ರಾಜುಯೇಟ್ಸ್‌ಗೆ ಕಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡತಕ್ಕವರು, ಮತ್ತು ಲೋಕಲ್ ಕ್ಯಾಂಡಿಡೇಟುಗಳನ್ನು ಕೂಡ ಭರ್ತಿ ಮಾಡಿ, ಅವರ ಕಷ್ಟವನ್ನು ಪರಿಹಾರ ಮಾಡತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಸರ್ಕಾರ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳನ್ನು ನಾಮಕಾವಸ್ಥೆಗೆ ಮಾಡಿದರೆ ಏನೂ ಆಗುವುದಿಲ್ಲ. ಸರಿಯಾದಂಥ ಕಾನೂನು ಕಟ್ಟಳೆಗಳನ್ನು ಮಾಡಿ. ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ಕೊಟ್ಟು ಆದಷ್ಟು ಬೇಗ ಗ್ರಾಮೀಣ ಮಟ್ಟದಲ್ಲಿ ರಾಮರಾಜ್ಯ ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದೇ ಹೋದರೆ, ಇವತ್ತು ಎಲೆಕ್ಷನ್ ಆಯಿತು, ಕೋಟಿಗಟ್ಟಲೆ ಹಣ ಖರ್ಚಾಯಿತು, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳಿಗೆ ಸದಸ್ಯರುಗಳು ಬಂದರು, ಅಧ್ಯಕ್ಷರುಗಳು ಆದರು, ಹಣ ವ್ಯರ್ಥವಾಯಿತು, ಇದರಿಂದ ದೇಶದ ಆರ್ಥಿಕ ಸ್ಥಿತಿಯೂ ಹಾಳಾಯಿತು ಎಂಬಂತೆ ಆಗಬಾರದು. ಕಾಲ ಕಾಲಕ್ಕೆ ಸರಿಯಾಗಿ ಹಣ ಬಿಡುಗಡೆ ಮಾಡಬೇಕು. ಇವತ್ತು ಏನಾಗುತ್ತಿದೆ ಮಾರ್ಚಿ ೩೦ನೇ ತಾರೀಖು ಹಣ

ಬಿಡುಗಡೆ ಮಾಡುತ್ತಾರೆ. ೩೧ನೇ ತಾರೀಖು ಬಿಡುಗಡೆ ಮಾಡಿದಂಥ ಹಣ ಲ್ಯಾಪ್ಸ್ ಆಗುತ್ತದೆ. ಇಂಥ ಪರಿಸ್ಥಿತಿ ಬರಬಾರದು. ಕೋಟಿಗಟ್ಟಲೆ ಹಣ ಕಳೆದ ೨-೩ ವರ್ಷಗಳಿಂದ ನಿಂತುಹೋಗಿದೆ. ಪ್ರತಿಯೊಂದು ನಿಮಿಷಕ್ಕೂ ಬೆಲೆ ಇದೆ ಎಂಬುದನ್ನು ತಿಳಿದುಕೊಂಡು ದಿನನಿತ್ಯ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ಮಾಡಬೇಕು ಎಬ ಬಗ್ಗೆ ನೌಕರ ವರ್ಗಗಳಲ್ಲಿ ಅರಿವು ಮೂಡಬೇಕಾಗುತ್ತದೆ. ಎಲ್ಲರೂ ಸರಿಸಮವಾಗಿ ಕೆಲಸ ಮಾಡಿದರೆ, ದೇಶ ಬೆಳೆಯುತ್ತದೆ, ಜನಗಳ ಕಲ್ಯಾಣವಾಗುತ್ತದೆ ಎನ್ನುವ ಮಾತುಗಳನ್ನು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಯು, ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಬೇಡಿಕೆಗಳನ್ನು ಮಂಡಿಸಿದ್ದಾರೆ. ಅವುಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.—ತಾವು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ ೧೫ ನಿಮಿಷದಲ್ಲಿ ಮುಗಿಸುತ್ತೀರಾ ?

ಶ್ರೀ ಯು. ಭೂಪತಿ.—ಮಾನ್ಯ ಮುಖ್ಯಮಂತ್ರಿಗಳ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡುವಾಗ ಕೆಲವು ನೀತಿ ವಿಚಾರದಲ್ಲಿಯೂ ಕೂಡ ಇಲ್ಲಿ ನಾವು ಪ್ರಸ್ತಾಪ ಮಾಡಬೇಕಾಗಿದೆ. ಏಕೆಂದರೆ, ಪ್ರಾರಂಭದಿಂದಲೂ ಕೂಡಾ ಜನತಾ ಪಕ್ಷದ ಸರ್ಕಾರ ಮೌಲ್ಯಾಧಾರಿತ ರಾಜಕಾರಣದಲ್ಲಿ ನಂಬಿಕೆ ಇಟ್ಟುಕೊಂಡು, ಅದನ್ನು ಪ್ರತಿಪಾದನೆ ಮಾಡಿಕೊಂಡು ಬಂದಿದೆ. ಇವತ್ತು ಸರ್ಕಾರದ ಮೌಲ್ಯ ಎಲ್ಲಿಯವರೆಗೆ ಬಂದಿದೆ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ತಮ್ಮ ಮುಂದೆ ನಿಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಸರ್ಕಾರ ಸ್ವತಂತ್ರವಾಗಿ ಕೆಲಸ ಮಾಡತಕ್ಕ ನ್ಯಾಯಾಲಯಗಳಲ್ಲಿಯೂ ಕೂಡ ಕೈಹಾಕತಕ್ಕ ಪ್ರಯತ್ನ ಮಾಡಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. 'ಇನ್‌ಕ್ವೆಸ್ಟ್' ಪತ್ರಿಕೆಯಲ್ಲಿ ನ್ಯಾಯಾಲಯದಲ್ಲಿ ಸರ್ಕಾರ ಯಾವರೀತಿ ಕೈಹಾಕುತ್ತಿದೆ ಎನ್ನುವ ಬಗ್ಗೆ ಲೇಖನಗಳು ಬಂದಿವೆ. ''Did Hegde tamper with judiciary?'' ಇದರಲ್ಲಿ ದೊಡ್ಡ ಕಥೆ ಇದೆ. ಹಿಂದೆ ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪ ಮಾಡಿದಂಥ ವಿಚಾರ, ಈ ವಿಚಾರದ ಬಗ್ಗೆ ಹೈಕೋರ್ಟಿನಲ್ಲಿ ಮೊಕದ್ದಮೆಯನ್ನು ಹಿಂದೂಸ್ಥಾನ್ ಟೈಂಸ್ ಪತ್ರಿಕೆಯ ಎಡಿಟರ್‌ರವರು, ಪಬ್ಲಿಷರ್‌ರವರು, ಪ್ರತಿನಿಧಿಗಳು ಹಾಗೂ ಸುಬ್ಬಯ್ಯನವರು, ರಂಗಸ್ವಾಮಿ ಎನ್ನುವ ವ್ಯಕ್ತಿ ಒಂದು ಕಡೆ, ಮತ್ತೊಂದು ಕಡೆ, ನೇರವಾಗಿ ಆಪಾದನೆ ಇರತಕ್ಕ ಮಾನ್ಯ ಮುಖ್ಯಮಂತ್ರಿಗಳು ಮೊದಲು ಇದ್ದಂಥ ಡಿ. ಜಿ. ಪಿ. ಗರುಡಾಚಾರ್‌ರವರು. ಈ ಒಂದು ಶಿರೋನಾಮೆ ಅಡಿಯಲ್ಲಿ. ''Mr. Hegde in job racket'' ಆರ್ಟಿಕಲ್ ಬಂದಮೇಲೆ. ಇದನ್ನು ಮಾನ್ಯ ಮುಖ್ಯ ಮಂತ್ರಿಗಳು ದೆಲ್ಲಿಯಲ್ಲಿ ನೋಡಿ ನಾನು ಈ ಪತ್ರಿಕೆಯ ಮೇಲೆ ಕೇಸ್ ಹಾಕುತ್ತೇನೆ, ಡೆಫರ್‌ಮೇಷನ್ ಹಾಕುತ್ತೇನೆ ಎಂದು ಹೇಳಿದ್ದು ಕೂಡ ನಿಜ. ಆದರೆ ಇಲ್ಲಿ ಬಹಳ ವಿಚಿತ್ರ ಎಂದು ಹೇಳಿದರೆ ಹಾಸನ ಜಿಲ್ಲೆಯ ಸಕಲೇಶಪುರದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಗರುಡಾಚಾರ್ ಅವರ ಬಾವಮೈದ ನರಸಿಂಹ ಐಯ್ಯಂಗಾರ್ ಅವರು ಮಾನ ನಷ್ಟ ಮೊಕದ್ದಮೆ ಹೂಡಿದ್ದರು. ಅಲ್ಲಿ ಈ ಅರ್ಜಿದಾರರು, ಆ ಕೋರ್ಟ್ ವ್ಯಾಪ್ತಿಗೆ ಈ ಕೇಸು ಬರುವುದಿಲ್ಲ ಎಂದು ಹೇಳಿ ಹೈಕೋರ್ಟಿಗೆ ಮನವಿಯನ್ನು ಸಲ್ಲಿಸಿದಾಗ ಹೈಕೋರ್ಟ್, ಸಕಲೇಶಪುರದ ಕೋರ್ಟಿಗೆ ಒಂದು ಆದೇಶವನ್ನು ಕಳುಹಿಸುತ್ತದೆ. ಅದು ಏನು ಅಂದರೆ, ನಿಮ್ಮ ನ್ಯಾಯಾಲಯದ ಕಡತದ ಸಂಖ್ಯೆ ಪಿಸಿಆರ್ ಸಂಖ್ಯೆ ೧೧-೮೬ ಸಿಸಿ ೪೪೨-೮೬ ಅಂದಿನ ಕಾರ್ಯಕಲಾಪಗಳನ್ನು ಕರ್ನಾಟಕ ಹೈಕೋರ್ಟ್ ಮೂಲಕ ತಡೆಹಿಡಿದಿದೆ ಎಂಬ ಆದೇಶವನ್ನು ಸಕಲೇಶಪುರದ ಪ್ರಥಮ ದರ್ಜೆ ನ್ಯಾಯಾಲಯದ ನ್ಯಾಯಮೂರ್ತಿಗಳ ವಿಳಾಸಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಇದರಲ್ಲಿ ಏನಾಗಿದೆ ಎಂದರೆ ಹೈಕೋರ್ಟಿನವರು ಕಳುಹಿಸಿದಂಥ ಆದೇಶದಲ್ಲಿ ತಿದ್ದುಪಡಿ ಆಗಿದೆ. ಅಲ್ಲಿನ ನ್ಯಾಯಮೂರ್ತಿಗಳು ಕೊಟ್ಟಂಥ ಆದೇಶದನಂತರ ಅಲ್ಲಿರತಕ್ಕಂಥ ಕೆಲವು ಉದ್ಯೋಗಿಗಳು ಅದನ್ನು ತಿದ್ದುಪಡಿ ಮಾಡಿದ್ದಾರೆ ಎನ್ನತಕ್ಕ ವಿಚಾರ. ಅದು ನನಗನಿಸುತ್ತದೆ, ಇಂತಹ ಒಂದು ದೊಡ್ಡ ವ್ಯಕ್ತಿಗಳಿಗೆ ಸಂಬಂಧಪಟ್ಟಂತಹ ಒಂದು ಕೇಸಿನ ಬಗ್ಗೆ ಯಾವ ಒಬ್ಬ ನೌಕರನೂ ಕೂಡ ಒಂದು ವೆಸ್ಟೆಡ್ ಇಂಟರೆಸ್ಟ್ ಇಟ್ಟುಕೊಳ್ಳಲಾರ, ಅವನಿಗೆ ಏನು ಬೇಕಾಗುತ್ತದೆ? ಒಂದು ವಾಕ್ಯವನ್ನು ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಅವನಿಗೇನೂ ಬರುವುದಿಲ್ಲ. ಪತ್ರಿಕೆಯಲ್ಲಿ ಬಂದಿರತಕ್ಕ ಲೇಖನದ ಪ್ರಕಾರ ಇದರಲ್ಲಿ ಮುಖ್ಯಮಂತ್ರಿಗಳು ಮತ್ತು ಗರುಡಾಚಾರ್ ಅವರು ಈ ಕಡೆ ಒಂದು ಆಪಾದನೆ ಇದ್ದುದರಿಂದ ನೇರವಾದ

ಕೈವಾಡ ಇದರಲ್ಲಿ ಇದೆ ಎನ್ನುವ ವಾದವನ್ನು ಪತ್ರಿಕೆಯಲ್ಲಿ ಪ್ರಕಟಮಾಡಿದ್ದಾರೆ. ಇವರು ಈ ಹೈಕೋರ್ಟ್ ಕೊಟ್ಟಂತಹ ಆದೇಶಕ್ಕೆ ಸೇರಿದಂಥ ವಾಕ್ಯ ಏನಿದೆ ಅದನ್ನು ಹೈಕೋರ್ಟ್ ಕೊಟ್ಟ ಭಾಷೆಯಲ್ಲಿಯೇ ಹೇಳುವುದಾದರೆ,

"The High Court of Karnataka hereby stays all further proceedings." PCR No. 11/86-CC 442-86 on the file of a

High Court. ಎಂದು ಇದ್ದಂಥ ಆದೇಶಕ್ಕೆ ಮುಂದೆ ಸೇರಿಸಿರತಕ್ಕಂಥ ವಾಕ್ಯ ಯಾವುದು. This has happened because officials of Karnataka High Court added the following sentence orders of the Judge order "in so far as it relates to the petitioners only." ಎತನ್ನತಕ್ಕ ಈ ಒಂದು ವಾಕ್ಯ ಏನಿದೆ, ಈ ವಾಕ್ಯವನ್ನು ಹೈಕೋರ್ಟ್ ನ್ಯಾಯಾಧೀಶರು ಕೊಟ್ಟಂಥ ಆದೇಶಕ್ಕೆ ಸೇರಿಸಿದ್ದಾರೆ, ಎನ್ನತಕ್ಕಂತಾದ್ದನ್ನು ಹೈಕೋರ್ಟಿನ ನ್ಯಾಯಾಧೀಶರು ಇದರ ಬಗ್ಗೆ ಪತ್ತೆ ಮಾಡಿದ್ದಾರೆ. ಅವರಿಗೆ ಆಶ್ಚರ್ಯವಾಗಿದೆ, ದಿಗ್ಭ್ರಮೆಯನ್ನು ವ್ಯಕ್ತಪಡಿಸಿದ್ದಾರೆ. ತನಿಖೆಗೂ ಆದೇಶ ಮಾಡಿದ್ದಾರೆ. ಅಲ್ಲಿರತಕ್ಕ ಅಧಿಕಾರಿಗಳಿಗೆ ಎಷ್ಟು ಜವಾಬ್ದಾರಿ ಇದೆ ಎನ್ನುವುದು ಗೊತ್ತಿಲ್ಲ ಎಂದು ವರ್ಗಾವಣೆ ಮಾಡಿದ್ದಾರೆ ಎನ್ನುವ ಅಂಶಗಳನ್ನು ಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದಾರೆ. ಇವೊತ್ತು ಸರ್ಕಾರ ನ್ಯಾಯಾಂಗಕ್ಕೆ ಕೈ ಹಾಕುತ್ತದೆಂದು ಹೇಳಿದರೆ ನನಗೆ ಇವರು ಹೇಳತಕ್ಕ ಮೌಲ್ಯಾಧಾರಿತ ರಾಜಕಾರಣ ಅರ್ಥವಾಗುವುದಿಲ್ಲ ಸ್ವಾಮಿ. ಇವೊತ್ತಿನ ದಿವಸ ನ್ಯಾಯಾಂಗಕ್ಕೆ ಸ್ವತಂತ್ರವಾಗಿ ಕಾರ್ಯಾಚರಣೆ ಮಾಡತಕ್ಕ ರೀತಿಯಲ್ಲಿ ಇರುವುದಕ್ಕೂ ಬರುತ್ತಿಲ್ಲ ಎಂದು ಹೇಳಿದರೆ, ಇಂತಹ ರಾಜ್ಯದಲ್ಲಿ ನಮ್ಮ ಜನತೆಗೆ ನ್ಯಾಯ ಸಿಕ್ಕುತ್ತದೆಂದು ಅಂದುಕೊಳ್ಳುವುದಾದರೂ ಹೇಗೆ ? ಜನತೆಗೆ ನ್ಯಾಯಾಲಯಗಳಿಂದ ಇನ್ನು ಮುಂದೆ ನ್ಯಾಯ ಸಿಕ್ಕಲಿಕ್ಕಿಲ್ಲ ಎನ್ನತಕ್ಕ ಒಂದು ನಿರ್ಣಯಕ್ಕೆ ನಾವು ಅನಿವಾರ್ಯವಾಗಿ ಬರಬೇಕಾಗುತ್ತದೆ ಈ ಎಲ್ಲಾ ಪರಿಸ್ಥಿತಿಗಳನ್ನು ನೋಡಿದರೆ ಇದು ಬಹಳ ವಿವರವಾಗಿದೆ, ಸಮಯ ಬಹಳ ಕಡಿಮೆ ಇರುವುದರಿಂದ ನಾನು ಜಾಸ್ತಿ ಹೇಳಲಿಕ್ಕೆ ಹೋಗುವುದಿಲ್ಲ. ನಾವು ಕೆಲವು ವಿಚಾರಗಳ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಸರ್ಕಾರದಲ್ಲಿ ಇವೊತ್ತು ಭ್ರಷ್ಟಾಚಾರ ಇಲ್ಲ. ಭ್ರಷ್ಟಾಚಾರವನ್ನು ನಾವು ಕಡಿಮೆ ಮಾಡಿದ್ದೇವೆ, ಲೋಕಾಯುಕ್ತ ನಾವು ಹುಟ್ಟುಹಾಕಿದ್ದೇವೆ ಎಂದು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದಾರೆ. ಮೊನ್ನೆ ಮಾನ್ಯ ಮಂತ್ರಿಗಳು ಬಂದಾಗ ಲೋಕಾಯುಕ್ತ ಅಧಿಕಾರಿಗಳ ಒಂದು ಕಾರ್ಯಾಚರಣೆ ವೈಖರಿ ಬಗ್ಗೆ ನಾನು ಸಭೆಯಲ್ಲಿ ಹೇಳಿದೆ. ಅದು ಕೂಡ ನನ್ನ ತಾಲ್ಲೂಕಿನ ಒಬ್ಬ ಉನ್ನತ ಅಧಿಕಾರಿಗೆ ಸಂಬಂಧಪಟ್ಟ ವಿಚಾರ ಆಗಿತ್ತು. ಭ್ರಷ್ಟಾಚಾರದ ವಿಚಾರ ಆಗಿತ್ತು. ಇವುಗಳನ್ನು ತನಿಖೆ ಮಾಡಲಿಲ್ಲ ಮುಚ್ಚಿಹಾಕಿದರು ಎನ್ನತಕ್ಕ ವಿಚಾರವನ್ನು ನಾನು ಪ್ರಸ್ತಾಪ ಮಾಡಿದಾಗ ಇನ್ನೊಮ್ಮೆ ಹಿಡಿದುಕೊಡುವ ಪ್ರಯತ್ನ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ನನಗೆ ಹೇಳಿದರು. ನನಗೆ ಆಶ್ಚರ್ಯವಾಯಿತು. ಇಷ್ಟೊಂದು ದೊಡ್ಡ ಲೋಕಾಯುಕ್ತ ಸಂಸ್ಥೆ ಇರಬೇಕಾದರೆ ಭ್ರಷ್ಟಾಚಾರವನ್ನು ಮಾಡುವವರನ್ನು ನೀವೇ ಇನ್ನೊಂದು ಸಾರಿ ಪ್ರಯತ್ನ ಮಾಡಿ ನಮಗೆ ಹಿಡಿದು ಕೊಡಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇನ್ನೊಂದು ಕಡೆ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ಸಂಬಂಧಪಟ್ಟ ಸಂದರ್ಶನದಲ್ಲಿ ಭ್ರಷ್ಟಾಚಾರ ಬಹಳ ಮಟ್ಟಿಗೆ ನಡೆದಿದೆ ಎಂದು ಆಪಾದನೆಯನ್ನು ಮಾಡಿದಾಗ, ಯಾರು ನಿಮ್ಮ ದುಡ್ಡನ್ನು ತೆಗೆದುಕೊಂಡಿದ್ದಾರೆ ಹೇಳಿ, ನಿಮ್ಮ ಹಣವನ್ನು ನಿಮಗೆ ವಾಪಸು ಕೊಡಿಸುತ್ತೇನೆಂದು ಹೇಳುತ್ತಿದ್ದಾರೆ. ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳ ಕೆಲಸ ಯಾರು ದುಡ್ಡನ್ನು ಕೊಟ್ಟಿದ್ದಾರೆ ಅವರಿಗೆ ಆ ಹಣವನ್ನು ವಾಪಸು ಕೊಡಿಸತಕ್ಕದ್ದಲ್ಲ. ದುಡ್ಡು ಕೊಟ್ಟವರಿಗೆ ಬೇರೆ ದಾರಿಗಳೂ ಗೊತ್ತಿವೆ. ಕೊಟ್ಟರತಕ್ಕ ದುಡ್ಡನ್ನು ಯಾವರೀತಿ ವಸೂಲ್ಮಾಡಿಕೊಳ್ಳಬೇಕೆಂಬುದೂ ಅವರಿಗೆ ಗೊತ್ತಿದೆ. ಆದರೆ ಇಲ್ಲಿ ಭ್ರಷ್ಟಾಚಾರವನ್ನು ಕಡಿಮೆ ಮಾಡುವುದಕ್ಕೆ ಏನಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಾ ಎಂದರೆ ಏನೂ ಇಲ್ಲ. ಭ್ರಷ್ಟಾಚಾರವನ್ನು ನಿಲ್ಲಿಸುವುದಕ್ಕೆ ಸಾಧ್ಯವೇ ಇಲ್ಲ ಎಂದು ನಾನು ತಮಗೆ ಹೇಳಬಯಸುತ್ತೇನೆ. ತಮಗೆ ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಬಳ್ಳಾರಿಯಲ್ಲಿ ಬಾಪೂಜಿನಗರ ಎಂದು ಇದೆ. ಅಲ್ಲಿ ಸಂಪೂರ್ಣವಾಗಿ ಎಲ್ಲರೂ ಹರಿಜನಗಿರಿಜನರೇ ವಾಸವಾಗಿದ್ದಾರೆ. ಅಲ್ಲಿ ಒಂದು ಸರ್ಕಾರೀ ಪ್ರೌಢ ಶಾಲೆ

ಇದೆ. ಈ ಸರ್ಕಾರದಲ್ಲಿ ಎಷ್ಟರ ಮಟ್ಟಿಗೆ ಶಿಕ್ಷಣ ಮಟ್ಟ ಇದೆ ಎಂಬುದಕ್ಕೆ ನಾನು ಈ ಒಂದು ನಿದರ್ಶನವನ್ನು ಕೊಡುತ್ತಿದ್ದೇನೆ. ಅಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಶೇಕಡ ೩ ಮಾತ್ರ ಬಂದಿದೆ. ಅಲ್ಲಿಯ ಮುಖ್ಯೋಪಾಧ್ಯಾಯರು ೧ ವರ್ಷಕ್ಕೆ ಒಂದು ಸಾರಿ ಮಾತ್ರ ಆ ಶಾಲೆಗೆ ಬಂದಿದ್ದಾರೆ. ಮತ್ತೆ ಅವರು ಆ ಶಾಲೆಯ ಕಡೆಗೆ ತಿರುಗಿ ಕೂಡ ನೋಡಿಲ್ಲ. ಅವರು ಸಹಿ ಮಾಡಿರತಕ್ಕ ಅಟೆಂಡೆನ್ಸ್ ರಿಜಿಸ್ಟರ್‌ನ ಕಾಪಿಯನ್ನೂ ನಾನು ತಂದಿದ್ದೇನೆ. ಅವರು ರಜಾ ಚೀಟಿಗಳನ್ನು ಕೊಡುವಾಗ ತಾರೀಖು ಹಾಕದೇ ಕೊಟ್ಟಿರತಕ್ಕದ್ದು, ಆರ್.ಆರ್. ಫಂಡ್‌ನ್ನು ದುರುಪಯೋಗ ಪಡಿಸಿಕೊಂಡಿರುವುದು, ಸ್ಮಾಲ್ ಸೇವಿಂಗ್ಸ್ ಫಂಡ್ ಹಣವನ್ನೆಲ್ಲಾ ಯಾವರೀತಿ ಅವರು ಕಬಳಿಸಿದ್ದಾರೆಂಬುದನ್ನು ತಮಗೆ ತಿಳಿಸಬಯಸುತ್ತೇನೆ. ಅಷ್ಟೇ ಅಲ್ಲ ೮ ಅಥವಾ ೯ನೇ ತರಗತಿಯ ಪರೀಕ್ಷಾ ಫಲಿತಾಂಶವನ್ನು ಪ್ರಕಟ ಮಾಡಬೇಕಾದರೆ ಒಂದು ವಿಷಯಕ್ಕೆ ಸಂಬಂಧಪಟ್ಟ ಉಪಾಧ್ಯಾಯರನ್ನು ಸಂಪರ್ಕ ಮಾಡದೆ, ಆ ಹುಡುಗನಿಗೆ ಎಷ್ಟು ಮಾರ್ಕ್ಸ್ ಬಂದಿದೆ ಎಂಬುದನ್ನೂ ನೋಡದೆ, ನಮ್ಮಂಥ ಅಥವಾ ನಿಮ್ಮಂಥ ಯಾರಾದರೂ ವ್ಯಕ್ತಿಗಳು ಹೋಗಿ ನಮ್ಮ ಹುಡುಗ ಪಾಸ್ ಆಗಬೇಕೆಂದು ಹೇಳಿದರೆ ಒಂದೆರಡೇ ತಿಂಗಳು ಲೇಟ್ ಆದಮೇಲೆ ಒಂದು ದೊಡ್ಡ ಪಟ್ಟಿಯನ್ನೇ ಹಚ್ಚುತ್ತಾರೆ. ಬೇಕಾದರೆ ತಾವೇ ಇದನ್ನು ತನಿಖೆ ಮಾಡಿಸಿನೋಡಿ. ಆ ಶಾಲೆಯ ಪ್ರಶ್ನೆ ಪತ್ರಿಕೆಗೂ, ಹುಡುಗರ ಉತ್ತರ

೧೧–೦೦ ಎ.ಎಂ.

ಪತ್ರಿಕೆಗಳಿಗೂ, ಕೊಟ್ಟಿರತಕ್ಕ ಮಾರ್ಕ್ಸ್‌ಗೂ ಮತ್ತು ಪಾಸ್ ಆಗಿರತಕ್ಕ ವಿದ್ಯಾರ್ಥಿಗಳಿಗೂ ಲೆಕ್ಕ ಹಾಕಿದರೆ ಒಂದಕ್ಕೊಂದು ಟ್ಯಾಲಿಯೇ ಆಗುವುದಿಲ್ಲ, ಪಾಸ್ ಆದವರು ೨೪ ಮಂದಿ ಇದ್ದರೆ ಉತ್ತರ ಪತ್ರಿಕೆಗಳು ೫೪ ಇವೆ. ಸ್ವಾಮಿ, ಹರಿಜನಗಿರಿಜನರೇ ಇರತಕ್ಕ ಪ್ರದೇಶದಲ್ಲಿ ಇಂಥ ಸರ್ಕಾರಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ. ಈ ಶಾಲೆಯ ಬಗ್ಗೆ ಒಂದು ದೊಡ್ಡ ಇತಿಹಾಸವೇ ಇದೆ. ಇಲ್ಲಿ ಕೆಲವು ದೊಡ್ಡ ದೊಡ್ಡ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ್ದಾರೆ, ಅವುಗಳನ್ನು ಯಾರು ಪ್ರಿಂಟ್ ಮಾಡಿಸಿದ್ದಾರೋ ಗೊತ್ತಿಲ್ಲ. ನಿಜವಾಗಿಯೂ ಈ ವಿಚಾರದಲ್ಲಿ ತಮಗೆ ಕಳಕಳಿ ಇದ್ದರೆ, ನಮ್ಮ ದೇಶದಲ್ಲಿ ಶಿಕ್ಷಣ ಮಟ್ಟ ಕುಸಿಯಬಾರದು, ಉಳಿಯಬೇಕು, ಬೆಳೆಯಬೇಕೆಂಬ ಇಚ್ಛೆ ಇದ್ದರೆ ದಯವಿಟ್ಟು ಇದನ್ನು ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಬೇಕು. ಸ್ವಾಮಿ, ಇನ್ನೂ ಕೆಲವು ವಿಚಾರಗಳ ಬಗ್ಗೆ ನಾನು ಬಹಳವಾಗಿ ಹೇಳಬೇಕೆಂದಿದ್ದೆ. ಆದರೆ ಇಲ್ಲಿ ಮಹಿಳೆಯರಿದ್ದಾರೆ ಅವರ ಎದುರಿನಲ್ಲಿ ನಾನು ಅದನ್ನೆಲ್ಲಾ ಹೇಳುವುದಕ್ಕೆ ಆಗುವುದಿಲ್ಲ, ಅಂದರೆ ಅವರು ಅಂಥ ದೊಡ್ಡ ದೊಡ್ಡ ಕೆಲಸಗಳನ್ನೆಲ್ಲಾ ಮಾಡಿದ್ದಾರೆ.

ಇನ್ನು ಸಾರ್ವಜನಿಕ ಕೈಗಾರಿಕೆಗಳ ಬಗ್ಗೆ ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಡಿಸ್ ಇನ್‌ವೆಸ್ಟ್‌ಮೆಂಟ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡತಕ್ಕ ಕೆಲಸ ನಡೆಯುತ್ತಿದೆ. ಸ್ವಾಮಿ, ನಮ್ಮ ಸರ್ಕಾರದವರು ಬಂಡವಾಳವನ್ನು ಹೂಡಿರತಕ್ಕ ಕೈಗಾರಿಕೆಗಳು ಏನಾಗಿವೆ ಎಂಬುದನ್ನು ನಾನು ಒಂದು ಉದಾಹರಣೆಯೊಂದಿಗೆ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ, ಮೈಸೂರು ಮಿನರಲ್ಸ್ ಲಿಮಿಟೆಡ್ ಕಂಪೆನಿ ಇದೆ. ಇದು ಸಾರ್ವಜನಿಕ ಕ್ಷೇತ್ರದ ಕಂಪೆನಿ. ಇದರಲ್ಲಿ ೫ ಲಕ್ಷ ರೂಪಾಯಿಗಳ ದುರುಪಯೋಗವಾಗಿದೆ. ಈ ಸದನದಲ್ಲಿ ಮಾನ್ಯ ಸದಸ್ಯರಾದ ಮೊಯಿನುದ್ದೀನ್‌ರವರು ಇದ್ದಾರೆ. ಅವರು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯ ಛೇರ್ಮನ್ ಆಗಿದ್ದರು. ಅವರು ಈ ಸದನದಿಂದ ನೇಮಕವಾದ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯ ಛೇರ್ಮನ್ ಆಗಿ ಈಹಣ ದುರುಪಯೋಗ ಆಗಿರುವ ಬಗ್ಗೆ ತನಿಖೆಯನ್ನು ನಡೆಸಿ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಈ ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದಾರೆ. ಅಂದಮೇಲೆ ನಿಮ್ಮ ಅಡ್ಮಿನಿಸ್ಟ್ರೇಷನ್ನು ಎಷ್ಟರಮಟ್ಟಿಗೆ, ಬಲವಾಗಿ, ಇಟ್ಟುಕೊಂಡಿದ್ದೀರಿ ಎಂಬುದು ಇಲ್ಲಿಯೇ ಗೊತ್ತಾಗುತ್ತದೆ. ಇದೇರೀತಿ ಸಂಡೂರು ಕ್ಷೇತ್ರದಲ್ಲಿರತಕ್ಕ ತುಂಗಭದ್ರ ಮಿನರಲ್ಸ್ ಲಿಮಿಟೆಡ್ ಏನಿದೆ ಅದು ಒಂದು ಸಾರ್ವಜನಿಕ ಉದ್ದಿಮೆ. ಇದನ್ನೂ ಕೂಡ ಇವರು ಮಾರಾಟ ಮಾಡಿದರು. ಇದರಲ್ಲಿ ೨೬ ಪರ್ಸೆಂಟ್ ಹಣ ಸರ್ಕಾರದ್ದು ಇದೆ. ಅಲ್ಲಿನ ಕಾರ್ಮಿಕರಿಗೆ ೨೦ ಪರ್ಸೆಂಟ್ ಬೋನಸ್ ಕೊಡಿ ಎಂದರೆ ಬ್ಯಾಲೆನ್ಸ್ ಷೀಟ್‌ನ್ನು ನಮ್ಮ ಮುಂದಿಟ್ಟು ನಾವು

ಬೋನಸನ್ನು ಕೊಡುವುದಕ್ಕಾಗುವುದಿಲ್ಲ, ಈಗಲೇ ಇದು ೫ ಲಕ್ಷ ರೂಪಾಯಿ ನಷ್ಟದಲ್ಲಿದೆ ಎಂದು ಹೇಳುತ್ತಾರೆ. ಸ್ವಾಮಿ, ಅವರು ಮಾಡತಕ್ಕ ಕೆಲಸ ಏನೆಂದರೆ ಅಲ್ಲಿ ಸಿಕ್ಕತಕ್ಕ ಕಬ್ಬಿಣದ ಅದಿರನ್ನು ಸಂಡೂರಿನಿಂದ ಮದ್ರಾಸ್‌ಗೆ, ತೋರಣಗಲ್‌ನಿಂದ ಮದ್ರಾಸ್‌ಗೆ ಟ್ರಾನ್ಸ್‌ಪೋರ್ಟ್ ಮಾಡಬೇಕಾದರೆ ಸುಮಾರು ೩೦-೪೦ ಸಾವಿರ ರೂಪಾಯಿಗಳ ಟ್ರಾನ್ಸ್‌ಪೋರ್ಟೇಷನ್ ಛಾರ್ಜನ್ನು ತೋರಿಸಿದ್ದಾರೆ, ಅಲ್ಲಿಯ ಸ್ಟೇಷನ್ ಮಾಸ್ಟರ್ ಕೊಡತಕ್ಕ ರಸೀತಿಯಲ್ಲಿ ಯಾರ ಹೆಸರೂ ಇಲ್ಲ. ಒಂದು ವೈಟ್ ಪೇಪರ್‌ನಲ್ಲಿ ಒಂದು ಸೀಲ್ ಹಾಕಿ ಅದಕ್ಕೆ ಒಂದು ಸಿಗ್ನೇಚರ್ ಹಾಕಿದ್ದಾರೆ. ಅದು ಯಾರ ಸಿಗ್ನೇಚರೋ, ಯಾವ ಸ್ಟೇಷನ್ ಮಾಸ್ಟರೋ, ಒಂದೂ ಗೊತ್ತಾಗುವುದಿಲ್ಲ. ಯಾರ ಹೆಸರೂ ಇದರಲಿಲ್ಲ. ಆದರೆ ೪೦ ಸಾವಿರ ರೂಪಾಯಿಗಳು ಕ್ಲೈಂ ಮಾಡಿದ್ದಾರೆ.

ಅದು ಕಂಪೆನಿಯ ಲೆಕ್ಕದಲ್ಲಿ. ೪೦ ಸಾವಿರ ರೂಪಾಯಿ ಕ್ಲೈಮ್ ಮಾಡಿರತಕ್ಕಂಥ ವಿಚಾರವನ್ನು ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಕಂಪೆನಿಯ ಫೈನಾನ್ಸ್ ಡೈರೆಕ್ಟರ್ ಯಾವರೀತಿ ಕ್ಲೇಮ್ ಮಾಡಿದ್ದಾರೆ ಎಂಬ ಬಗ್ಗೆ ಡಿಟೇಲ್ ರಿಪೋರ್ಟ್ ಕೊಡುವುದಕ್ಕೋಸ್ಕರವಾಗಿ ಒಬ್ಬರನ್ನು ಅಪಾಯಿಂಟ್ ಮಾಡಿ, ರಿಪೋರ್ಟ್ ಕೊಡಿಸಿದರೂ ಸಹಿತ ಏನೂ ಕ್ರಮವಿಲ್ಲ. ಅದನ್ನು ಮುಚ್ಚತಕ್ಕಂಥ ಪ್ರಯತ್ನ ನಡೆದಿದೆ ಇದಾದನಂತರ ಅವರು ಎಷ್ಟರವಟ್ಟಿಗೆ ಇದ್ದಾರೆಂದರೆ ೨-೩ ಐರನ್ ಬಾಡಿ ಬರತಕ್ಕಂಥ ಲಾರಿಗಳನ್ನು ಖರೀದಿ ಮಾಡಿದರು. ೧೯೮೫ನೇ ಇಸವಿಯಲ್ಲಿ ಅದನ್ನು ಖರೀದಿ ಮಾಡಿದಂತ ಜನ ೬ನೇ ತಿಂಗಳಲ್ಲಿ ಖರೀದಿಮಾಡಿ ಆರ್. ಟಿ. ಓ ಆಫೀಸಿನಲ್ಲಿ ಸರ್ಟಿಫಿಕೇಟ್ ಆಫ್ ರಿಜಿಸ್ಟ್ರೇಷನ್ ಮತ್ತು ಸರ್ಟಿಫಿಕೇಟ್ ಆಫ್ ಫಿಟ್‌ನೆಸ್ ಇವುಗಳನ್ನು ತಿದ್ದತಕ್ಕಂಥ ಪ್ರಸಂಗ ನಡೆಯಿತು. ಏತಕ್ಕೆಂದರೆ ಅವರ ಬ್ಯಾಲೆನ್ಸ್ ಷೀಟ್ ಮಾರ್ಚ್ ತಿಂಗಳೊಳಗೆ ಕ್ಲೋಸ್ ಆಗಬೇಕು. ಅವರು ವೆಹಿಕಲ್ ತೆಗೆದುಕೊಂಡದ್ದು ಏಪ್ರಿಲ್‌ನಲ್ಲಿ ಎಂದು ಇದ್ದರೂ ಮೇವರೆಗೂ ಇಂಜಿನ್, ಛಾಸಿ ಯಾವುದೂ ಬಂದಿರಲಿಲ್ಲ. ರಿಜಿಸ್ಟ್ರೇಷನ್ ಮಾಡಿಸಲು ಎಂಜಿನ್ ನಂಬರ್ ಇಲ್ಲ, ಛಾಸಿ ನಂಬರ್ ಇಲ್ಲ. ಆದರೂ ಖರೀದಿ ಮಾಡಿದ್ದೇವೆಂದು ಡೂಪ್ಲಿಕೇಟ್ ಕಾಪಿಯನ್ನು ಹಾಕಿಸಿಕೊಂಡು ಆಡಿಟ್‌ನಲ್ಲಿ ೧೯೮೫ರಲ್ಲಿ ಖರೀದಿ ಮಾಡಿದ್ದೇವೆಂದು ತೋರಿಸಿದ್ದಾರೆ. ಏತಕ್ಕೆಂದರೆ ಇಲ್ಲಿ ಡಿಪ್ರಿಸಿಯೇಷನ್ ತೋರಿಸಿ ಇಂಥ ದೊಡ್ಡ ದೊಡ್ಡ ವೆಹಿಕಲ್ಸ್‌ನಿಂದ ಒಂದೂವರೆ-ಎರಡು ಲಕ್ಷ ರೂಪಾಯಿಗಳನ್ನು ಆರಾಮವಾಗಿ ಕಬಳಿಸಬಹುದು. ಆರ್. ಟಿ. ಓ ಆಫೀಸ್‌ನಲ್ಲಿ ಎನ್‌ಕ್ವಯರಿ ಮಾಡಿ ನೋಡಿದರೆ ಅಲ್ಲಿ ರಿಜಿಸ್ಟ್ರೇಷನ್ ಆಗಿರುವುದೇ ಬೇರೆ, ಇವರಿಗೆ ಕೊಟ್ಟಿರತಕ್ಕಂಥ ರಿಜಿಸ್ಟ್ರೇಷನ್ ನಂಬರ್ ಬೇರೆ. ಅಲ್ಲೂ ಕೂಡ ಕರಪ್ಷನ್. ಇಂಥ ವ್ಯವಹಾರದಲ್ಲಿ ತನಿಖೆ ಮಾಡಿಸಿ, ವ್ಯವಸ್ಥಿತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳದೆ, ಸಾರ್ವಜನಿಕ ಕ್ಷೇತ್ರದಲ್ಲಿ ನಾವು ಬಂಡವಾಳ ಹಾಕಿರತಕ್ಕಂಥ ಕ್ಷೇತ್ರಗಳಲ್ಲಿ ಹಣ ವಾಪಸ್ ಬರುತ್ತಿಲ್ಲ, ಸಾರ್ವಜನಿಕ ಕ್ಷೇತ್ರದಲ್ಲಿ ನಾವು ವಿಫಲವಾಗುತ್ತಾ ಹೋಗುತ್ತಿದ್ದೇವೆಂದು ಹೇಳುವುದರಲ್ಲಿ ಅರ್ಥ ಏನು ಇದೆ ಸ್ವಾಮಿ?

ಇನ್ನೊಂದು ಕೈಗಾರಿಕಾ ಅಭಿವೃದ್ಧಿ ಬಗ್ಗೆ ಹೇಳುವುದಾದರೆ, ತುಂಗಭದ್ರಾ ಫೈಬರ್ ಲಿಮಿಟೆಡ್, ಮಾನ್ಯ ಜೆ. ಎಚ್. ಪಟೇಲ್‌ರವರ ಜೊತೆಯಲ್ಲಿ ಹಲವಾರು ಬಾರಿ ನಾನು ಇದರ ಬಗ್ಗೆ ಚರ್ಚೆ ಮಾಡಿದ್ದೇನೆ. ೫೮ ಕೋಟಿ ರೂಪಾಯಿಗಳ ಬಂಡವಾಳ ಹಾಕಿರತಕ್ಕಂಥ ಈ ಫೈಬರ್ ಕೈಗಾರಿಕೆ ಹರಿಹರ ಪಾಲಿಫೈಬರ್ ಜೊತೆಯಲ್ಲಿ ಕಾಂಪೀಟ್ ಮಾಡತಕ್ಕಂಥ ಕೈಗಾರಿಕೆಯಾಗಿದೆ. ಪರದೇಶದ ತಂತ್ರಜ್ಞಾನ ಮತ್ತು ಯಂತ್ರಗಳನ್ನು ಬಳಸಲಿಕ್ಕೆ ಪ್ರಯತ್ನ ಮಾಡಿ ಒಂದೆರಡು ವರ್ಷಗಳೇ ಆಗಿರಬಹುದು. ಇದರ ಬಗ್ಗೆ ವಿಚಾರಣೆ ಮಾಡಬೇಕು. ಸರ್ಕಾರಿ ಬಂಡವಾಳವನ್ನು ಇದರಲ್ಲಿ ಹಾಕಿ ಅಲ್ಲಿ ಆರುನೂರು ಜನರು ಕೆಲಸ ಮಾಡುತ್ತಿದ್ದಾರೆ ಎಂದರೆ, ಯಾರೂ ಇದರ ಬಗ್ಗೆ ಗಮನಹರಿಸುವುದಕ್ಕೆ ತಯಾರಾಗಿಲ್ಲ. ಕಾರ್ಮಿಕ ಮಂತ್ರಿಯವರನ್ನು ಕೇಳಿದರೆ, ಇದು ಇಂಡಸ್ಟ್ರಿಯಲ್ ಪ್ರಾಬ್ಲಮ್, ಆದ್ದರಿಂದ ಇಂಡಸ್ಟ್ರೀಸ್ ಮಿನಿಸ್ಟರ್ ಅವರನ್ನು ಕೇಳಿ ಎಂದು ಹೇಳುತ್ತಾರೆ. ಇಂಡಸ್ಟ್ರೀಸ್ ಮಿನಿಸ್ಟರ್‌ರವರನ್ನು ಕೇಳಿದರೆ ಇದು ಲೇಬರ್ ಪ್ರಾಬ್ಲಮ್ ಇರುತ್ತದೆ ಆದ್ದರಿಂದ ಲೇಬರ್ ಮಿನಿಸ್ಟರ್‌ರವರನ್ನು ಕೇಳಿ ಎಂದು ಹೇಳುತ್ತಾರೆ. ನನಗಂತೂ ಯಾರ ಹತ್ತಿರ ಹೋಗಬೇಕೋ ಏನೋ ಅರ್ಥವಾಗುತ್ತಿಲ್ಲ. ಕೊನೆಗೆ ನಿಮ್ಮ ಹತ್ತಿರ ಬರುತ್ತಿದ್ದೇನೆ. ತಾವು ಏನು ಪರಿಹಾರ ಮಾಡುತ್ತೀರೋ ಮಾಡಿ. ಈ ರೀತಿ ಹಲವಾರು ಬೇಜವಾಬ್ದಾರಿ ವರ್ತನೆಗಳಿಂದ ಇವತ್ತಿನದಿವಸ ಇಂಡಸ್ಟ್ರೀಸ್‌ಗಳು ನಾಶವಾಗುತ್ತಿವೆ. ೬೦೦ ಜನ ಹೊಸಪೇಟೆಯಿಂದ ಬಂದು ತಮ್ಮ ಕೋರಿಕೆಯನ್ನು ಮುಂದಿಟ್ಟು ಕೇಳಿದಾಗ ಅವರ ಹತ್ತಿರ ಸೌಜನ್ಯದ ಮಾತುಕತೆ ಇಲ್ಲದೆ ಹೋದರೆ ಇಲ್ಲಿ ನಾವು ಶಾಸಕರಾಗಿ ಕೆಲಸ ಮಾಡುವುದಕ್ಕೆ ಅರ್ಹರೇ ಎಂದು ಕೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಎಂತೆಂಥ ಕೆಲಸ ನಡೆದಿದೆ ಈ ಸರ್ಕಾರದ ಅವಧಿಯಲ್ಲಿ

ಎಂದರೆ ರೌಡಿಗಳಿಂದ ಒಬ್ಬರಿಗೊಬ್ಬರಿಗೆ ಕೊಲೆ ಮಾಡಿಸಿದ್ದಾರೆ ಇನ್ನು ಮತ್ತೆ ಯಾರನ್ನು ಕೊಲೆ ಮಾಡುತ್ತಾರೋ ಗೊತ್ತಿಲ್ಲ.

ನನ್ನ ತಾಲ್ಲೂಕಿನಲ್ಲಿ ಒಬ್ಬ ಸ್ವಾಮಿಜಿಯವರನ್ನು ಕೊಂದಿದ್ದಾರೆ. ಸ್ವಾಮೀಜಿಯವರನ್ನು ಕೊಂದು ಎರಡು ವರ್ಷಗಳೇ ಆಗಿರುತ್ತದೆ. ಅವರನ್ನು ಎರಡು ಅಂತಸ್ತಿನ ನೆಲಮಾಳಿಗೆಯಲ್ಲಿ ಕೂಡಿಹಾಕಿ ಕೊಂದಿದ್ದಾರೆ. ಸಂಶಯಾಸ್ಪದ ರೀತಿಯಲ್ಲಿ ಅವರ ಕೊಲೆಯಾಗಿದೆ ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ತನಿಖೆಯಾಗಿಲ್ಲ. ಇಲ್ಲಿಯವರೆಗೂ ಯಾರೊಬ್ಬರನ್ನು ಸಸ್‌ಪೆಕ್ಟ್‌ಮಾಡಿ ಅರೆಸ್ಟ್ ಮಾಡಿಲ್ಲ. ವೀರಶೈವ ಸಂಘಗಳವರು ಮೌನ ಮೆರವಣಿಗೆ ಮಾಡಿದರೂ ಇವೊತ್ತಿನವರೆಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಸಾ ಮಿ ನಾನು ಕೇಳುತ್ತಿದ್ದೇನೆ, ದಯವಿಟ್ಟು ಇದನ್ನು ಸಿ.ಓ.ಡಿ.ಗೆ ರೆಫರ್ ಮಾಡಿ, ಸತ್ಯಾಂಶ ಹೊರಗೆ ಬರಲಿ. ಏತಕ್ಕೆಂದರೆ ಆ ಸ್ವಾಮಿಜಿಯವರ ಹತ್ತಿರ ಆಸ್ತಿ, ಹಣ, ಬಂಗಾರ ಇತ್ತು ಎಂದು ಹೇಳುತ್ತಾರೆ. ದೊಡ್ಡ ದೊಡ್ಡ ವ್ಯಕ್ತಿಗಳು ಇದರಲ್ಲಿ ಇನ್‌ವಾಲ್ವ್ ಆಗಿ, ಇದನ್ನು ಮುಚ್ಚಿಟ್ಟಿದ್ದಾರೆ. ದೊಡ್ಡ ದೊಡ್ಡ ಮನೆತನಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಇದ್ದಾರೆ. ಅವರ ಮೇಲೆ ಜನಗಳಿಗೆ ಅನುಮಾನ ಇದ್ದರೂ ಏನನ್ನೂ ಹೇಳಲು ತಯಾರಿಲ್ಲದೆ ಜನರು ಹೆದರಿಕೊಂಡಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸಬೇಕು.

ಶ್ರೀ ಬಿ. ರಾಚಯ್ಯ.—ನಿನ್ನೆ ಗೃಹ ಖಾತೆ ಮೇಲೆ ಚರ್ಚೆ ಆದಾಗ ಏನೂ ಹೇಳಲಿಲ್ಲ. ಅದನ್ನು ಬರವಣಿಗೆಯಲ್ಲಿ ಕೊಟ್ಟರೆ ಸಿಓಡಿ. ಗೆ ರೆಫರ್ ಮಾಡುತ್ತೇನೆ.

ಅಧ್ಯಕ್ಷರು.—ಬರೆದು ಕಳುಹಿಸಿ, ಎನ್‌ಕ್ವೈರಿ ಮಾಡಿಸುತ್ತಾರೆ.

ಶ್ರೀ ಯು. ಭೂಪತಿ.—ಈ ಸಂದರ್ಭದಲ್ಲಿ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುವುದು ಇಷ್ಟೆ. ಅವರು ಕ್ಯಾಬಿನೆಟ್ ಅನ್ನು ಎಕ್ಸ್‌ಪ್ಯಾಂಡ್ ಮಾಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಯುವಜನ ಖಾತೆಗೆ ಒಬ್ಬರು ಮಂತ್ರಿಗಳನ್ನು ನೇಮಿಸಬೇಕು. ಇಲ್ಲದಿದ್ದರೆ ಯುವಜನರಿಗೆ ಯಾವ ಕೆಲಸವೂ ಆಗಲು ರಾಜ್ಯದಲ್ಲಿ ಸಾಧ್ಯವಾಗುವುದಿಲ್ಲ. ಈಗಿರತಕ್ಕ ಪೋರ್ಟ್‌ಫೋಲಿಯೋದಲ್ಲಿ ಎಲ್ಲವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಭಾವಿಸಲು ಸಾಧ್ಯವಿಲ್ಲ. ಆದ್ದರಿಂದ ಯುವಜನ ಖಾತೆಗೆ ಒಬ್ಬರು ಮಂತ್ರಿಗಳನ್ನು ಮೊದಲು ನೇಮಿಸಲಿ ಎಂದು ಹೇಳುತ್ತೇನೆ. ಇವತ್ತಿನ ದಿವಸ ರಾಜ್ಯದಲ್ಲಿ ಪೆನ್‌ಷನ್ ತೆಗೆದುಕೊಳ್ಳತಕ್ಕ ಜನರು ಬಹಳ ಕಷ್ಟಪಡುತ್ತಿದ್ದಾರೆ. ಆ ಬಗ್ಗೆ ೨೪-೧-೮೭ ರಂದು ಸಂಯುಕ್ತ ಕರ್ನಾಟಕದಲ್ಲಿ ಒಂದು ದೊಡ್ಡ ಲೇಖನ ಬಂದಿದೆ. ಪಂಚಾಯಿತಿ ಕಾರ್ಯದರ್ಶಿಯಾದವರು ೩೦ ವರ್ಷ ಕೆಲಸ ಮಾಡಿ ಪೆನ್‌ಷನ್‌ಗೆ ಅರ್ಜಿ ಹಾಕಿ ೧೭ ವರ್ಷವಾದರೂ ಪೆನ್‌ಷನ್ ದೊರೆತಿಲ್ಲ, ಅಷ್ಟು ವರ್ಷಗಳಿಂದ ಅವರು ಪೆನ್‌ಷನ್‌ಗಾಗಿ ತಿರುಗುತ್ತಿದ್ದಾರೆ. ಅವರ ಹೆಸರು ಶ್ರೀ ಕೆ. ಜೋಶಿ ಎಂದು. ಅವರು ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಕೌಜಲಗಿ ಗ್ರಾಮದವರು. ಅವರ ಕಥೆ ವ್ಯಥೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ಎಲ್ಲಾ ದಾಖಲೆಗಳನ್ನು ಕಳುಹಿಸಿ ಇಷ್ಟು ವರ್ಷಗಳಾದರೂ ಪೆನ್‌ಷನ್ ಸಿಗುವುದಿಲ್ಲವೆಂದರೆ ಅವರು ಹೇಗೆ ಜೀವನ ಮಾಡಬೇಕು? ಇಲ್ಲಿ ಸರ್ಕಾರದ ದಕ್ಷತೆಯನ್ನು ಪ್ರಶ್ನೆ ಮಾಡಬೇಕೇ ಬೇಡವೆ? ಕಲಾವಿದರಿಗೆ ಮಾಸಾಶನ ಕೊಡತಕ್ಕ ವಿಚಾರದಲ್ಲಿ ರಾಜಕೀಯ ಪ್ರಭಾವ ಬಹಳಷ್ಟು ಕೆಲಸ ಮಾಡುತ್ತಿದೆ. ನಿಜವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕಲಾಕಾರರಿಗೆ, ನಾಟಕಕಾರರಿಗೆ ಇವತ್ತಿಗೂ ಮಾಸಾಶನ ಸಿಗುತ್ತಿಲ್ಲ ಎಂಬುದಕ್ಕೆ ನನಗೆ ಉಪನ್ಯಾಸಕರಾಗಿದ್ದ ಶ್ರೀ ಬಸವರಾಜ ಮಲ್ಲಶೆಟ್ಟಿ ಎಂಬುವವರು ನನಗೆ ಒಂದು ಪತ್ರ ಬರೆದಿದ್ದಾರೆ. ಅವರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿದ್ದರು. ಅವರ ಅವಧಿ ಈಗ ಮುಗಿದಿದೆ. ಪೂಜಾರ ಅಯ್ಯಪ್ಪ ಇವರೊಬ್ಬ ಕಲಾವಿದರು ಇವರು ಮಾಸಾಶನ ಕೊಡಿಸಬೇಕೆಂದು ಅರ್ಜಿಯನ್ನು ಹಾಕಿ ಏನೆಲ್ಲಾ ಪ್ರಯತ್ನ ಮಾಡಿ ವಿಫಲವಾಗಿದೆ. ನೀವು ದಯವಿಟ್ಟು ಅಯ್ಯಪ್ಪನವರ ಬಗ್ಗೆ ಶಿಫಾರಸ್ಸು ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆಂದು ನಮ್ಮ ಮಾಸ್ಟರ್ ನನಗೆ ಪತ್ರ ಬರೆದಿದ್ದಾರೆ. ಅಕಾಡೆಮಿ ಶಿಫಾರಸು ಇಲ್ಲದೆ ಹೆಸರು ಆಯ್ಕೆ ಆಗುವುದಿಲ್ಲ. ಈ ಹಂತದಲ್ಲಿ ಪ್ರಭಾವ ಬೀರುವುದು ಅನಿವಾರ್ಯ. ನೀವು ಈ ಕೆಲಸ ಮಾಡುತ್ತೀರೆಂದು ನಂಬಿದ್ದೇನೆ ಎಂದು ನನಗೆ ಬರೆದಿದ್ದಾರೆ. ನನ್ನ ಕೆಲಸ ಪ್ರಭಾವ ಮಾಡುವುದಿಲ್ಲವೆಂದು ಅವರಿಗೆ ಗೊತ್ತಿಲ್ಲ. ಪ್ರಭಾವ ಇರತಕ್ಕ ಜನರು ಬೇರೆ. ಅವರು ಸರ್ಕಾರದಲ್ಲಿರುತ್ತಾರೆ, ಈ ಕಡೆಯೂ ಕೆಲವರು ಇರಬಹುದು, ಆದರೆ ಕಡಿಮೆ. ಇಂಥ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮಾಸಾಶನ ಕೊಡತಕ್ಕ ಪದ್ಧತಿ ನಿಲ್ಲಬೇಕು. ಈ ಮಾಸಾಶನ ಕೊಡತಕ್ಕ ವ್ಯವಸ್ಥೆ ಪಟ್ಟಣ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದೆ

ಇದು ಹಳ್ಳಿಗಳಿಗೂ ಹರಡಬೇಕು. ಹಳ್ಳಿಯ ಜನರಿಗೆ ಇದು ನೆರವಾಗಬೇಕು, ಕಲೆ ಉಳಿಯಬೇಕು, ಕಲೆಗಾರರು ಉಳಿಯಬೇಕು ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಪ್ರಸ್ತಾಪಿಸಿದ ಕೆಲವು ಭ್ರಷ್ಟಾಚಾರದ ವಿಚಾರಗಳ ಬಗ್ಗೆ ತನಿಖೆ ಮಾಡಿಸುತ್ತೇನೆಂಬ ಭರವಸೆಯನ್ನು ಮುಖ್ಯಮಂತ್ರಿಗಳು ಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತು ಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಹೇಳಿದೆ, ಚರ್ಚೆಗೆ ಅವಕಾಶ ಮಾಡಿಕೊಡಿ. ಮಾನ್ಯ ಮುಖ್ಯ ಮಂತ್ರಿಗಳು ೧೧ ಗಂಟೆಗೆ ಉತ್ತರಿಸುತ್ತಾರೆ ಎಂದು.

ಅಧ್ಯಕ್ಷರು.—ಆಯಿತು, ಈಗ ಬಂದರು, ಉತ್ತರಿಸುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಈ ಸಲದ ನನ್ನ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆಯು ಕೊನೆಯ ಹಂತದಲ್ಲಿ ಕೆಲವು ಕಾದಂಬರಿಯ ರೀತಿಯ ಮಾತುಗಳನ್ನು ಮಾನ್ಯ ಖರ್ಗೆಯವರು ಆ ಮೇಲೆ ಮಾನ್ಯ ಭೂಪತಿಯವರು ಹೇಳಿದರು. ಅದಕ್ಕಾಗಿ ಅದನ್ನೇ ಮೊದಲು ತೆಗೆದುಕೊಂಡು ಬಿಡುತ್ತೇನೆ. ಮಾನ್ಯ ಮೊಯಿಲಿಯವರು ತಮ್ಮ ಒಂದು ಮಾತನ್ನು ಸೇರಿಸಿದರು ಬಹಳ ರೋಮಾಂಟಿಕ್ ಆಗಿಕಾಣುತ್ತದೆ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಯಸ್ಸಿನಲ್ಲೂ, ೬೪ ವರ್ಷವಾದರೂ ಈ ಕಾದಂಬರಿ ಕಥೆಗೆ ಹೊರಟಿದ್ದೀರಲ್ಲ ಏನು ಮಾಡುವುದು ?

ಶ್ರೀ ರಾಮಕೃಷ್ಣ ಹೆಗಡೆ.— ಎಷ್ಟು ರುಚಿ ಎಂಬುದನ್ನು ನೀವು ಹೇಳಿದಿರಿ. ಮೊದಲನೆಯದಾಗಿ ಹೇಳುತ್ತೇನೆ. '' ಇನ್‌ಕ್ವೆಸ್ಟ್ '' ಎಂದು ಹೇಳತಕ್ಕ ಹೊಸ ಪತ್ರಿಕೆ ಎಂದು ಕಾಣುತ್ತದೆ. ಇದು ಯಾವಾಗ ಹುಟ್ಟಿತೋ, ಯಾವಾಗ ಸಾಯುತ್ತದೆಯೋ ಗೊತ್ತಿಲ್ಲ. ಪತ್ರಿಕೆಗಳು ಬಹಳ ಬರುತ್ತವೆ. ಇದರಲ್ಲಿ '' Did Hegde tamper with judiciary ?'' ಎಂದು ಬಂದಿದೆ. ನನಗೆ ಗೊತ್ತಾಗಿದೆ, ಈ ಪತ್ರಿಕೆಗಳನ್ನು ಒಬ್ಬ ವ್ಯಕ್ತಿ ಅಥವಾ ಇಬ್ಬರು ವ್ಯಕ್ತಿಗಳು ಪುಕ್ಕಟೆಯಾಗಿ ಈ ಮನೆಯ ಸದಸ್ಯರಿಗೆ ಹಂಚಿದ್ದಾರೆ. ಇದರಲ್ಲಿ ಒಂದೇ ಒಂದು ವಾಕ್ಯ ಓದುತ್ತೇನೆ. He has also cited ಮಾನ್ಯ ಸುಬ್ಬಯ್ಯನವರು ರಿಟ್ ಪಿಟಿಷನ್ ಹಾಕಿದ್ದಾರೆ ಅದಕ್ಕೆ ಸಂಬಂಧಪಟ್ಟಂತೆ ಹೇಳು ತ್ತಾರೆ. ಇವರು ನಾನು ಪ್ರಾರಂಭದಿಂದ ಓದಿಬಿಡುತ್ತೇನೆ.

> '' Subbaiah has spoken of the High Court office putting hurdles whenever he tried to file a petition against Mr. Hegde gevernment or its agencies. The latest was when he filed a writ Petiton questioning the continuance in office by Hedge in view of the severe strictures in the High Court judgement against Hegde governments arrack bottling contrict. With great difficulty he could get writ petition, under article 221 of the Constitution, filed before the court. He has also cited the Kerala High Court judgment in respect of the Kerala Electricity Minister Balakrishna Pillai in support of his appeal for declaration by court that Hegde has violated the oath of office he has taken under Article 164 (3) of the Constitution and that Hegde is disqualified to continue in office. It may be recalled that a Division Bench of the High Court has turned the arrack bottling order issue at Hegde's behest as arbitrary capricious and violative of the constitution.''

"Hegde's behest" ಎಂದು ಯಾವ ಕೋರ್ಟ್ ಆರ್ಡರ್‌ನಲ್ಲೂ ಇಲ್ಲ, ಅಲ್ಲಿ ಹೆಗಡೆ ಹೆಸರಿಗೂ ಮಾತ್ರ ಕಂಟ್ರಾಕ್ಟರಿಗೂ ಯಾವ ಸಂಬಂಧವನ್ನೂ ಕಲ್ಪಿಸಿರಲಿಲ್ಲ. ಇದನ್ನು ಬರೆವಂಥವರು ಕಲ್ಪಿಸಿದ್ದಾರೆ. ಇದರ ಮೇಲೆ ತಮಗೆ ಗೊತ್ತಾಗಬಹುದು ಎಷ್ಟು ದುಷ್ಟ ಹೇತು ಇದೆ ಎಂದು. ಮಾನ್ಯ ಸುಬ್ಬಯ್ಯನವರ ಹೆಸರು ಇಲ್ಲಿ ತಂದಿದ್ದಾರೆ. ಅವರ ತಲೆಯಲ್ಲಿ ಭೂತ ಯಾವಾಗ ಇಳಿಯುತ್ತದೋ ಗೊತ್ತಿಲ್ಲ. ಅವರ ಜೊತೆಗೆ ಹಿಂದೂಸ್ಥಾನ್ ಟೈಂಸ್‌ನ ಒಬ್ಬ ಕರ್‌ಸ್ಪಾಂಡೆಂಟ್. ಅವರನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಓಡಿಸಿ, ಅಂತೂ ಕೊನೆಗೆ ಬೆಂಗಳೂರಿಗೆ ಬಂದಿದ್ದಾರೆ. ಅವರಿಗೆ ವಾರ್ನಿಂಗ್ ಕಳಿಸಿದ್ದಾರೆ. 'ನೀವು ನ್ಯೂಸ್ ಕಳಿಸಿ, ವ್ಯೂಸ್ ಕಳಿಸಬೇಡಿ" ಎಂದು. ಅವರು ವೈಯಕ್ತಿಕವಾದ ದ್ವೇಷದಿಂದ ಸುಬ್ಬಯ್ಯನವರು ಇವರೂ ಸೇರಿ ಕಟ್ಟು ಕಥೆಯನ್ನು ಬರೆದರೆ ಅದಕ್ಕೆ ನೀವು ಮಹತ್ವ ಕೊಡುತ್ತೀರಾ ಎಂದು ಕೇಳುತ್ತೇನೆ. "RK Connection" ಎಂದು ಮತ್ತೊಂದು ಬಂತು.

ಬೇರೊಂದು ಪತ್ರಿಕೆಯಲ್ಲಿ ಇನ್ನೊಂದು ಸುದ್ದಿ ಬಂದಿದೆ, ನಮ್ಮ ಸರ್ಕಾರಕ್ಕೆ ಅಥವಾ ಕೆಲವು ಮಂತ್ರಿಗಳ ಮುಖಕ್ಕೆ ಮಸಿ ಬಳಿಯಲಿಕ್ಕೆ ಬಹಳ ಜನ ಪ್ರಯತ್ನ ಮಾಡುತ್ತಾರೆ. ಅದು ಕಷ್ಟ ಏನಲ್ಲ, ಏನು ಬೇಕಾದರೂ ಹೇಳಬಹುದು. ಕೈಯ್ಯಲ್ಲಿ ಒಂದು ಪತ್ರಿಕೆ ಇದ್ದರೆ ಏನು ಬೇಕಾದರೂ ಬರೆಯಬಹುದು. ಆದರೆ ಅದನ್ನು ಎಷ್ಟು ಜನ ನಂಬುತ್ತಾರೆಂಬುದು ಜನರಿಗೆ ಬಿಟ್ಟಂಥ ವಿಚಾರ. ಒಬ್ಬ ಮದ್ರಾಸ್‌ನ ಹೆಣ್ಣು ಮಗಳಿಗೆ ಫಿಲಂ ಮಾಡತಕ್ಕಂಥ ಕಂಟ್ರಾಕ್ಟ್ ಕೊಟ್ಟರು, 2 ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಹೋಗಿಬಿಟ್ಟರು ಎಂದು ಬರೆದು ಅದರಲ್ಲಿ ಆರ್. ಕೆ. ಅಂತ ಬರೆದಿದ್ದಾರೆ. ಅದರಲ್ಲಿ ನನ್ನ ಹೆಸರನ್ನು ಪೂರ್ತಿ ಬರೆಯಲಿಕ್ಕೆ ಧೈರ್ಯ ಅವರಿಗೆ ಇರಲಿಕ್ಕಿಲ್ಲ. ಅದಕ್ಕೆ ಸಂಬಂಧಪಟ್ಟಂತೆ ನಮ್ಮ ಇಲಾಖೆಯಿಂದ ಬಂದಿರತಕ್ಕಂಥದ್ದನ್ನು ಇಲ್ಲಿ ಓದಿಬಿಡುತ್ತೇನೆ.

"In 1986-87 the Department of Information and Publicity produced 26 documentaries. The one produced by M. S. Jamal is one of them. This documentary was produced at the request of the Rural Development Department. The script was also vetted by them, The agreement between the film-maker and the department was signed on 28-10-1985. Later, on 28-1-86 the Rural Development Department suggested to her, that the film could be made as a vide film instead of in 35mm because firstly, instead of, a two-reeler we would get an hour-long documentary and secondly we could show it on video circuit and have it telecast. The longer duration would enable the full gamut of development activities to be covered But because the agreement had been signed for a 35mm film, she wrote to the government about confirming the change. The matter was reexamined and she was allowed to make the video film on 15-4-86. The film will be telecast in three instalements of roughly 20 minutes each. It is already with the Doordarshan.

Paying advance to a film-maker is a standard practice. It is a part of the standard agreement drawn up by the Department. In the agreement there is a penality clause for delayed completion of the film. But it was not invoked because the delay occurred as a result of the Rural Develop-

ment Department clearing the script and the final version of the film and reexamination of the proposal to change it from 35mm to video. The Rural Development Department suggested some cuts, which were carried out. Since the delay and the cuts occurred account of government's decisions, the penalty clause was not invoked.

M. S. Jamal is not in the panel, which includes over 40 names. Inclusion in the panel is not mandatory. Government can invite any filmmaker to make films. The panel is only for the Department's guidance. And any film-maker can write for inclusion in the panel.

Ms Jamal worked as per the standard agreement of the Department and on the standard rates. No under favour has been shown to her. When the films is telecast it will reach a wide audience."

ಈಗ ಮತ್ತೊಂದು ಸುದ್ದಿ ಇನ್ನೊಂದು ಪತ್ರಿಕೆಯಲ್ಲಿ ಬಂದಿದೆ. ಬಹಳ ರುಚಿಯಿಂದ ಕೆಲವು ಜನ ಅದನ್ನು ಓದುತ್ತಾರೆ. ಅಂತಹ ಪತ್ರಿಕೆಯಲ್ಲಿ ಬಂದಿದೆ. ಮಿನುಗುತಳವಾರ್‌ರವರಿಗೆ ಸರ್ಕಾರದಿಂದ ೫ ಲಕ್ಷವೋ-೬ ಲಕ್ಷವೋ ದಂಡ್ಡನ್ನು ಕೊಟ್ಟಿದ್ದಾರೆ ಕೇವಲ ತಯಾರು ಮಾಡುವುದಕ್ಕೆ ಅಂತ. ನಾನು ಕೇಳಿದ್ದೇನೆ. ಕೆಲವು ದಿವಸ ಹಿಂದೆಯೂ ಕೇಳಿದ್ದೇನೆ. ಯಾರು ಅಂತ ಹೆಸರನ್ನು ಯಾರೂ ಹೇಳಿಲ್ಲ.

ಶ್ರೀ ಎಂ. ಎಸ್ ಕೃಷ್ಣನ್.— ೧೪ ಲಕ್ಷ ಕೇಳಿದರು ನೀವು ೬ ಲಕ್ಷ ಕೊಟ್ಟಿದ್ದೀರಿ ಎಂದು.

ಶ್ರೀ ರಾಮಕೃಷ್ಣ ಹೆಗಡೆ.— ಕೊಟ್ಟಿದ್ದೇವೆಯೋ ? ಎಂದೆಂದೂ ಇಲ್ಲ. ಕರ್ನಾಟಕ ಸರ್ಕಾರದ ವಲಯದಲ್ಲಿ ಕೊಟ್ಟಿಲ್ಲ. ಕೇರಳದಲ್ಲಿ ಕೊಟ್ಟಿದ್ದಾರೋ, ಮಹಾರಾಷ್ಟ್ರದಲ್ಲಿ ಕೊಟ್ಟಿದ್ದಾರೋ, ದೆಹಲಿಯಲ್ಲಿ ಕೊಟ್ಟಿದ್ದಾರೋ ನಮಗೆ ಗೊತ್ತಿಲ್ಲ.

ಈಗ ಕೆಲವು ಪತ್ರಿಕೆಗಳಿಗೆ ಈ ರೀತಿಯ ಒಂದು ಮಿಥ್ಯಾರೋಪವನ್ನು ಮಾಡುವುದೇ ಹವ್ಯಾಸ ಎಂದು ಕಾಣುತ್ತದೆ. ಹೈಕೋರ್ಟಿನಲ್ಲಿ ಯಾವುದೋ ಕಾಣದ ಕೈ ಇದೆಯೆಂದು ಇದರಲ್ಲಿ ಬರೆಯುತ್ತಾರೆ. ಆ ವಿಚಾರವನ್ನು ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಒಂದು ಪಿಟಿಷನ್ ಇಲ್ಲಿ ಇತ್ಯರ್ಥ ಆದದ್ದು, ಅದರ ವಿರುದ್ಧ ಸುಪ್ರೀಮ್ ಕೋರ್ಟಿಗೆ ಮಾನ್ಯ ಸುಬ್ಬಯ್ಯನವರು ಹೋಗಿದ್ದಾರೆ. ಸುಪ್ರೀಮ್ ಕೋರ್ಟ್ ಮುಂದೆ ಹೋಗಿರುವುದರಿಂದ ನಾನು ಏನೂ ಹೇಳುವುದಕ್ಕೆ ಬಯಸುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಹಿಂದೆ ಆರೋಪ ಮಾಡಿರುವುದರ ಬಗ್ಗೆ ಹಿಂದೂಸ್ಥಾನ್ ಟೈಮ್ಸ್. ಪತ್ರಿಕೆಯ ಕರೆಸ್ಪಾಂಡೆಂಟ್ ಡೆಫಮೇಷನ್ ಕೇಸನ್ನು ಎದುರಿಸುತ್ತಿದ್ದಾರೆ. ಆದಕ್ಕಾಗಿ ಇಷ್ಟೆಲ್ಲಾ ಒಂದು, ಮತ್ತೊಂದು ಬಣ್ಣ ಬಣ್ಣದ ಕಥೆ ಕಟ್ಟಿ ಇದನ್ನು ಬರೆದು ಹಂಚಿದ್ದಾರೆಂದು ನನಗೆ ತಿಳಿದು ಬಂದಿದೆ. ಈ ಬಗ್ಗೆ ಇಷ್ಟೇ ಸಾಕು ಎಂದು ಕಾಣುತ್ತದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಇದೇ ರೀತಿಯ ಒಂದು ಸುದ್ದಿ ಬಂದಿತ್ತು. ಅದಕ್ಕೆ ವಾರ್ತಾ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮಾನ್ ಚಿರಂಜೀವ್ ಸಿಂಗ್ ಅವರು ಒಂದು ಉತ್ತರವನ್ನೂ ಕೊಟ್ಟಿದ್ದಾರೆ. ವಸ್ತು ಸ್ಥಿತಿಯನ್ನು ವಿವರಿಸಿ ಉತ್ತರವನ್ನು ಕೊಟ್ಟಿದ್ದು ಅದನ್ನು ಓದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಧ್ಯಕ್ಷರೇ, ಈ ಚರ್ಚೆಯಲ್ಲಿ ಕೆಲವು ಮಹತ್ವದ ಸೂಚನೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಮತ್ತು ಕೆಲವು ಟೀಕೆಗಳನ್ನು ಉಗ್ರವಾಗಿ ಮಾಡಿದ್ದಾರೆ. ವಿರೋಧ ಪಕ್ಷದ ನಾಯಕರು ಈ ವರ್ಷದ ಈ ಒಂದು ಅಧಿವೇಶನದಲ್ಲಿ ಅತಿ ಉಗ್ರವಾದ ಟೀಕೆಯನ್ನು ಸರ್ಕಾರದ ಮೇಲೆ ಗಳಿಗರೆದಿದ್ದು ಇದರ ಬಗ್ಗೆ ಪತ್ರಿಕೆಯವರೂ ಅದೇ ರೀತಿ ಬರೆದಿದ್ದಾರೆ. ಅದರಲ್ಲಿ ಮೊದಲನೇ ಅಂಶ ಏನೆಂದರೆ, ಸಿಬ್ಬಂದಿ ಮೇಲೆ ಸರ್ಕಾರದ, ಮಂತ್ರಿಗಳ ಹತೋಟಿ ಇಲ್ಲ ಮತ್ತು ಭ್ರಷ್ಟಾಚಾರ ಯಾವ ರೀತಿಯಿಂದಲೂ ಕಡಿಮೆಯಾಗಿಲ್ಲ. ಎಲ್ಲಾ ಇಲಾಖೆಗಳಲ್ಲೂ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಭ್ರಷ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತಾ ಇಲ್ಲ, ಅಧಿಕಾರಿಗಳ ವರ್ಗಾವಣೆಯಲ್ಲಿ ರಾಜಕೀಯ ಹಸ್ತಕ್ಷೇಪ ಬಹಳ ಇದೆ

ಇಷ್ಟೆಲ್ಲಾ ಮುಖ್ಯವಾಗಿ ನಮ್ಮ ಆಡಳಿತದಲ್ಲಿ, ನಮ್ಮ ಆಡಳಿತದ ಮೇಲೆ ಬಂದ ಟೀಕೆಗಳು. ಕೇವಲ ವಿರೋಧ ಪಕ್ಷದ ನಾಯಕರು ಅಷ್ಟೇ ಅಲ್ಲ ಇನ್ನೂ ಅನೇಕ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಗಳನ್ನು ಈ ವಿಚಾರದಲ್ಲಿ ಹೇಳಿದ್ದಾರೆ. ಮೊದಲನೆದಾಗಿ, ಆಡಳಿತ ಸಿಬ್ಬಂದಿ ಮೇಲೆ ಸರ್ಕಾರದ ಹತೋಟಿ ಇಲ್ಲ ಎಂಬುದು. ಇದನ್ನು ನಾನಂತೂ ಎಂದೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಯಾವ ಒಂದು ಭಾವನೆ ಅವರ ಮನಸ್ಸಿನಲ್ಲಿ ಹೇಗೆ ಬಂತೋ ನನಗೆ ಗೊತ್ತಿಲ್ಲ. ನಿಜ, ಅನೇಕ ಸಂದರ್ಭ ಗಳಲ್ಲಿ ನಮ್ಮ ಹತ್ತಿರ ಅಧಿಕಾರಿಗಳ ವರ್ಗಾವರ್ಗಿ ಬಗ್ಗೆ ಅಥವಾ ವರ್ಗಾವಣೆ ರದ್ಧತಿ ಬಗ್ಗೆ ಮನವಿಗಳು ಬರುತ್ತವೆ. ಆ ಮನವಿಗಳು ಸಾರ್ವಜನಿಕರಿಂದಲೂ ಬರುತ್ತವೆ. ಹಾಗೂ ಈ ಮನೆಯ ಮತ್ತು ಮೇಲ್ಮನೆಯ ಮಾನ್ಯ ಸದಸ್ಯರಿಂದಲೂ ಬರುತ್ತವೆ. ಯಾವ ಮನವಿಗಳು ಬರುತ್ತವೆಯೋ ಆ ಎಲ್ಲಾ ಮನವಿಗಳಂತೆ ನಾವು ವರ್ಗಾವಣೆ ಮಾಡುತ್ತೇವೆ ಅಥವಾ ವರ್ಗಾವಣೆ ರದ್ದು ಮಾಡುತ್ತೇವೆಂದು ಯಾರೂ ದಯವಿಟ್ಟು ತಿಳಿದುಕೊಳ್ಳಬಾರದು. ಆ ಮನವಿಗಳಲ್ಲಿ ವರ್ಗಾವಣೆ ಬಗ್ಗೆ ಬಲವಾದ ಕಾರಣ ಇದ್ದರೆ...ಈಗ ಒಬ್ಬ ಅಧಿಕಾರಿ ಇರುತ್ತಾನೆ. ಆ ಅಧಿಕಾರಿಯ ತಂದೆ ಕ್ಯಾನ್ಸರ್ ರೋಗದಿಂದ ಬಳಲು ತ್ತಿದ್ದು, ಆ ಅಧಿಕಾರಿ ಬಿದರ್‌ನಲ್ಲೋ ಕೊಳ್ಳೇಗಾಲದಲ್ಲೋ ಕೆಲಸ ಮಾಡುತ್ತಿರುತ್ತಾನೆ.

೧೦–೩೫ ಎ. ಎಂ.

ಆತ ಒಬ್ಬ ಶಾಸಕರ ಮುಖಾಂತರವಾಗಿ ಈ ಬೇಡಿಕೆಯನ್ನು ಸರ್ಕಾರಕ್ಕೆ ತಲುಪಿಸಿದರೆ ಪರಿಣಾಮ ಕಾರಿಯಾದ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬಹುದು ಎನ್ನುವ ಆಶಯದಿಂದ ಕೆಲವು ಅಧಿಕಾರಿಗಳು ಆ ರೀತಿ ಮಾಡುತ್ತಾರೆ. ಆ ರೀತಿ ಶಾಸಕರು ಒಂದು ಹೇಳಿದರೂ ಅದು ದೊಡ್ಡ ಅಪರಾಧವೆಂದು ನಾನು ತಿಳಿಯುವುದಿಲ್ಲ. ಕ್ಯಾನ್ಸರ್ ರೋಗಕ್ಕೆ ಕೊಳ್ಳೇಗಾಲದಲ್ಲಿ ಅಥವಾ ಬೀದರ್‌ನಲ್ಲಿ ಚಿಕಿತ್ಸೆಗಾಗಿ ಯಾವ ವ್ಯವಸ್ಥೆ ಇಲ್ಲ. ಬೆಂಗಳೂರು ಅಥವಾ ಹುಬ್ಬಳ್ಳಿ ಧಾರವಾಡಕ್ಕೆ ಹಾಕಬೇಕೆಂದು ಕೇಳಿಕೊಂಡಾಗ ಅದನ್ನು ಸರ್ಕಾರ ಸಹಾನುಭೂತಿಯಿಂದ ಗಮನಿಸುತ್ತದೆ. ಆದರೆ ಯಾವುದಾದರೂ ಒಬ್ಬ ಅಧಿಕಾರಿ ಅನಾವಶ್ಯಕವಾಗಿ ತನ್ನ ವ್ಯಯುಕ್ತಿಕ ಅನುಕೂಲತೆಯ ಒಂದೇ ಒಂದು ದೃಷ್ಟಿಯಿಂದ ಶಾಸಕರ ಮುಖಾಂತರವಾಗಿ ಅಥವಾ ಬೇರೆ ಯಾವುದೇ ಒಬ್ಬ ಪ್ರಭಾವವುಳ್ಳ ವ್ಯಕ್ತಿಯು ಮುಖಾಂತರವಾಗಿ ಆ ರೀತಿಯ ಬೇಡಿಕೆಯನ್ನು ಸರ್ಕಾರಕ್ಕೆ ಕಳುಹಿಸಿದರೆ ಆ ರೀತಿಯ ಬೇಡಿಕೆಗೆ ನಾವು ಮನ್ನಣೆ ಕೊಡುವುದಿಲ್ಲ. ನಮ್ಮ ಅಧಿಕಾರಿಗಳಿಗೆ ಅತ್ಯಂತ ಸ್ಪಷ್ಟವಾದ ನಿರ್ದೇಶನ ಕೊಟ್ಟಿದ್ದೇವೆ. ಈ ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ಕೇಲವೇ ದಿವಸಗಳಲ್ಲಿ ಮತ್ತು ಪುನಃ ಎರಡು ಭಾರಿ ಈ ವಿಚಾರದಲ್ಲಿ ನೆನಪು ಮಾಡಿ ಆ ಒಂದು ನಿರ್ದೇಶನವನ್ನು ಪುನಃ ಅವರಿಗೆ ಕಳುಹಿಸಿ ದ್ದೇವೆ. ವರ್ಗಾವಣೆ ಸಾಮಾನ್ಯವಾಗಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಆಗಬೇಕು. ಅನಿವಾರ್ಯವಾದ ಕಾರಣ ಇದ್ದರೆ ಮಾತ್ರ ವರ್ಷದ ಬೇರೆ ತಿಂಗಳಿನಲ್ಲಿ ವರ್ಗಾವಣೆ ಮಾಡಬಹುದೆ ಹೊರತು ಸಾಮಾನ್ಯ ವಾಗಿ ವರ್ಗಾವಣೆಯನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳನ್ನು ಹೊರತುಪಡಿಸಿ ಬೇರೆ ತಿಂಗಳುಗಳಲ್ಲಿ ಮಾಡಕೂಡದೆಂದೂ, ಮತ್ತೆ ಯಾವುದೇ ಅಧಿಕಾರಿಗೆ ವೈಯುಕ್ತಿಕವಾದ ತೊಂದರೆ ಇದ್ದರೆ ಅದನ್ನು ತನ್ನ ಖಾತೆಯ ಮುಖ್ಯಸ್ಥರಿಗೆ ತಿಳಿಸಬೇಕು. ಖಾತೆಯ ಮುಖ್ಯಸ್ಥರು ಈ ವೈಯುಕ್ತಿಕವಾದ ಅನಾನು ಕೂಲತೆಯನ್ನು ಗಮನದಲ್ಲಿಟ್ಟು ಸಾಮಾನ್ಯ ವರ್ಗಾವಣೆ ಮಾಡತಕ್ಕಂತಹ ಕಾಲದಲ್ಲಿ ಅಧಿಕಾರಿಗಳು ವರ್ಗಾವಣೆಯನ್ನು ಮಾಡಬೇಕು. ಯಾವುದೇ ಅಧಿಕಾರಿ ತನ್ನ ಪ್ರಮೋಷನ್ ಬಗ್ಗೆ ಅಥವಾ ವರ್ಗಾವಣೆಯ ಬಗ್ಗೆ ಶಾಸಕರಿಗೆ ತೊಂದರೆ ಕೊಡಬಾರದು, ಅವರ ಮುಖಾಂತರವಾಗಿ ಪ್ರಯತ್ನ ಮಾಡ ಕೂಡದೆಂದು ನಾವು ತಿಳಿಸಿದ್ದೇವೆ. ಕರ್ನಾಟಕ ರಾಜ್ಯ ಸರ್ಕಾರದ ಸಿಬ್ಬಂದಿ ಇಡೀ ದೇಶದಲ್ಲಿಯೇ ಅತಿ ಉತ್ತಮವಾದುದೆಂದು ನಾನು ಹೇಳುವುದಿಲ್ಲ. ಆದರೆ ಬೇರೆ ರಾಜ್ಯಗಳ ಸಿಬ್ಬಂದಿ ಜೊತೆಗೆ ಹೋಲಿಸಿ ನೋಡಿದಾಗ, ಅನೇಕ ರಾಜ್ಯಗಳ ಸರ್ಕಾರಿ ಸಿಬ್ಬಂದಿಗಿಂತಲೂ ಕರ್ನಾಟಕ ರಾಜ್ಯ ಸರ್ಕಾರದ ಸಿಬ್ಬಂದಿ ಹೆಚ್ಚು ದಕ್ಷತೆ ಮತ್ತು ಪ್ರಾಮಾಣಿಕತೆ ಉಳ್ಳಂಥ ಸಿಬ್ಬಂದಿ ಎಂದು ಹೇಳಿದರೆ ಅದು ಅತಿಶಯೋಕ್ತಿ ಅಲ್ಲ. ನಮ್ಮ ಸಿಬ್ಬಂದಿಯಲ್ಲಿ ಮತ್ತೊಂದು ಹೆಚ್ಚಿನ ಗುಣ ಬೇರೆ ರಾಜ್ಯಗಳ ಸಿಬ್ಬಂದಿಯಲ್ಲಿ ನೋಡದೆ ಇರ ತಕ್ಕದ್ದು ಏನೆಂದರೆ, ಜನರ ದುಃಖದ ಜೊತೆಗೆ ಅಥವಾ ಅವರ ಸಮಸ್ಯೆಗಳ ಜೊತಗೆ ಇವರು ಸ್ಪಂದನ ಮಾಡಿ ಹೊಂದಿಕೊಂಡು ಕೆಲಸ ಮಾಡತಕ್ಕವರು ಆಗಿದ್ದಾರೆ. ನೂರಕ್ಕೆ ನೂರರಷ್ಟು ಜನ ಅದೇ ರೀತಿ ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಆದರೆ ಸಾಮಾನ್ಯವಾಗಿ ಹೇಳುವುದಾದರೆ ಸೆಕ್ರೇಟೇರಿಯೇಟ್ ಮಟ್ಟದಲ್ಲಿರತಕ್ಕ ಹಿರಿಯ ಅಧಿಕಾರಿಗಳಾಗಲೀ ಬೇರೆ ಬೇರೆ ಖಾತೆಗಳ ಮುಖ್ಯಸ್ಥರಾಗಲೀ

ಜಿಲ್ಲಾಧಿಕಾರಿಗಳಾಗಲೀ ಅಥವಾ ಅವರ ಕೆಳಗಡೆ ಇರತಕ್ಕ ತಾಲ್ಲೂಕು ಅಧಿಕಾರಿಗಳಾಗಲೀ ಅವರು ಸಾಮಾನ್ಯವಾಗಿ ಜನರ ಸಮಸ್ಯೆಗಳ ಜೊತೆಗೆ ಸ್ಪಂದಿಸಿ ಕೆಲಸ ಮಾಡತಕ್ಕವರು.

ಶ್ರೀ ಎಸ್. ಬಂಗಾರಪ್ಪ.—ಸಾವಿರದಲ್ಲಿ ಒಬ್ಬರು ಇರಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಆದರೆ ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಕಂಡುಕೊಳ್ಳತಕ್ಕ ಒಂದು ಗುಣ ನಮ್ಮಲ್ಲಿರಬೇಕು. ಬೇರೆ ರಾಜ್ಯಗಳ ಅಂದರೆ ನಾನು ಈಗ ಕಾಂಗ್ರೆಸ್ ಸರ್ಕಾರಗಳು ಇರತಕ್ಕ ರಾಜ್ಯಗಳ ಹೆಸರನ್ನು ಹೇಳಲೇಬೇಕಾಗುತ್ತದೆ. ಅವುಗಳನ್ನು ನೋಡಿದಾಗ ಅಲ್ಲಿರತಕ್ಕ ಪ್ರಸಂಗಗಳನ್ನು ಹೇಳಬೇಕಾಗುತ್ತದೆ. ಬಿಹಾರದಲ್ಲಿ ನೋಡಿದರೆ, ಅಲ್ಲಿಯ ಸರ್ಕಾರಿ ಸಿಬ್ಬಂದಿಯಲ್ಲಿರತಕ್ಕ ರಾಜಕೀಯ, ಅಲ್ಲಿಯ ಶಾಸಕರಿಗೂ ಬಹುಶಃ ಇರಲಿಕ್ಕಿಲ್ಲ. ಅಲ್ಲಿರತಕ್ಕ ಜಾತೀಯತೆ ಕೇವಲ ಬಿಹಾರ ಒಂದೇ ಅಲ್ಲ, ಉತ್ತರಪ್ರದೇಶ, ಮಧ್ಯಪ್ರದೇಶ ಮತ್ತು ಬೇರೆ ಕಡೆಗೂ ಅಷ್ಟು ಜಾತೀಯತೆ ಇದೆ, ಅದನ್ನು ನೋಡಿದರೆ ನಮ್ಮ ಮನಸ್ಸಿಗೆ ಹೇಸಿಗೆಯಾಗುತ್ತದೆ.

ಆದರೆ ಕರ್ನಾಟಕ ರಾಜ್ಯದ ಸರ್ಕಾರಿ ಸಿಬ್ಬಂದಿಯಲ್ಲಿ ಆ ಮಟ್ಟದ ರಾಜಕೀಯವೇ ಇಲ್ಲ. ಜಾತೀಯತೆಯೂ ಇಲ್ಲವೆಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾವು ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ಯಾವ ಮಾನ್ಯ ಸದಸ್ಯರೂ ಭಾವಿಸಕೂಡದು. ತಪ್ಪಾದಾಗ ನಾವು ನಿಷ್ಠೂರವಾಗಿ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಕೇವಲ ಸಹಕಾರ ಖಾತೆಯಲ್ಲಿ ಲೋಕಾಯುಕ್ತ ಮತ್ತು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿಗೆ ಒಳಪಟ್ಟಿರತಕ್ಕಂಥ ಅಧಿಕಾರಿಗಳ ಸಂಖ್ಯೆ ೨೭೪. ಅಮಾನತ್ತಿನಲ್ಲಿ ಇಟ್ಟಿರತಕ್ಕಂಥ ಅಧಿಕಾರಿಗಳ ಸಂಖ್ಯೆ ೧೨೨. ಸೇವೆಯಿಂದ ನಿವೃತ್ತಿಮಾಡಿದ್ದುದು, ಅಥವಾ ಡಿಸ್‌ಮಿಸ್ ಮಾಡಿದಂಥ ಕೇಸುಗಳು ೪೬. ಮತ್ತು ಕಂಪಲ್ಸರಿ ನಿವೃತ್ತಿ ಮಾಡಿದಂಥ ಕೇಸ್‌ಗಳು ೪. ಕಳೆದ ಮೂರು ವರ್ಷಗಳಲ್ಲಿ ೫ ಸಾವಿರಕ್ಕಿಂತ ಹೆಚ್ಚು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ನಾನು ಒಂದು ಸಲ ಈ ಮನೆಯಲ್ಲಿ ಹೇಳಿದಂತೆ, ಯಾವುದೇ ಒಂದು ರುಜುವಾತಾದಂಥ ಭ್ರಷ್ಟಾಚಾರಕ್ಕೆ ಒಳಪಟ್ಟ ಅಧಿಕಾರಿಗೆ ಅತಿ ಕಡಿಮೆ ಶಿಕ್ಷೆ ಎಂದರೆ ಡಿಸ್‌ಮಿಸ್. ಆದರೆ ಭ್ರಷ್ಟಾಚಾರ ಇದೆ, ಇಲ್ಲವೆಂದು ಯಾರೂ ಹೇಳಲಾರರು. ಇಲ್ಲವೆಂದರೆ ನಮ್ಮನ್ನು ನಾವು ವಂಚನೆ ಮಾಡಿಕೊಂಡ ಹಾಗೆ ಆಗುತ್ತದೆ. ನಿನ್ನೆಯ ದಿವಸ ನಾನು ಮೇಲ್ಮನೆಯಲ್ಲಿ ಹೇಳಿದ್ದೆ, ಏನೆಂದರೆ ಸರ್ಕಾರದ ಪ್ರಯತ್ನವೊಂದರಿಂದಲೇ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡತಕ್ಕದ್ದು ಸಾಧ್ಯವಿಲ್ಲ. ಅದಕ್ಕೆ ಸಾರ್ವಜನಿಕರ ಸಹಕಾರವೂ ಅಷ್ಟೇ ಮಹತ್ವ ಮತ್ತು ಅಗತ್ಯ. ಈಗ ಉದಾಹರಣೆಗೆ ಕೆಲವು ದಿವಸಗಳ ಹಿಂದೆ ಈ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ರಿಕ್ರೂಟ್‌ಮೆಂಟ್‌ಗೆ ಒಂದು ಕಮಿಟಿಯನ್ನು ಮಾಡಿದ್ದೆವು ಆ ಕಮಿಟಿಯಲ್ಲಿ ಅಭ್ಯರ್ಥಿಗಳ ಇಂಟರ್‌ವ್ಯೂ ಆಗುತ್ತಿತ್ತು. ಆಗ ಇದೇ ಮನೆಯ ಕೆಲವು ಸದಸ್ಯರು ನನ್ನ ಹತ್ತಿರ ಬಂದು ಹೇಳಿದರು ಇಲ್ಲಿ ಭ್ರಷ್ಟಾಚಾರ ಕೇಳಿಬರುತ್ತಿದೆ ಎಂದು ಹಾಗೂ ನನಗೆ ಎರಡು ಪತ್ರಗಳೂ ಬಂದವು? ನಮ್ಮ ಹತ್ತಿರ ಹತ್ತು ಸಾವಿರ ರೂಪಾಯಿಗಳನ್ನು ಕೇಳಿದರು ಎಂದು. ಈ ತರಹ ಸಹಕಾರವಾದರೂ ಬೇಕು. ತಕ್ಷಣ ನಾವು ಮಾಡಿದ್ದು ಏನೆಂದರೆ ಈ ಸಮಿತಿಯನ್ನು ರದ್ದು ಮಾಡಿದ್ದೆವು. ಒಂದು ಪ್ರಶ್ನೆಯನ್ನು ಇಲ್ಲಿ ಎತ್ತಿದ್ದರು. ಸಮಿತಿಯನ್ನು ರದ್ದು ಮಾಡಿದರೆ ದುಡ್ಡು ಕೊಟ್ಟಿದ್ದವರ ಗತಿ ಏನು? ನಾನು ಹೇಳಿದ್ದೆ, ಏನೆಂದರೆ ದುಡ್ಡು ಕೊಟ್ಟಿದ್ದು ತಪ್ಪು. ಆದರೆ ಇವರು ಇಂತಹವರಿಗೆ ಇಂತಿಷ್ಟು ದುಡ್ಡು ಕೊಟ್ಟಿದ್ದೇವೆ ಎಂದು ಹೇಳಿದರೆ ಕೊಟ್ಟಂಥ ದುಡ್ಡನ್ನು ವಸೂಲಿ ಮಾಡತಕ್ಕಂಥ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ಪತ್ರ ಬಂದಿತ್ತೇ?

ಶ್ರೀ ರಾಮಕೃಷ್ಣ ಹೆಗಡೆ.— ಹೌದು. ಪತ್ರ ಬಂದ ಮೇಲೆ ಇವತ್ತಿನವರೆಗೂ ನನ್ನ ಹತ್ತಿರ ಇಂತಿಷ್ಟು ದುಡ್ಡು ಕೊಟ್ಟಿದ್ದೇವೆ ಎಂದು ಹೇಳಲು ಯಾರೂ ಬಂದಿಲ್ಲ. ಬಂದರೆ ನಾನು ಇವತ್ತು ಸಹ ಹೇಳುತ್ತೇನೆ, ಆ ದುಡ್ಡನ್ನು ವಸೂಲು ಮಾಡಿಸಿ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.-- ಕೆಲಸದ ಬಗ್ಗೆ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.— ಈ ವಿಚಾರದಲ್ಲಿ ನನ್ನ ಸರ್ಕಾರ ಏನು ತೀರ್ಮಾನ ಮಾಡಿದೆ ಎಂದರೆ ಈ ಬೆರಳಚ್ಚುಗಾರರು ಮತ್ತು ಶೀಘ್ರ ಲಿಪಿಗಾರರ ರಿಕ್ರೂಟ್ ಮೆಂಟನ್ನು ಇನ್ನು ಮುಂದೆ ಯಾವುದೇ

ರೀತಿಯ ಇಂಟರ್‌ವ್ಯೂ ಇಲ್ಲದೆ ನೇರವಾಗಿ ರೋಸ್ಟರ್ ಪ್ರಕಾರ ಮತ್ತು ಅವರು ಏನು ಅಂಕ ಪಡೆದಿರುತ್ತಾರೆ, ಅದರ ಆಧಾರದ ಮೇಲೆ ನೇಮಕ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಏಕೆಂದರೆ ಇದರಲ್ಲಿ ಬೇರೆ ಯಾವುದೇ ತರಹ ಜ್ಞಾನದ ಅಗತ್ಯ ಇಲ್ಲ. ಇದರಲ್ಲಿ ಇಂಟರ್‌ವ್ಯೂ ಮಾಡಿದರೆ ಏನು ಸಿಗುತ್ತದೆ? ಅವರು ಏನು ಉತ್ತರ ಹೇಳಬೇಕು? ೮೦-೮೫ ಪರ್ಸೆಂಟ್ ಅಂಕಗಳನ್ನು ತೆಗೆದುಕೊಂಡಂಥ ಒಬ್ಬ ಅಭ್ಯರ್ಥಿ ಇಂಟರ್‌ವ್ಯೂನಲ್ಲಿ ಕೇವಲ ೧೫ ಮಾರ್ಕ್ಸ್ ತೆಗೆದುಕೊಳ್ಳುವುದು ಅಥವಾ ಮಾರ್ಕ್ಸ್ ೪೫ ತೆಗೆದುಕೊಂಡವನಿಗೆ ಇಲ್ಲಿ ಇಂಟರ್‌ವ್ಯೂನಲ್ಲಿ ೪೦ ಮಾರ್ಕ್ಸ್ ತೆಗೆದುಕೊಳ್ಳುವುದು ಹೀಗೆ ಮಾಡಿದರೆ ಯಾರಿಗೆ ಯೋಗ್ಯತೆ ಇಲ್ಲವೋ ಅಂತಹವರು ಬಂದು ಇಲ್ಲಿ ಕೂಡುತ್ತಾರೆ. ಅವರಿಂದ ಒಳ್ಳೆಯ ಕೆಲಸ ಮಾಡಿಸಲಿಕ್ಕೆ ಸಾಧ್ಯ ಇಲ್ಲ. ನಾನು ಈ ಒಂದೇ ಒಂದು ಉದಾಹರಣೆ ಕೊಟ್ಟಂಥ ಉದ್ದೇಶ ಏನೆಂದರೆ ಯಾರು ಲಂಚ ತಿನ್ನುತ್ತಾರೆಂದು ನಮಗೆ ಗೊತ್ತಾಗಬೇಕು. ಯಾರು ಲಂಚ ತಿನ್ನುತ್ತಾರೆಂಬುದು ನಮಗೆ ಗೊತ್ತಾದರೆ ನಾವು ಕ್ರಮ ತೆಗೆದುಕೊಳ್ಳಬಹುದು. ಬರೀ ಬಾಯಿ ಮಾತಿನಲ್ಲಿ ಲಂಚ, ಲಂಚ ಇದೆ ಎಂದು ಹೇಳುವುದರಿಂದ ಈ ಒಂದು ರೋಗ ಗುಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಿನ್ನೆ ಮೇಲಿನ ಮನೆಯಲ್ಲಿ ಈ ಮಾತನ್ನು ಹೇಳಿದೆ. ತಾಲ್ಲೂಕು ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಬೇಕು ಎಂದು ಸರ್ಕಾರವು ಯೋಚನೆ ಮಾಡುತ್ತಿದೆ. ಅದೂ ಅಧಿಕಾರೇತರರ ಕಮಿಟಿ ಯಾರ ಮೇಲೆ ಸಾಮಾನ್ಯ ಜನತೆಯ ವಿಶ್ವಾಸ ಇದೆ, ಅವರ ಪ್ರಾಮಾಣಿಕತೆ ಬಗ್ಗೆ, ಅವರ ನಡತೆ ಬಗ್ಗೆ, ಅವರ ಕೆಲಸಕಾರ್ಯಗಳ ಬಗ್ಗೆ ಅಂತಹವರನ್ನು, ೪ ಅಥವಾ ೫ ಜನರನ್ನು ಹಾಕಬೇಕೆಂದಿದ್ದೇವೆ. ಅದಕ್ಕೆ ಒಂದು ಸ್ಥಾನವನ್ನು ಕೊಡುತ್ತೇವೆ. ತಾಲ್ಲೂಕು ಆಫೀಸಿನಲ್ಲಾಗಲೀ ಅಥವಾ ಬಿ.ಡಿ.ಒ. ಆಫೀಸಿನಲ್ಲಾಗಲಿ, ಎಲ್ಲೇ ಆಗಲಿ ಯಾವುದೇ ಅಧಿಕಾರಿ ಲಂಚ ಕೇಳಿದ ಅಂದರೆ ಸಾಕು ಒಂದು ಲಿಖಿತ ಪತ್ರವನ್ನು ಕೊಟ್ಟರೆ ಅವರ ಮೇಲೆ ತಕ್ಷಣ ಎನ್‌ಕ್ವೈರಿ ಪ್ರಾರಂಭ ಮಾಡುತ್ತಾರೆ. ಆದುದರಿಂದ ಈ ಸದನದ ಮುಖಾಂತರವಾಗಿ, ನಾನು ಸಾರ್ವಜನಿಕರನ್ನು ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ವೈ.ಕೆ. ರಾಮಯ್ಯನವರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

ಈ ಒಂದು ರೋಗವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡೋಣ. ಇದಕ್ಕೆ ಸಾರ್ವಜನಿಕರ ಸಹಾಯ ಮತ್ತು ಸಹಕಾರ ಬೇಕು. ನಾವು ಈಗ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ಮಾನ್ಯ ಸದಸ್ಯರಿಗೆ ಅದು ಗೊತ್ತಿದೆ. ಪಬ್ಲಿಕ್ ಗ್ರಿವೆನ್ಸ್‌ನ ಸೆಲ್ ಎಂದು ಮಾಡಿದ್ದೇವೆ. ಪ್ರತಿ ದಿವಸ ಬೆಳಿಗ್ಗೆ ನನ್ನ ಹತ್ತಿರ ನೂರಾರು ಜನರು ಬರುತ್ತಾರೆ, ಒಂದೊಂದು ದಿವಸ ಐದು ನೂರು ಜನ ಬರುತ್ತಾರೆ. ಅವರು ತಮ್ಮ ತಮ್ಮ ಸಮಸ್ಯೆಗಳನ್ನು ತರುತ್ತಾರೆ. ಅನೇಕ ಜನರು ವೈಯಕ್ತಿಕವಾದ ಸಮಸ್ಯೆಗಳನ್ನು ತರುತ್ತಾರೆ. ಅನೇಕ ಜನರು ಸರ್ಕಾರಿ ಅಧಿಕಾರಿಗಳ ಮೇಲೆ ಮತ್ತು ಬೇರೆ ಖಾತೆಗಳ ಮೇಲೆ ದೂರುಗಳನ್ನು ತರುತ್ತಾರೆ. ಅಷ್ಟೇ ಅಲ್ಲ. ನಮ್ಮ ಆಫೀಸಿಗೆ ಪತ್ರ ಬರೆಯುತ್ತಾರೆ. ಅವೆಲ್ಲವುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈ ಒಂದು ಹೊಸ ಪದ್ಧತಿ ಬೇರೆ ಯಾವುದೇ ರಾಜ್ಯದಲ್ಲಿ ಇಲ್ಲ. ನಾವು ಮಾಡಿದಂಥ ಈ ಕೆಲಸ ಪ್ರತಿ ದಿವಸ ಬೆಳಿಗ್ಗೆ ದಿನಪತ್ರಿಕೆಗಳಲ್ಲಿ ಜನರ ದುಃಖದುಮ್ಮಾನಗಳು, ಇದರ ಬಗ್ಗೆ ಇರತಕ್ಕ ಕಾಲಂಗಳಲ್ಲಿ ಬರುವ ವಿಷಯಗಳು, ಸಂಪಾದಕರ ಪತ್ರದ ಕಾಲಂನಲ್ಲಿ ಬರುವ ವಿಷಯಗಳು ಸರ್ಕಾರವನ್ನು ಟೀಕೆ ಮಾಡಿ ಬರುವ ಪತ್ರಗಳು ಹಾಗೂ ಯಾವುದೇ ಅಧಿಕಾರಿ ಅದಕ್ಷತೆಯಿಂದ ನಿರ್ಲಕ್ಷತೆಯನ್ನು ತೋರಿಸಿರುವ ಪ್ರಕರಣಗಳು, ನೀರಿನ ಬವಣೆ, ರಸ್ತೆ ಹಾಳಾಗಿರುವುದು, ರಸ್ತೆಯಲ್ಲಿ ಗುಂಡಿ ಬಿದ್ದಿರುವ ಬಗ್ಗೆ ಸಾರ್ವಜನಿಕರ ಸಂಕಷ್ಟಗಳನ್ನು ತೋಡಿಕೊಂಡರೆ, ಅದೇ ದಿವಸ ಸಂಬಂಧಪಟ್ಟ ಅಧಿಕಾರಿಗಳಿಗೆ ನಮ್ಮ ಕಾರ್ಯಾಲಯದಿಂದ ಪತ್ರ ಹೋಗುತ್ತದೆ. ತಕ್ಷಣ ದುರಸ್ತಿ ಮಾಡತಕ್ಕಂಥ ಯಾವ ಬಗ್ಗೆ ದೂರು ಕೊಟ್ಟಿದ್ದಾರೆ, ಯಾವ ಅಧಿಕಾರಿ ಬಗ್ಗೆ ದೂರು ಕೊಟ್ಟಿದ್ದಾರೆ ಎಂಬುದನ್ನು ನೋಡಿ. ಅದರ ವಿರುದ್ಧ ಕ್ರಮ ತೆಗೆದುಕೊಳ್ಳತಕ್ಕಂಥ ಒಂದು ಹೊಸ ಪದ್ಧತಿಯನ್ನು ನಾವು ಜಾರಿಗೆ ತಂದಿದ್ದೇವೆ. ಆದರೂ ಪ್ರತಿಯೊಂದೂ ಅತ್ಯಂತ ದಕ್ಷತೆಯಿಂದ ನಡೆಯುತ್ತದೆಂದು ನಾನು ಹೇಳುವುದಕ್ಕಾಗುವುದಿಲ್ಲ. ಬೇರೆ ಕಡೆಗೆ ಹೋಲಿಸಿ ನೋಡಿದಾಗ, ಸಾವಿರ ಪಾಲು ನಮ್ಮದು ಉತ್ತಮ ಎಂಬುದನ್ನು ಹೇಳಲೇಬೇಕು.

ಇನ್ನು ಸರ್ಕಾರಿ ಅಧಿಕಾರಿಗಳ ಮೇಲೆ ಕಂಟ್ರೋಲ್ ಇಲ್ಲ. ಕಂಟ್ರೋಲ್ ಹೇಗೆ, ಮೂಗುದಾರ ಹಾಕಿಕೊಂಡು, ಕೈಯಲ್ಲಿ ವಿಪ್‌ನ್ನು ಹಿಡಿದುಕೊಂಡು ಹೋಗಬೇಕೇ? ಕಂಟ್ರೋಲ್ ಹೇಗೆ? ಎಲ್ಲದಕ್ಕಿಂತ ಉತ್ತಮವಾದ ಕಂಟ್ರೋಲ್ ಏನು ಎಂದರೆ, ಮಂತ್ರಿಗಳ, ಮುಖ್ಯಮಂತ್ರಿಗಳ, ಸ್ವತಃ ವೈಯಕ್ತಿಕವಾದ

ನಡತೆ. ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ದುರಹಂಕಾರ ತೋರಿಸಿದರೆ, ಕಾನೂನನ್ನು ದುರುಪಯೋಗ ಮಾಡಿದರೆ, ಅವರ ಕೆಳಗಡೆ ಇರತಕ್ಕ ಅಧಿಕಾರಿಗಳೂ ಅದೇ ರೀತಿ ಮಾಡುತ್ತಾರೆ. ಆದರೆ ಮುಖ್ಯಮಂತ್ರಿಗಳು, ಮಂತ್ರಿಗಳು ಉನ್ನತವಾದ ಮತ್ತು ಹಾರ್ಡ್‌ವರ್ಕ್ ಮಾಡಿ ತೋರಿಸಿದರೆ ಬಹಳ ಶ್ರಮಪಟ್ಟು ಕೆಲಸ ಮಾಡುವುದನ್ನು ತೋರಿಸಿದರೆ, ಅವರ ಕೆಳಗಡೆ ಇರತಕ್ಕ ಅಧಿಕಾರಿಗಳೂ ಅದೇ ರೀತಿ ಮಾಡುತ್ತಾರೆ ಎಂಬ ವಿಶ್ವಾಸ ನಮ್ಮದು.

ಆದುದರಿಂದ ಕಂಟ್ರೋಲ್ ಮೂಗುದಾರ ಮತ್ತು ಬಾರುಕೋಲಿನಿಂದ ಬರುವುದಿಲ್ಲ. ನಾವು ಯಾವ ಮಾರ್ಗ ಹಾಕಿಕೊಡುತ್ತೇವೆ, ಯಾವ ಮಾದರಿ ತೋರಿಸುತ್ತೇವೆ ಆ ಮಾದರಿಯಿಂದ ಬರುತ್ತದೆ. ಅಲ್ಲಿರತಕ್ಕಂಥವರು ಬುದ್ಧಿವಂತರು ಅವರು ನೋಡುತ್ತಾರೆ. ಯಾವರೀತಿ ನಮ್ಮಿಂದ ಕೆಲಸ ತೆಗೆದುಕೊಳ್ಳುತ್ತಾರೆ ಎಂಬುದನ್ನು ಅವರು ನೋಡುತ್ತಾರೆ.

ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಇನ್ನು ಒಂದು ಮಾತನ್ನು ನಾನು ಹೇಳಬೇಕು ಬೇರೆ ರಾಜ್ಯಗಳ ಸರಕಾರದ ಸಿಬ್ಬಂದಿಗೂ ನಮ್ಮ ರಾಜ್ಯ ಸರ್ಕಾರದ ಸಿಬ್ಬಂದಿಗೂ ಇರತಕ್ಕಂಥ ಒಂದು ಮೂಲಭೂತವಾದ ಭೇದ ಏನೆಂದರೆ, ಅನೇಕ ರಾಜ್ಯಗಳಲ್ಲಿ ನಾನು ನೋಡಿದ್ದೇನೆ, ಅಧಿಕಾರಿಗಳು ಫೈಲ್ ಮೇಲೆ ತಮ್ಮ ಅಭಿಪ್ರಾಯವನ್ನು ಬರೆಯುವಾಗ ತನ್ನ ಮೇಲಿರುವ ಅಧಿಕಾರಿಯ, ಮಂತ್ರಿಯ ಮುಖ ನೋಡಿ, ಅವರು ಯಾವ ರೀತಿ ಬಯಸುತ್ತಾರೆ ಎಂದು ತಿಳಿದುಕೊಂಡು ಆ ರೀತಿ ಬರೆಯುತಕ್ಕಂಥ ಪದ್ಧತಿ ಇದೆ. ಆದರೆ ನಮ್ಮ ಸರಕಾರದ ಸಿಬ್ಬಂದಿಗೆ ಆ ದೌರ್ಬಲ್ಯ ಇಲ್ಲ. ಅದಕ್ಕಾಗಿ ನಾವು ಹೆಮ್ಮೆ ಪಡಬೇಕಾಗಿದೆ. ಬ್ಯೂರಾಕ್ರಸಿ ಮತ್ತು ಸರಕಾರವನ್ನು ನಡೆಸತಕ್ಕಂಥ ಮಂತ್ರಿಗಳು ಅವರಿಬ್ಬರಲ್ಲಿ ವಿಶ್ವಾಸ, ಒಂದು ಸಂಬಂಧ ಹೇಗಿರಬೇಕು ಅದೇ ರೀತಿ ಇದೆ.

(ಮಾನ್ಯ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅದೇ ರೀತಿ ಮಂತ್ರಿ ಆದವನು ಸಿಬ್ಬಂದಿ ಅಥವಾ ಬ್ಯೂರಾಕ್ರಸಿಯ ಗೌರವವನ್ನು ಪಡೆಯತಕ್ಕಂಥ ಶಕ್ತಿ ಇದ್ದವನಾಗಿರಬೇಕು. ಅವನ ಬಗ್ಗೆ ಅವರಿಗೆ ಗೌರವ ಇರಬೇಕು ಹೆದರಿಕೆ ಇರಬೇಕು. ಮತ್ತು ಅವರಿಬ್ಬರ ಸಂಬಂಧ ಅತ್ಯಂತ ಸೌಹಾರ್ದವಾಗಿರಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದೇ ನಾನು ಹೇಳಿದ್ದುದು, ಅದು ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದು ಇದೆ ಎಂದು ಹೇಳುತ್ತೇನೆ, ನನಗೆ ಗೊತ್ತಿರುವ ಮಟ್ಟಿಗೆ ಈ ತರಹ ಸಂಬಂಧ ಇದೆ. ಯಾವುದೇ ತಿಕ್ಕಾಟ ಇಲ್ಲ. ಮಂತ್ರಿಗಳನ್ನು ನೋಡಿ ತಾತ್ಸಾರ ಮಾಡುವುದಾಗಲೀ, ಅವರ ಬೆನ್ನ ಹಿಂದೆ ಅವರನ್ನು ವ್ಯಂಗ್ಯ ಮಾಡಿ ನಗುವುದಾಗಲೀ ಅಂತಹ ಅಭಿಪ್ರಾಯ ಇಲ್ಲ, ಇದು ಅಷ್ಟಕ್ಕೇ ಸಾಕು.

ಶ್ರೀ ಎಸ್. ಬಂಗಾರಪ್ಪ.—ತುಂಬಾ ಚೆನ್ನಾಗಿದೆ ಎಂದು ಇಟ್ಟುಕೊಳ್ಳೋಣವೇ ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೂ ಚೆನ್ನಾಗಿ ಮಾಡಬೇಕು, ಅದಕ್ಕೆ ಅವಕಾಶ ಇದೆ. ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ ಕನ್ನಡದ ಬಗ್ಗೆ ಮಾನ್ಯ ಸದಸ್ಯರಾದ ಇದಿನಬ್ಬರವರು ಇನ್ನೂ ಕೆಲವು ಸದಸ್ಯರು, ಮಾನ್ಯ ಚಿನ್ನಪ್ಪನವರು ಸ್ವಲ್ಪ ಸಂದೇಹ ಮತ್ತು ತವಕವನ್ನು ವ್ಯಕ್ತ ಮಾಡಿದ್ದಾರೆ. ಇಂಗ್ಲೀಷ್ ಮೀಡಿಯಂ ಸ್ಕೂಲ್ ವಿಚಾರದಲ್ಲಿ ಕೆಲವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾರೆ. ಸರಕಾರ ತನ್ನ ನೀತಿಯನ್ನು ಸಡಿಲಿಸಿದೆಯೋ ಹೇಗೆ ಎಂದು ಕೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ಸರಕಾರ ಇಂಗ್ಲೀಷ್ ಮೀಡಿಯಂ ಸ್ಕೂಲ್ ವಿಚಾರದಲ್ಲಿ ತನ್ನ ಏನು ನೀತಿಯನ್ನು ಮೂರು ವರ್ಷದ ಹಿಂದೆ ತೆಗೆದುಕೊಂಡಿತ್ತೋ ಆ ನೀತಿಯಲ್ಲಿ ಅದು ವಿಚಲಿತವಾಗಿಲ್ಲ. ಆ ನೀತಿಯಲ್ಲಿ ಯಾವರೀತಿಯ ಮಾರ್ಪಾಡನ್ನೂ ನಾವು ಮಾಡಿಲ್ಲ ಆದರೆ ಒಂದು ಅಪವಾದ ರೂಪವಾಗಿ, ನಾವು ಕೆಲವು ಸಂದರ್ಭದಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಪರವಾನಗಿ ಕೊಡಬಹುದೆಂದು ಹೇಳತಕ್ಕಂಥದ್ದನ್ನು ಒಪ್ಪಿಕೊಂಡಿದ್ದೇವೆ. ಈ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳಲಿಕ್ಕೆ ಒಂದು ಕಮಿಟಿಯನ್ನು ಮಾಡಿದ್ದೇವೆ. ಅದನ್ನು ಶಿಕ್ಷಣ ಖಾತೆಯ ಮುಖ್ಯ ಅಧಿಕಾರಿ ಅಥವಾ ಸೆಕ್ರೆಟರಿಗೆ ಬಿಟ್ಟರೆ ಅದರಲ್ಲಿ ಏನಾದರೂ ಸ್ವಲ್ಪ ಮಟ್ಟಿಗೆ ತೊಂದರೆ ಬರಬಹುದು ಎಂದು ಹೇಳತಕ್ಕ ಉದ್ದೇಶದಿಂದ ನಾವು ಕ್ಯಾಬಿನೆಟ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿರುತ್ತೇವೆ. ಎಂತಹ ಸಂದರ್ಭದಲ್ಲಿ ಅದೂ ಅಪವಾದ ಸ್ವರೂಪವಾಗಿ ಇಂಗ್ಲೀಷ್ ಮೀಡಿಯಂ ಇರತಕ್ಕಂಥ ಹೊಸ ಸ್ಕೂಲ್‌ಗಳಿಗೆ ಪರವಾನಗಿ ಕೊಡಬೇಕೆನ್ನತಕ್ಕಂಥದ್ದನ್ನು

ಇದು ತೀರ್ಮಾನ ಮಾಡುತ್ತದೆ. ಇಂಗ್ಲೀಷ್ ಮಾತೃಭಾಷೆಯಾಗುಳ್ಳವರಿಗೆ, ಆಂಗ್ಲೋ ಇಂಡಿಯನ್ಸ್ ಕೆಲವು ಕ್ರಿಶ್ಚಿಯನ್ಸ್ ಇದ್ದಾರೆ. ಅವರು ಇಂಗ್ಲೀಷ್‌ನ್ನು ಮಾತೃಭಾಷೆಯ ರೀತಿಯಲ್ಲಿ ಉಪಯೋಗಿಸುತ್ತಾರೆ. ಅಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಹೆಚ್ಚು ಸಂಖ್ಯೆಯ ಅಧಿಕಾರಿಗಳು ಇರತಕ್ಕ ಕಡೆ ಕೇಂದ್ರ ವಲಯದ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೆಲಸ ಮಾಡತಕ್ಕ ಸಿಬ್ಬಂದಿವರ್ಗ ಹೆಚ್ಚು ಸಂಖ್ಯೆಯಲ್ಲಿ ಇದ್ದಾರೆ. ಅವರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಪುನಃ ಪುನಃ ವರ್ಗಾಯಿಸಲ್ಪಡತಕ್ಕಂಥ ಪ್ರಸಂಗ ಇರುತ್ತದೆ. ಅಂತಹ ಕಡೆ, ಅಥವಾ ರಕ್ಷಣಾ ಸಿಬ್ಬಂದಿವರ್ಗ ಕೇಂದ್ರೀಕೃತವಾಗಿರತಕ್ಕಂಥ ಸ್ಥಾನದಲ್ಲಿ ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ಕೊಡತಕ್ಕಂಥ, ಅದೂ ಅಪವಾದ ಸ್ವರೂಪವಾಗಿ ಕೊಡತಕ್ಕಂಥಾದ್ದು ಇದೆ ಎಂದು ನಾವು ಮೊದಲು ಒಪ್ಪಿಕೊಂಡಿದ್ದೇವೆ. ಇಂತಹ ಒಂದು ಸಂದರ್ಭ. ಆ ಸಂದರ್ಭ ಬಿಟ್ಟರೆ, ಇನ್ನೊಂದು ಭಾಷಾ ಅಲ್ಪಸಂಖ್ಯಾತರು ಇದ್ದು ಆ ಭಾಗದಲ್ಲಿ ಅವರೇ ಹೆಚ್ಚು ಜನಸಂಖ್ಯೆಯನ್ನು ಹೊಂದಿದ್ದು ಅವರಿಂದ ಏನಾದರೂ ಬೇಡಿಕೆ ಬಂದು ಅಗ್ರಹ ಮಾಡಿದರೆ ಅವರಿಗೂ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಕೊಡತಕ್ಕಂಥ ಒಂದು ನೀತಿ ಸರ್ಕಾರದ್ದು. ಇದೇನು ಹೊಸ ನೀತಿಯಲ್ಲ. ಕಳೆದ ೩ ವರ್ಷಗಳಿಂದಲೂ ಈ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದೇ ನೀತಿಯನ್ನು ಈಗ ನಾವು ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ಮತ್ತೊಂದು ಮಹತ್ವದ ವಿಚಾರವೇನೆಂದರೆ ಇಂಗ್ಲೀಷ್ ಮೀಡಿಯಂ ಶಾಲೆಗಳಲ್ಲಿ ಕನ್ನಡ ಒಂದು ಸಬ್ಜೆಕ್ಟ್ ಕಡ್ಡಾಯವಾಗಿ ಕಲಿಸಬೇಕೆಂದು ಸಹ ನಾವು ಹೇಳಿದ್ದೇವೆ. ಈ ವಿಚಾರದಲ್ಲಿ ಯಾವ ಒಬ್ಬ ಮಾನ್ಯ ಸದಸ್ಯರು ಸಹ ಚಿಂತನೆಯನ್ನು ಮಾಡತಕ್ಕಂಥ ಅಗತ್ಯವಿಲ್ಲ. ಇನ್ನೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಾದರೆ ಬಾರ್ಡರ್ ಏರಿಯಾದಲ್ಲಿ ಅಂದರೆ ಗಡಿ ಪ್ರದೇಶಗಳಲ್ಲಿ ಆಗಿರುವಂತಹ ಬೆಳವಣಿಗೆಗಳ ಬಗ್ಗೆ ಮಾನ್ಯ ಸದಸ್ಯರೊಬ್ಬರಿಂದ ಪ್ರಶ್ನೆಯ ರೂಪದಲ್ಲಿ ಚರ್ಚೆ ಆಯಿತು. ಇದೇ ವಿಷಯ ಮೇಲ್ಮನೆಯಲ್ಲಿ ಕೂಡ ಪ್ರಶ್ನೆಯ ರೂಪದಲ್ಲಿ ಚರ್ಚೆಯಾಯಿತು. ನಾನು ಆಗ ಕೊಟ್ಟಂತಹ ಒಂದು ಹೇಳಿಕೆಯ ಬಗ್ಗೆ ಬೆಳಗಾಂ ನಗರದಲ್ಲಿ ಇರತಕ್ಕಂಥ ಕನ್ನಡಿಗರ ಮನಸ್ಸಿನಲ್ಲಿ ಒಂದು ರೀತಿಯಾದಂಥ ಭಯಂದ ಸನ್ನಿವೇಶವುಂಟಾಯಿತು ಎಂದು ಕಾಣುತ್ತದೆ. ಆ ಭಯಂದ ವಾತಾವರಣವನ್ನು ನಾನು ಈ ಸಂದರ್ಭ ಉಪಯೋಗಿಸಿಕೊಂಡು ನಿವಾರಣೆ ಮಾಡಲೇಬೇಕು. ಈಗ ಗಡಿ ಪ್ರದೇಶದಲ್ಲಿ ಮರಾಠಿ ಭಾಷೆಯನ್ನು ಮಾತನಾಡಿರತಕ್ಕಂಥ ಜನರು ಇದ್ದಾರೆ. ಅವರು ಮರಾಠಿ ಶಾಲೆಗಳನ್ನು ಕೇಳಿದಾಗ ನಾವು ಮರಾಠಿ ಶಾಲೆಗಳನ್ನು ಕೊಡಲೇಬೇಕಾಗುತ್ತದೆ. ಅದು ಅವರ ಸಂವಿಧಾನಾತ್ಮಕವಾದ ಹಕ್ಕು, ಮೂಲಭೂತವಾದ ಹಕ್ಕು. ಆದ್ದರಿಂದ ಅವರು ಮರಾಠಿ ಶಾಲೆಗಳನ್ನು ಕೇಳಿದರೆ ಕೊಡಲೇಬೇಕಾಗುತ್ತದೆ. ಅದೇ ರೀತಿಯಲ್ಲಿ ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ಕನ್ನಡಿಗರು ಇದ್ದರೆ ಅವರಿಗೂ ಸಹ ಕನ್ನಡ ಶಾಲೆಗಳನ್ನು ಮಹಾರಾಷ್ಟ್ರದವರು ಕೊಡಲೇಬೇಕಾಗುತ್ತದೆ. ಅದೇ ರೀತಿಯಲ್ಲಿ ಕೇಂದ್ರ ಸರ್ಕಾರದವರು ಮುಖ್ಯಮಂತ್ರಿಗಳ ಸಭೆಯಲ್ಲಿ ಒಂದು ನೀತಿಯನ್ನು ನಿರೂಪಣೆ ಮಾಡಿದ್ದಾರೆ. ಆಗ ಆ ನೀತಿಯನ್ನು ನಾವೆಲ್ಲಾ ಒಪ್ಪಿಕೊಂಡಿದ್ದೇವೆ. ಈಗ ಇದೇನು ಹೊಸದಲ್ಲ. ಅಂದರೆ ಶೇಕಡ ಇಂತಿಷ್ಟು ಜನಸಂಖ್ಯೆ ಆಯಾಯಾ ರಾಜ್ಯಭಾಷೆಯಲ್ಲದೆ ಬೇರೆ ಭಾಷೆಯನ್ನು ಮಾತನಾಡುವವರು ಇದ್ದರೆ ಅಂತಹ ಒಂದು ಜಾಗದಲ್ಲಿ ಅವರು ಮಾತನಾಡತಕ್ಕಂಥ ಭಾಷೆಯಲ್ಲಿ ಸರ್ಕಾರಿ ರೆಕಾರ್ಡ್‌ಗಳನ್ನು ಮತ್ತು ಕಾಗದಪತ್ರಗಳನ್ನು ಇಡಬೇಕೆಂದು ಇದೆ. ರಾಷ್ಟ್ರದ ಐಕ್ಯತೆಗಾಗಿ ಈ ಒಂದು ಕಾರಣದಿಂದ ೧೯೬೭ನೇ ಇಸವಿಯಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯಲ್ಲಿ ಈ ನೀತಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ನಾನು ಸುಮಾರು ನಾಲ್ಕು ಸಲ ಭೇಟಿಯಾಗಿದ್ದೆವು. ನಾಲ್ಕು ಸಲ ಭೇಟಿಯಾಗಿ ಕೆಲವು ಮುಖ್ಯವಾದಂಥ ವಿಚಾರಗಳ ಬಗ್ಗೆ ಹೊಸ ಮಾರ್ಗವೊಂದನ್ನು ಕಂಡುಹಿಡಿದಿದ್ದೇವೆ. ಇದರಲ್ಲಿ ಮೊದಲನೆಯದಾಗಿ ಗಡಿಪ್ರದೇಶದಲ್ಲಿರತಕ್ಕಂಥ ಹಳ್ಳಿಗಳು ಯಾವುವೇ ಆಗಲಿ, ಆ ಹಳ್ಳಿಗಳು ಮಹಾಜನ್ ಕಮಿಷನ್ ಆಯೋಗದ ಪ್ರಕಾರ ವಿಂಗಡಣೆಯಾಗುವವರೆವಿಗೂ ಆ ಎಲ್ಲಾ ಹಳ್ಳಿಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಎರಡೂ ರಾಜ್ಯಗಳವರು ಯಾವ ತೊಂದರೆಯನ್ನು ಸಹ ಮಾಡಬಾರದು. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ವೇಳೆ ಮರಾಠಿ ಮಾತನಾಡತಕ್ಕಂಥ ಜನರಿದ್ದರೆ ಅವರ ಅಭಿವೃದ್ಧಿ ಕೆಲಸಕಾರ್ಯಗಳನ್ನು ನಾವು ನೋಡಿಕೊಳ್ಳಬೇಕು. ಅದೇ ರೀತಿಯಲ್ಲಿ ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿ ಕನ್ನಡ ಮಾತನಾಡತಕ್ಕಂಥ ಜನರು ಇದ್ದರೆ ಅವರ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಹಾರಾಷ್ಟ್ರ ಸರ್ಕಾರದವರು ನೋಡಿಕೊಳ್ಳಬೇಕು. ಅಭಿವೃದ್ಧಿ ಕೆಲಸಕಾರ್ಯಗಳನ್ನು ನಿಲ್ಲಿಸತಕ್ಕಂಥಾದ್ದು ಸರಿಯಲ್ಲವೆನ್ನುವ

ಒಂದು ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ. ಎರಡೂ ಭಾಗದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ನೋಡಿಕೊಳ್ಳಬೇಕು. ಎರಡನೆಯದಾಗಿ ಗಡಿ ಪ್ರದೇಶದ ಹಳ್ಳಿಗಳು ವರ್ಗಾವಣೆಯಾಗುವವರೆವಿಗೂ ತಾಂತ್ರಿಕ ಶಾಲೆಗಳಲ್ಲಿ ಇಂತಿಷ್ಟು ಸೀಟುಗಳನ್ನು ಮಹಾರಾಷ್ಟ್ರದವರು ಕನ್ನಡಿಗರಿಗೂ ಕರ್ನಾಟಕದಲ್ಲಿ ಮರಾಠಿಯವರಿಗೆ ಇಂತಿಷ್ಟು ಸೀಟುಗಳನ್ನು ಕೊಡಬೇಕೆನ್ನುವ ಪ್ರಾಸಲಾತಿ ನಿಯಮವನ್ನು ನಾವು ಒಪ್ಪಿಕೊಂಡಿದ್ದೇವೆ.

ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶಗಳಲ್ಲಿರತಕ್ಕಂಥ ಕನ್ನಡಿಗರಿಗೆ ಎಲ್ಲಾ ರೀತಿಯ ಅನುಕೂಲತೆಗಳನ್ನು ಮಹಾರಾಷ್ಟ್ರ ಸರ್ಕಾರ ಕೊಡುತ್ತಿದೆ. ಅದೇ ತರಹವಾಗಿ ಕರ್ನಾಟಕ ರಾಜ್ಯದ ಗಡಿ ಪ್ರದೇಶಗಳಲ್ಲಿರ ತಕ್ಕಂತ ಮರಾಠಿ ಜನರಿಗೆ ಕರ್ನಾಟಕ ಸರ್ಕಾರ ಅನುಕೂಲತೆಗಳನ್ನು ಕೊಡಬೇಕೆಂದು ತೀರ್ಮಾನ ವಾಗಿದೆ. ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿರುವ ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಂಪಲ್ಸರಿ ಯಾಗಿ ಕಲಿಸಲೇಬೇಕು ಎನ್ನತಕ್ಕ ನಿರ್ಣಯವನ್ನು ಏನು ಹಿಂದೆ ನಾವು ಮಾಡಿದ್ದೆವು, ಅದನ್ನು ಬಲವಂತವಾಗಿ ಅವರ ತಲೆಯ ಮೇಲೆ ಹೇರಿಸುವುದು ಕಷ್ಟವಾಗುತ್ತದೆಂದು ನಾನು ಹೇಳಬೇಕಾಗುತ್ತದೆ ಕನ್ನಡ ಟೀಚರ್ಸ್‌ನ್ನು ಆ ಶಾಲೆಗಳಲ್ಲಿ ಇಟ್ಟಿದ್ದೇವೆ. ಅಲ್ಲಿರತಕ್ಕ ಮರಾಠಿ ಜನರು ನಾವು ಕನ್ನಡವನ್ನು ಕಲಿಯುವುದೇ ಇಲ್ಲ, ಇವತ್ತಲ್ಲಾ ನಾಳೆ ನಮ್ಮ ರಾಜ್ಯಕ್ಕೆ ಹೊರಟು ಹೋಗುತ್ತೇವೆ, ನಿಮ್ಮ ರಾಜ್ಯದಲ್ಲಿ ನೌಕರಿಯು ಬೇಡ ಎಂದರೆ ನಾವು ಏನೂ ಮಾಡುವ ಹಾಗಿಲ್ಲ. ಕನ್ನಡ ಬಾರದೇ ಇದ್ದವರಿಗೆ ನೌಕರಿ ಕೊಡುವುದು ಬೇಡ ಎಂದು ನಾವು ತೀರ್ಮಾನ ಮಾಡಿದ್ದೇವೆ. ನಿಮ್ಮ ರಾಜ್ಯದಲ್ಲಿ ನಮಗೆ ನೌಕರಿ ಬೇಡ. ನಾವು ಕನ್ನಡವನ್ನು ಕಲಿಯುವುದಿಲ್ಲ ಎಂದು ಹಠ ಮಾಡಿಕೊಂಡು ಕುಳಿತುಕೊಂಡರೆ ಅವರಿಗೆ ಎಷ್ಟೇ ಒತ್ತಡ ತಂದರೂ ಪ್ರಯೋಜನವಾಗುವುದಿಲ್ಲ. ಕನ್ನಡವನ್ನು ಅವರುಗಳಿಗೆ ಕಂಪಲ್ಸರಿಯಾಗಿ ಕಲಿಸುವುದು ಕಷ್ಟ ಎನ್ನುವ ವಸ್ತು ಸ್ಥಿತಿಯನ್ನು ನಾವೆಲ್ಲರೂ ಮನಗಾಣಬೇಕೆಂದು ಹೇಳುತ್ತೇನೆ. ನಮ್ಮ ನೀತಿಯಲ್ಲಿ ಯಾವುದೇ ರೀತಿಯ ಮೂಲ ಭೂತವಾದ ಬದಲಾವಣೆ ಇಲ್ಲವೆಂದು ಗಡಿ ಭಾಗ ಗಳಲ್ಲಿರುವ ಕನ್ನಡ ಬಾಂಧವರಿಗೆ ಹೇಳಬಯಸುತ್ತೇನೆ. ಅವರು ಯಾವುದೇ ರೀತಿಯಲ್ಲಿ ಭಯ ಅಥವಾ ಸಂದೇಹ ಇಟ್ಟುಕೊಳ್ಳುವ ಅಗತ್ಯ ಇಲ್ಲ

ಶ್ರೀ ಎಸ್. ಬಂಗಾರಪ್ಪ.—ಮಹಾರಾಷ್ಟ್ರ ರಾಜ್ಯದ ಗಡಿ ಪ್ರದೇಶಗಳಲ್ಲಿರುವ ಕನ್ನಡ ಶಾಲೆಗಳಲ್ಲಿ ಕನ್ನಡ ಕಲಿಸುವುದನ್ನು ತೆಗೆದುಹಾಕಿದ್ದಾರೆಂದು ಪತ್ರಿಕೆಗಳಲ್ಲಿ ವರದಿ ಬಂದಿತ್ತು ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅವರು ಏನು ಮಾಡಿದ್ದಾರೆ ಎಂದರೆ, ಮರಾಠಿ ಶಾಲೆಗಳಲ್ಲಿ ಕನ್ನಡ ವನ್ನು ಕಡ್ಡಾಯವಾಗಿ ಕಲಿಯಲೇ ಬೇಕೆಂಬ ನೀತಿಯನ್ನು ತೆಗೆದು ಹಾಕಿದ್ದಾರೆ. ಆ ಮೇಲೆ, ಮಾನ್ಯ ಖರ್ಗೆಯವರು ಜಿಲ್ಲಾ ಮತ್ತು ತಾಲ್ಲೂಕಿನ ಪುನರ್ ರಚನೆ ವಿಚಾರದಲ್ಲಿ ಮಾತನಾಡಿದ್ದಾರೆ. ಅವರ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ನಮ್ಮ ರಾಜ್ಯದಲ್ಲಿ ಐತಿಹಾಸಿಕ ಕಾರಣಗಳು ಇರುವುದರಿಂದ ಕೆಲವು ದೊಡ್ಡ ಜಿಲ್ಲೆಗಳು ಇವೆ. ಕೆಲವು ಸರಿಯಾದ ಗಾತ್ರದ ಜಿಲ್ಲೆಗಳು ಇವೆ. ಕೆಲವು ಚಿಕ್ಕ ಜಿಲ್ಲೆಗಳು ಇವೆ. ಕೊಡಗು ಜಿಲ್ಲೆ ಅತಿ ಚಿಕ್ಕ ಜಿಲ್ಲೆಯಾಗಿದೆ. ಅದಕ್ಕೆ ಐತಿಹಾಸಿಕ ಕಾರಣಗಳು ಇವೆ. ಜಿಲ್ಲೆಗಳ ಗಡಿಗಳನ್ನು ಪುನರ್ ರಚನೆ ಮಾಡಬೇಕೆಂದು ಒಂದು ಕಮಿಟಿಯನ್ನು ಮಾಡಿದ್ದೆವು. ಆ ಕಮಿಟಿಯಿಂದ ಸರ್ಕಾರಕ್ಕೆ ರಿಪೋರ್ಟ್ ಬಂದಿದೆ. ರಿಪೋರ್ಟ್ ಸರ್ಕಾರದ ಪರಿಶೀಲನೆಯಲ್ಲಿ ಇದೆ. ಆದಷ್ಟು ಬೇಗ ಇದರ ಬಗ್ಗೆ ಒಂದು ನಿರ್ಣಯವನ್ನು ಮಾಡುತ್ತೇವೆ. ಜಿಲ್ಲೆಯ ಪುನರ್ ವಿಂಗಡಣೆ ಮಾಡುವ ವಿಷಯದಲ್ಲಿ ಶ್ರೀಮತಿ ಮನೋರಮ ಮಧ್ವರಾಜ್‌ರವರಿಗೆ ಸಂತೋಷವಾಗುವ ಹಾಗೆ ಒಂದು ವಿಷಯ ಇದೆ. ಅಲ್ಲವೆ ? ಆ ರಿಪೋರ್ಟ್‌ನಲ್ಲಿ ಅವರಿಗೆ ಅನುಕೂಲವಾಗತಕ್ಕಂಥ ಒಂದು ಮಾತು ಇದೆ ಎಂಬುದು ನನಗೆ ಗೊತ್ತಿದೆ. ಈ ರಿಪೋರ್ಟ್‌ನ್ನು ನಾವು ಇನ್ನೂ ಸದನದ ಮುಂದೆ ತಂದಿಲ್ಲ. ಏಕೆಂದರೆ ಸರ್ಕಾರ ಪರಿಶೀಲನೆ ಮಾಡಿದ ನಂತರ ರಿಪೋರ್ಟ್‌ನ್ನು ಸದನದ ಮುಂದೆ ತರಬೇಕೆಂದು ಇದ್ದೇವೆ. ಇದರಿಂದ ಸಂತೋಷದ ವಿಷಯ ಏನೆಂದರೆ, ಈ ರಿಪೋರ್ಟ್‌ನಿಂದ ಯಾವ ಕಾಂಟ್ರವರ್ಸಿಯೂ ಆಗುವ ಹಾಗೆ ಕಾಣ ಬರುವುದಿಲ್ಲ. ಜಿಲ್ಲಾ ಪುನರ್ ವಿಂಗಡಣೆ ಮಾಡುವಾಗ ಎಷ್ಟೋ ಸಾರಿ ಗಲಾಟೆಗಳಾಗಿವೆ, ಜಗಳಗಳಾಗಿವೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ಕೆಲವು ತಾಲ್ಲೂಕುಗಳು ಬಹಳ ದೊಡ್ಡವು ಇವೆ, ಕುಂದಾಪುರ ತಾಲ್ಲೂಕಿನಲ್ಲಿ ಅವರ ಪಾಪ್ಯುಲೇಷನ್ ಎಷ್ಟು ? ಉಡುಪಿ ತಾಲ್ಲೂಕಿನಲ್ಲಿ ಸುಮಾರು ೩ ಲಕ್ಷದಿಂದ ೭ ಲಕ್ಷದವರೆಗೆ ಪಾಪ್ಯುಲೇಷನ್ ಇರಬಹುದು,

೧೧-೦೦ ಎ.ಎಂ.

ಸುಮಾರು ೬ ಲಕ್ಷ, ೭ ಲಕ್ಷಗಳಷ್ಟು ದೊಡ್ಡ ಜನಸಂಖ್ಯೆ ಇರತಕ್ಕಂಥ, ವಿಸ್ತಾರವಾಗಿರತಕ್ಕಂಥ ಒಂದು ಪ್ರದೇಶದಲ್ಲಿ ಆಡಳಿತದ ಒಂದು ಘಟಕವನ್ನು ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗುತ್ತದೆ. ನಮ್ಮಲ್ಲಿ ಒಂದು ಪದ್ಧತಿ ನಡೆದುಕೊಂಡು ಬಂದಿದೆ, ಯಾವುದೇ ತಾಲ್ಲೂಕು ಸಣ್ಣದೇ ಇರಲಿ, ಅಥವಾ ದೊಡ್ಡದೇ ಇರಲಿ, ಸರಕಾರದ ಘಟಕ ಅಂದರೆ, ಅಷ್ಟೇ ಸಿಬ್ಬಂದಿ ಇರುತ್ತದೆ. ೭೦ ಸಾವಿರ ಜನಸಂಖ್ಯೆ ಇರತಕ್ಕಂಥಾದ್ದಕ್ಕೂ ಒಬ್ಬ ತಹಶೀಲ್ದಾರ್, ೭ ಲಕ್ಷ ಜನಸಂಖ್ಯೆ ಇರತಕ್ಕಂಥಾ ತಾಲ್ಲೂಕಿಗೂ ಒಬ್ಬ ತಹಶೀಲ್ದಾರ್. ಆದುದರಿಂದ ಸ್ವಾಭಾವಿಕವಾಗಿ ಆ ಸಿಬ್ಬಂದಿಯಿಂದ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಇದರಲ್ಲಿ ವೈಜ್ಞಾನಿಕವಾಗಿ, ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಆ ದೃಷ್ಟಿಯಿಂದ ಹೋಗುತ್ತೇವೆ. ಅದರ ಜೊತೆಗೆ ವ್ಯವಹಾರಿಕವಾಗಿಯೂ ನಾವು ನೋಡಬೇಕಾಗುತ್ತದೆ. ವ್ಯವಹಾರಿಕವಾಗಿ ಅನೇಕ ಅಂಶಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅದನ್ನು ಮಾಡಿಕೊಂಡು ಆದಷ್ಟು ಜಾಗ್ರತೆ, ಬೇಗ, ಇದರ ಬಗ್ಗೆ ಒಂದು ತೀರ್ಮಾನವನ್ನು ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ಮತ್ತೊಂದು ವಿಚಾರ, ಸಾಮಾನ್ಯವಾಗಿ ಬರತಕ್ಕಂಥಾ ವಿಚಾರ ಅನೇಕರು ಹೇಳಿದರು. ಅದು ಏನೆಂದರೆ, ಮುಖ್ಯಮಂತ್ರಿಯವರು ಕೇರಳಕ್ಕೆ ಹೋದರು, ಹರಿದ್ವಾರಕ್ಕೆ ಹೋದರು, ಎಂದು ಹೇಳಿದ್ದಾರೆ. ತಾವುಗಳು ಎಲ್ಲರೂ ನನ್ನನ್ನು ಇಲ್ಲಿಯೇ ಇರಿ ಎಂದು ಹೇಳಿದರೆ, ಇಲ್ಲಿಯೇ ಇರುತ್ತೇನೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಲ್ಲಿ ಹೈಪವರ್ ಸಮಿತಿ ಒಂದು ಇದೆಯಲ್ಲ, ಅದು ತಮ್ಮ ಅಧ್ಯಕ್ಷತೆಯಲ್ಲಿ......

ಶ್ರೀ ರಾಮಕೃಷ್ಣ ಹೆಗಡೆ.—ಹೌದು, ಆ ಒಂದು ನೆಪದಿಂದ ಈ ಟೀಕೆಯನ್ನು ಮಾಡಿದ್ದಾರೆ. ಈಗ ನಾವು ಅನೇಕ ಸಂದರ್ಭಗಳಲ್ಲಿ ಡೆಲ್ಲಿಗೆ ಹೋಗಬೇಕಾಗುತ್ತದೆ. ನಾನು ಮೊದಲಿನಿಂದಲೂ ವಾದ ಮಾಡುತ್ತಾ ಬಂದಿದ್ದೇನೆ. ಡೆಲ್ಲಿಗೆ ಹೋಗುವುದನ್ನು ಆದಷ್ಟು ಕಡಿಮೆ ಮಾಡಬೇಕು, ಅಂದರೆ, ಡೆಲ್ಲಿಯಲ್ಲಿರತಕ್ಕಂಥ ಅಧಿಕಾರವು ಇಲ್ಲಿಗೆ ಬಂದರೆ, ನಾವುಗಳು ಡೆಲ್ಲಿಗೆ ಹೋಗುವ ಅಗತ್ಯ ಇರುವುದಿಲ್ಲ. ಒಂದು ಮಾತನ್ನು ತಮ್ಮ ಗಮನಕ್ಕೆ ತರಲು ಹೇಳುತ್ತೇನೆ. ಪವರ್ ಮತ್ತು ಇಂಡಸ್ಟ್ರೀ ಮಂತ್ರಿಯವರು ಇಲ್ಲಿಯೇ ಇದ್ದಾರೆ. ನಮ್ಮ ೫-೬ ಪವರ್‌ಪ್ರಾಜೆಕ್ಟ್‌ಗಳ ಕ್ಲಿಯರೆನ್ಸ್ ಸಲುವಾಗಿ ನಾವುಗಳು ಎಷ್ಟು ಸಲ ಡೆಲ್ಲಿಗೆ ಹೋಗಬೇಕಾಯಿತು, ಎಷ್ಟು ಸಲ ಮಾನ್ಯ ಸಾಠೆಯವರ ಹತ್ತಿರ ಹೋಗ ಬೇಕಾಯಿತು, ಚರ್ಚೆ ಮಾಡಬೇಕಾಯಿತು, ಆಗ ಸಾಠೆಯವರು ಬಹಳ ಸಹಾನುಭೂತಿಯಿಂದ ಆಯಿತು ಮಾಡಿಕೊಡುತ್ತೇನೆ ಎಂದು ಹೇಳಿದರು. ಅಷ್ಟಕ್ಕೇ ಆಗಲಿಲ್ಲ, ಅಲ್ಲಿಂದ ಕಾಮರ್ಸ್ ಮಿನಿಸ್ಟ್ರೀಗೆ ಹೋಗಬೇಕು, ಅನಂತರ ಪ್ಲಾನಿಂಗ್ ಕಮಿಶನ್‌ಗೆ ಹೋಗಬೇಕು, ಅಲ್ಲಿಂದ ಫೈನಾನ್ಸ್ ಕಮಿಶನ್‌ಗೆ ಹೋಗಬೇಕು.

ಶ್ರೀ ಜೆ ಹೆಚ್ ಪಟೇಲ್.—ನಾನು ಇಂಡಸ್ಟ್ರೀ ಮಿನಿಸ್ಟರ್ ಹತ್ತಿರ ಹೋದಾಗ ಮೊದಲು ಕೇಳಿದೆ, ತಾವುಗಳು ಎಷ್ಟು ದಿವಸ ಇರುತ್ತೀರಿ ಎಂದು. ಏಕೆಂದರೆ ನಾನು ಮೊದಲನೇ ಸಲ ಹೋದಾಗ ಮಾನ್ಯ ವೀರೇಂದ್ರಪಾಟೀಲ್‌ರವರು ಇದ್ದರು, ಅವರು ನಮ್ಮ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುವಾಗ ಅವರು ಹೋಗಿ, ಮಾನ್ಯ ತಿವಾರಿಯವರು ಬಂದರು. ಅವರು ನಮ್ಮ ರಾಜ್ಯದ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವಷ್ಟರಲ್ಲಿ ಪೋರ್ಟ್‌ಫೋಲಿಯೋ ಚೇಂಜ್ ಆಗಿ ಮೆಂಗಲರಾವ್‌ರವರು ಬಂದರು. ಆಗ ನಾನು ಅವರನ್ನು ಮೊದಲು ಕೇಳಿದೆ ತಾವುಗಳು ಈ ಇಲಾಖೆಯಲ್ಲಿ ಎಷ್ಟು ದಿವಸ ಇರುತ್ತೀರಿ ಅಂದರೆ ನಾನು ಬಂದ ವಿಷಯ ತಿಳಿಸುತ್ತೇನೆ ಎಂದು ಹೇಳಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ, ನೀವುಗಳು ಹೋದಹೋದಲ್ಲೆಲ್ಲ ಮಂತ್ರಿಗಳು ಹೋಗಿಬಿಟ್ಟಿದ್ದಾರೆ. ನೀವು ಯಾವ ಯಾವ ಮಂತ್ರಿಗಳ ಹತ್ತಿರ ಹೋಗಿದ್ದೀರಿ ಅವರೆಲ್ಲರೂ ಹೋಗಿದ್ದಾರೆ. ಆದುದರಿಂದ ದಯಮಾಡಿ ತಾವುಗಳು ಯಾರೂ ನಮ್ಮ ಕೇಂದ್ರ ಮಂತ್ರಿಯವರಮನೆಗೆ ಕಾಲಿಡಬೇಡಿ ..

ಶ್ರೀ ಜಿ. ನಾರಾಯಣ ಕುಮಾರ್.—ಮಾನ್ಯ ಬಂಗಾರಪ್ಪನವರು ಕಾಲಿಟ್ಟ ಕಡೆಗಳಲ್ಲಿಯೂ ಹಾಗೆಯೇ ಆಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ನಮ್ಮ ಪಾರ್ಟಿಯ ಕಾರ್ಯಕಾರಿ ಸಮಿತಿಗೆ ಹೋಗುವುದಾದರೆ, ಸರ್ಕಾರದ ಖರ್ಚಿನಲ್ಲಿ ಹೋಗುವುದಿಲ್ಲ. ಇವೊತ್ತಿನವರೆಗೂ ನಮ್ಮ ಯಾವುದೇ ಮಂತ್ರಿಗಳಾಗಲೀ, ನಾನಾಗಲೀ, ನಮ್ಮ ಪಕ್ಷದ ಕೆಲಸಕ್ಕೆ ಹೋಗಿದ್ದರೆ, ಡೆಲ್ಲಿಗೆ, ಹರಿದ್ವಾರಕ್ಕೆ, ತಿರುಂಬಟ್ಟೂರಿಗೆ ಹೋಗಿದ್ದರೆ ಅದು ಸರಕಾರಿ ಖರ್ಚಿನಲ್ಲಿ ಅಲ್ಲ, ಹಾಗೆ ಹೋಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂಪಿ ಇಲೆಕ್ಷನ್‌ಗೆ, ಹರಿದ್ವಾರಕ್ಕೆ, ಮಿತ್ತಿತರ ಕಡೆಗಳಲ್ಲಿ ತಿರುಗುತ್ತಿದ್ದೀರಲ್ಲ ಅಲ್ಲಿ ಏನಾಯಿತು ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೋದಲ್ಲೆಲ್ಲ ಜಯವಾಗಿದೆ, ಪರಿಣಾಮವಾಗಿದೆ. ಕೇರಳದಲ್ಲಿ ಕಾಶ್ಮೀರದಲ್ಲಿ, ಪರಿಣಾಮ ಆಗಿದೆ...ಕೇರಳದಲ್ಲಿ ನಮ್ಮದು ನಾಲ್ಕು ಇತ್ತು ಈಗ ಜಾಸ್ತಿಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಕೇರಳ ಪಶ್ಚಿಮ ಬಂಗಾಳಗಳಲ್ಲಿ ಕಮ್ಯುನಿಸ್ಟ ಗವರ್ನಮೆಂಟ್ ಬರುವುದಕ್ಕೂ ನೀವು ಅತ್ತ ಕಡೆಯೆಲ್ಲ ಪ್ರಚಾರಕ್ಕೆ ಹೋಗಿದ್ದಕ್ಕೂ ಕಾಕತಾಳೀಯ ಹೋಲಿಕೆ ಆಗಿದೆ. ಒಂದು ಕಥೆ ಇದೆಯಲ್ಲ. ಕಾಗೆಯೊಂದು ತಾಳೆ ಮರದ ರಂಬೆ ಮೇಲೆ ಕೂತಿದ್ದಾಗ ಆ ರಂಬೆ ಮುರಿದು ಬಿತ್ತು ಎಂಬಂತೆ.

ಶ್ರೀ ರಾಮಕೃಷ್ಣ ಹೆಗಡೆ.—ಕಾಕತಾಳೀಯ ಹೋಲಿಕೆ ನನಗೆ ಅನ್ವಯಿಸುವುದಾದರೆ ರಾಜೀವ್ ಗಾಂಧಿಯವರಿಗೂ ಅನ್ವಯಿಸುತ್ತದೆ. ಒಂದು ಮಾತನ್ನು ಹೇಳುತ್ತೇನೆ. ಅದನ್ನು ಲಘುವಾಗಿ ಹೇಳುತ್ತಿಲ್ಲ, ಮಾನ್ಯ ಜ್ಯೋತಿಬಸು ಅವರೂ ಇದೇ ಅಭಿಪ್ರಾಯವನ್ನು ಹೇಳಿದ್ದಾರೆ. ಈ ಚುನಾವಣೆಯಿಂದ ಒಂದು ಹೊಸ ಅಧ್ಯಾಯ ನಮ್ಮ ದೇಶದ ರಾಜಕೀಯದಲ್ಲಿ ಪ್ರಾರಂಭವಾದ ಹಾಗೆ ಕಾಣುತ್ತದೆ. Polarisation of political forces. ಮಾನ್ಯ ಮೊಯ್ಲಿಯವರಿಗೆ ಕೇರಳದ ಹತ್ತಿರ ಸಂಬಂಧ ಇದೆ. ಅಲ್ಲಿ ಯಾವ್ಯಾವ ಮತೀಯ ಫೋರ್ಸ್‌ಗಳು, ಜಾತೀಯತೆಗಳು ಹೇಗೆ ಕೆಲಸ ಮಾಡುತ್ತಿದ್ದುವು ಎಂದು ಅವರಿಗೆ ಗೊತ್ತು ಇಲ್ಲಿಯವರೆಗೆ ಏನಾಗಿತ್ತು ? ಹೋದ ಸಲ ಕಮ್ಯುನಿಸ್ಟ ಫ್ರಂಟ್ ಜೊತೆಗೆ ಕೆಲವು ಜಾತೀಯ ಪಕ್ಷಗಳು ಇದ್ದುವು. ಆದರೆ ಈ ಸಲ ಅವು ಬೇರೆ ಪಕ್ಷಗಳೊಡನೆ ಸೇರಿಕೊಂಡಿವೆ. ಮುಸ್ಲಿಮ್ ಲೀಗ್, ಕೇರಳ ಕಾಂಗ್ರೆಸ್ ಇವೆಲ್ಲ ಒಂದು ಕಡೆಗಿವೆ. ಯುಡಿಎಫ್ ಮತ್ತು ಎಲ್‌ಡಿಎಫ್ ಎರಡೂ ಒಂದು ಕಡೆಗೆ. ನಮ್ಮ ಹಿಂದೂ ಮುನ್ನಣೆಯೆಂಬ ಹೊಸ ಸಂಘಟನೆ ಕೆಲವು. ಕಡೆ ಅಭ್ಯರ್ಥಿಗಳನ್ನು ನಿಲ್ಲಿಸಿದ್ದರು. ಬಿಜೆಪಿ ಅದರ ಜೊತೆ ಸೇರಿದ್ದರು. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಲೆಫ್ಟ್ ಫ್ರಂಟ್ ಮಧ್ಯೆ ಯಾವುವೂ ಇರಲಿಲ್ಲ. ಶಿಶಿರ್ ಬೋಸ್‌ರಂಥವರು ಡಿಪಾಸಿಟ್ ಕಳೆದುಕೊಳ್ಳಬೇಕಾದರೆ ಜನತೆ ಏನು ತೋರಿಸಿದ್ದಾರೆ, ಅದು ಎರಡು ಪಕ್ಷಗಳು ಬೇಕು ಎಂಬುದು, ಜನತೆ ಮುಂದೆ ಒಂದೇ ಆಲ್ಟರ್‌ನೇಟಿವ್ ಇರಬೇಕು. ಜನತೆ ಇದನ್ನು ತಿಳಿದುಕೊಂಡಿದ್ದಾರೆ. ಆದರೆ ಮುಖಂಡರೂ ತಿಳಿದುಕೊಂಡಿಲ್ಲ. ಒರಿಸ್ಸಾದಲ್ಲಿ ಕಾಂಗ್ರೆಸ್ ಮತ್ತು ಜನತಾ, ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ, ರಾಜಾಸ್ಥಾನದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ, ಕರ್ನಾಟಕದಲ್ಲಿ ಜನತಾ ಮತ್ತು ಆಂಧ್ರದಲ್ಲಿ ತೆಲುಗು ದೇಶಂ ಮತ್ತು ಕಾಂಗ್ರೆಸ್, ಕಾಂಗ್ರೆಸ್—ಹೀಗೆ ಎಲ್ಲಾ ಕಡೆ ಎರಡೆರಡೇ ಪಕ್ಷಗಳ ಸ್ಥಿತಿ ರಾಷ್ಟ್ರದಲ್ಲಿ ಬರುತ್ತಿದೆ. ಇದು ಒಳ್ಳೆಯ ಲಕ್ಷಣ. ಮುಂದಿನ ಡೆಮಾಕ್ರಸಿ ದೃಷ್ಟಿಯಿಂದ ಇದು ಆಗಬೇಕು. ನಾವೇನಾದರೂ ತಪ್ಪು ಮಾಡಿದರೆ ಇನ್ನೊಂದು ಪ್ರತಿಪಕ್ಷ ಇದ್ದರೆ ಜನ ಅದಕ್ಕೆ ವೋಟು ಕೊಟ್ಟು ಅಧಿಕಾರಕ್ಕೆ ಕೂರಿಸಬೇಕು. ನಾಳೆ ಆ ಪಕ್ಷ ತಪ್ಪು ಮಾಡಿದರೆ ನಮ್ಮ ಪಕ್ಷವನ್ನು ಮತ್ತೆ ತರಬೇಕು. ಆದರೆ ಇದುವರೆಗೂ ಏನಾಗಿತ್ತೆಂದರೆ ನೂರಾರು ಪಕ್ಷಗಳು ಚುನಾವಣೆಗಳಿಗೆ ನಿಂತು ಜನತೆ ಯಾರಿಗೆ ವೋಟು ಕೊಡಬೇಕೆಂಬ ಗೊಂದಲದಲ್ಲಿ ಬಿದ್ದು ಕೊನೆಗೆ ಪ್ರಬಲವಾದ ಪಕ್ಷ ಅಧಿಕಾರಕ್ಕೆ ಬರುತ್ತಿತ್ತು. ಆದರೆ ಅದಕ್ಕೆ ವಿರುದ್ಧವಾಗಿ ನಿಂತಿದ್ದ ಪಕ್ಷಗಳೆಲ್ಲದರ ಮತಗಳಿಕೆ ಪ್ರಮಾಣ ಆಡಳಿತ ಪಕ್ಷಕ್ಕಿಂತ ಹೆಚ್ಚುರುತ್ತಿತ್ತು. ಇದರಿಂದ ಜನತೆಯ ತೀರ್ಪಿಗೆ ಬೆಲೆ ಇರುತ್ತಿರಲಿಲ್ಲ. ಆದರೆ ಈಗ ಅದಕ್ಕೆ ವಿರುದ್ಧವಾದ ಪರಿಸ್ಥಿತಿ ಬಂದಿದೆ. ಅದನ್ನು ಸ್ವಾಗತ ಮಾಡುತ್ತೇನೆ.

ಮಾನ್ಯ ಖರ್ಗೆಯವರು ಹೈಪವರ್ ಕಮಿಟಿ ಬಗ್ಗೆ ಹೇಳಿ ಸಭೆಗಳು ನಡೆದಿಲ್ಲ ಎಂದು ಹೇಳಿದ್ದಾರೆ. ಅದು ಸೇರಿತ್ತು. ಇನ್ನೂ ಹೆಚ್ಚು ಸಲ ಮೀಟಿಂಗ್ ಮಾಡಬೇಕೆಂಬುದಿದ್ದರೆ ಮಾಡೋಣ, ೧೯೮೩ನೇ ಇಸವಿಯಲ್ಲಿ ಹೊಸದಾಗಿ ಇದರ ರಚನೆ ಮಾಡಿದ್ದೇವೆ ೮೪ರಲ್ಲಿ ೨ ಸಲ ಮೀಟಿಂಗ್ ಆಗಿದೆ. ೮೫ರಲ್ಲಿ ಒಂದು ಸಲ, ೮೬ರಲ್ಲಿ ಒಂದು ಸಲ ಮೀಟ್ ಮಾಡಿದೆ. ಒಂದು ವರ್ಷಕ್ಕೆ ಒಂದು ಮೀಟಿಂಗಾಗಿದೆ. ಅದು ಸಾಲದೆಂಬುದು ಅವರ ಅಭಿಪ್ರಾಯ, ನಾನೂ ಒಪ್ಪುತ್ತೇನೆ. ಬೇಕಾದರೆ ೬ ತಿಂಗಳಿಗೊಂದು ಸಲ ಮಾಡೋಣ. This is high-power Committee on the Scheduled Castes and Scheduled Tribes. ನಾನು ಏನು ಮಾಡುತ್ತೇವೆ ಎಂದರೆ ಹಿಂದಿನ ಹಾಗಲ್ಲ. ಈಗ ಬೇರೆ ಬೇರೆ ದಲಿತ ಸಂಸ್ಥೆಗಳಿವೆ. ನಾನೂ ದಲಿತ ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆದು ಅವರಲ್ಲಿ ಏನು ತೊಂದರೆ ಇದೆ ಎಂಬುದನ್ನು ಮೊದಲೇ ತರಿಸಿಕೊಂಡು ಆ ಸಮಸ್ಯೆಗಳನ್ನು ಅಥವಾ ತೊಂದರೆಗಳನ್ನು ಸರಕಾರದ ವತಿಯಿಂದ ಪರಿಶೀಲನೆ ಮಾಡಿಸಿ ನಂತರ ದಲಿತ ವರ್ಗದ ಬೇರೆ ಬೇರೆ ಸಂಸ್ಥೆಗಳ ಪ್ರತಿನಿಧಿಗಳನ್ನು ಕರೆಯಿಸುತ್ತೇವೆ. ಮೂರು ನಾಲ್ಕು ತಿಂಗಳಿಗೆ ಒಂದು ಸಲ ಅವರ ಸಮಸ್ಯೆಗಳ ಬಗ್ಗೆ ಚರ್ಚೆಮಾಡಿ ಎಲ್ಲೆಲ್ಲಿ ಪರಿಹಾರ ಕೊಡಲಿಕ್ಕೆ ಸಾಧ್ಯವೋ ಅಲ್ಲಿಗೆ ನಾವು ಪರಿಹಾರವನ್ನು ಕೊಡುತ್ತೇವೆ. ಉದಾಹರಣೆಗೆ ಹೇಳುವುದಾದರೆ ಕೋಲಾರ, ಗೌರೀಬಿದನೂರಿನಲ್ಲಿ, ಜಮೀನು ಹಾಕಿಕೊಂಡು ಕುಳಿತುಕೊಂಡಿದ್ದರು. ಯಾವ ಸರ್ಕಾರ ಬಂದರೂ ಕೊಟ್ಟಿರಲಿಲ್ಲ ನಾವು ಅದನ್ನು ಕೊಟ್ಟಿದ್ದೇವೆ. ಇಂತಹ ಕೆಲಸ ಕಾರ್ಯಗಳನ್ನು ಮಾಡುವ ಮೂಲಕ ದಲಿತರಿಗೆ ಸೂಕ್ತ ಅನುಕೂಲ ಮಾಡಿಕೊಟ್ಟಿದ್ದೇವೆ. ದಲಿತ ಸಂಸ್ಥೆಗಳ ಮುಖಾಂತರವಾಗಿ ಈ ಸಮಸ್ಯೆಗಳು ಬಂದಿರುವುದರಿಂದ ಕುಳಿತುಕೊಂಡು ಚರ್ಚೆಮಾಡಿದರೆ ಅದನ್ನು ಬಗೆಹರಿಸುವುದು ಸುಲಭವಾಗುತ್ತದೆ ಮತ್ತು ಆ ರೀತಿ ಚರ್ಚೆಮಾಡುವುದರಿಂದ ಯಾವುದು ಅತಿ ಕಷ್ಟವಾದಂತಹ ಸಮಸ್ಯೆ ಇದೆಯೋ ಅವನ್ನು ಈ ಹೈಪವರ್ ಕಮಿಟಿಯಲ್ಲಿ ತಂದು ಚರ್ಚೆ ಮಾಡುತ್ತೇವೆ. ಅಕಸ್ಮಾತ್ತಾಗಿ ನಾನು ಅಲ್ಲಿಗೆ ಹೋಗಿ ಭೇಟಿ ಮಾಡುವುದಕ್ಕೆ ಆಗದಿದ್ದರೆ ಮಾನ್ಯ ಗೃಹ ಮಂತ್ರಿಗಳಿಗೆ ಹೇಳುತ್ತೇನೆ ನೀವು ಕುಳಿತುಕೊಂಡು ಚರ್ಚೆ ಮಾಡಿ ಎಂದು. ಬೇರೆ ಬೇರೆ ದಲಿತ ಸಂಸ್ಥೆಗಳ ಜೊತೆಗೆ ನಮ್ಮ ಸರಕಾರದ ಸಂಬಂಧ ಮತ್ತು ಸಂಪರ್ಕ ಬಹಳ ಚೆನ್ನಾಗಿ ಇದೆ, ಶಾಶ್ವತವಾಗಿದೆಯೆಂದು ನಾನು ಹೇಳಲಿಕ್ಕೆ ಬಯಸುತ್ತೇನೆ, ಇನ್ನು ಕನ್‌ಸಲ್ಟೇಟೀವ್ ಕಮಿಟಿಯ ವಿಚಾರದಲ್ಲಿ ಅವರು ಹೇಳಿದರು ನಿಜ ಅದನ್ನು ನಾನು ಒಪ್ಪುತ್ತೇನೆ. ನನ್ನ ಡಿಪಾರ್ಟ್‌ಮೆಂಟಿಗೆ ಸೇರಿದಂತಹ ಕನ್‌ಸಲ್ಟೇಟೀವ್ ಕಮಿಟಿ ಒಂದು ಸಲವೂ ಸೇರಿಲ್ಲ ಆದರೆ ಬೇರೆ ಇಲಾಖೆಗಳಿಗೆ ಸೇರಿದಂತಹ ಕನ್‌ಸಲ್ಟೇಟೀವ್ ಮೀಟಿಂಗ್‌ಗಳು ಆಗಿವೆ ಇದರಿಂದ ಎಷ್ಟು ಪ್ರಯೋಜನವಾಗುತ್ತದೆ ಎಂಬುದನ್ನು ಕೂಡ ಯೋಚನೆ ಮಾಡಬೇಕು. ಕೇಂದ್ರದಲ್ಲಿ ಕೂಡ ಕನ್‌ಸಲ್ಟೇಟೀವ್ ಕಮಿಟಿ ಮೀಟಿಂಗ್ ಮಾಡುತ್ತಾರೆ ಸೆಷನ್ ಕರೆದಾಗಲೇ ಅವರು ಹೆಚ್ಚಾಗಿ ಮಾಡುತ್ತಾರೆ ಅಲ್ಲಿ ಪ್ರಶ್ನೆ ಉತ್ತರ, ಪ್ರಶ್ನೆ ಉತ್ತರ ಆಗುತ್ತದೆಯೋ ಹೊರತು ಅದರಿಂದ ಯಾವುದೇ ವಿಶೇಷವಾದಂತಹ ಪ್ರಯೋಜನವಾಗುವುದಿಲ್ಲ. ಪಾರ್ಲಿಮೆಂಟಿನಲ್ಲಿ ಕಮಿಟಿ ಯಾವ ರೀತಿ ಇರುತ್ತದೆಯೋ ಅದೇ ಸಿಸ್ಟಮ್ ಅನ್ನು ಇಲ್ಲಿ ಮಾಡಿದರೆ ಹೇಗೆ ಎಂದು. ನಾವು ಯೋಚನೆ ಮಾಡುತ್ತಿದ್ದೇವೆ ಲೆಜಿಸ್ಲೇಚರ್ ಕಮಿಟಿಗಳು ೫-೬ ಇವೆ ಪಿ. ಎ. ಸಿ. ಎಸ್ಟಿಮೇಟ್ ಕಮಿಟಿ ಇದೆ, ಪಿ. ಯು. ಸಿ ಕಮಿಟಿ ಇದೆ ಸೋಷಿಯಲ್ ವೆಲ್‌ಫೇರ್ ಕಮಿಟಿ ಇದೆ ಬ್ಯಾಕ್‌ವರ್ಡ್ ಕ್ಲಾಸ್ ಕಮಿಟಿ ಇದೆ ಇದರ ಹೊರತಾಗಿ ಬೇರೆ ಬೇರೆ ಮುಖ್ಯವಾದಂತಹ ಇಲಾಖೆಗಳ ಸಂಬಂಧದಲ್ಲಿ ಸಭೆ ಸಬ್ಜೆಕ್ಟ್‌ಗಳು ಇವೆ, ಎಲ್ಲಾ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂತೆ ಅಲ್ಲ. ಮುಖ್ಯವಾದಂತಹ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂತಹ ಕಮಿಟಿ ಮಾಡಿದರೆ, ಅದು ಸ್ಟ್ಯಾಂಡಿಂಗ್ ಕಮಿಟಿ ಆಗಬೇಕು ಒಂದು ತಿಂಗಳಿಗೆ ಇಲ್ಲವೇ ಒಂದೂವರೆ ತಿಂಗಳಿಗೊಮ್ಮೆ ಸೇರಬೇಕು. ಎಲ್ಲಾ ಸದಸ್ಯರೂ ಅದರಲ್ಲಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ ಎಲ್ಲಿ ಗಂಭೀರತೆ ಬರುತ್ತದೆ ಅದಕ್ಕೆ ಮಹತ್ವ ಕೊಡಬೇಕು. ಆದ್ಯತೆ ಕೊಟ್ಟು ಅದನ್ನು ಗಮನಿಸಲಿಕ್ಕೆ ಅನುಕೂಲವಾಗುತ್ತದೆಂದು ಯೋಚನೆ ಮಾಡುತ್ತಿದ್ದೇವೆ, ಇದನ್ನು ಮಾಡುವುದಕ್ಕೆ ಈ ಸದನಕ್ಕೆ ಒಪ್ಪಿಗೆ ಇದ್ದರೆ ಬರುವ ವರ್ಷದಿಂದ ಜಾರಿಯಲ್ಲಿ ತರಬಹುದೆಂದು ಕಾಣಿಸುತ್ತದೆ ಅದರ ಬಗ್ಗೆ ಚರ್ಚಿಸಿ ವಿವರಣೆಯನ್ನು ತಯಾರು ಮಾಡಿಸಿ ಪಾರ್ಲಿಮೆಂಟರಿ ಮಂತ್ರಿಗಳ ಮುಖಾಂತರವಾಗಿ ತಮಗೆಲ್ಲರಿಗೂ ತಿಳಿಸುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ. ನನಗೆ ಸ್ವಲ್ಪ ಆಶ್ಚರ್ಯವಾಯಿತು ಮಾನ್ಯ ಖರ್ಗೆಯವರು ನಿಮ್ಮದು ಬರೀ ಘೋಷಣೆಯೇ ಹೊರತು ಬಡವರ ಬಗ್ಗೆ ಏನೂ ಮಾಡಿಲ್ಲ. ಹರಿಜನರ ಬಗ್ಗೆ ಏನೂ ಮಾಡಿಲ್ಲವೆಂದು ಹೇಳಿದರು, ಅವರು ಅದನ್ನು ಹೇಳುವಾಗ

ನಾನು ಸೂಕ್ಷ್ಮವಾಗಿ ಅವರ ಮುಖವನ್ನು ನೋಡುತ್ತಿದ್ದೆ, ಅಂತರಾಳವಾಗಿ ಈ ಮಾತು ಬಂದಿಲ್ಲ, ಹೃದಯದ ಭಾವನೆ ಮುಖದ ಮೇಲೆ ಇರಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಏನೇನು ಮಾತನಾಡಬೇಕೋ ಆಗ ಆಡುತ್ತಾರೆ ಆದರೆ ನಾವು ಅವರ ಮಾತಿಗೆ ಮರುಳಾಗಿ ಅಲ್ಲಿಗೇ ಬಿಡತಕ್ಕಂತಹ ವರು ಅಲ್ಲ, ತಮಗೂ ತಾಪತ್ರಯ ಇದೆ ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಹೇಳಿದ್ದೇನೆಂದರೆ ೧೯೫೪ನೇ ಇಸವಿಯಲ್ಲಿ. ಒಬ್ಬ ಅಮೇರಿಕನ್ ಮಹಿಳೆಯೊಬ್ಬರು ಮಂಡ್ಯ ಜಿಲ್ಲೆಯ ಹಳ್ಳಿಗಳಲ್ಲಿ ಸರ್ವೇ ಮಾಡಿ ಒಂದು ವರದಿಯನ್ನು ಕೊಟ್ಟಿದ್ದರು. ೧೯೫೪ರಲ್ಲಿ ಸ್ಟಡಿ ಮಾಡಿ ಬಂದ ಮೇಲೆ ಪುನಃ ೧೯೭೦ರಲ್ಲಿ ಮತ್ತೆ ಅದೇ ಹಳ್ಳಿಗಳಿಗೇ ವಿಸಿಟ್ ಮಾಡಿದರು.

ನಾನು ಏನು ಹೇಳಿದ್ದೆ ಎಂದರೆ ಅನೇಕ ತಾಲ್ಲೂಕುಗಳಲ್ಲಿ, ಜಿಲ್ಲೆಗಳಲ್ಲಿ ಏನಾಗಿದೆ ಎಂದರೆ ತಮಗೆ ಯಾರು ಬೇಕೋ ಅಂಥ ಅಧಿಕಾರಿಗಳಿಗೆ ಹಾಕಿಕೊಳ್ಳತಕ್ಕಂಥ ಪ್ರವೃತ್ತಿ ಕೆಲವು ಶಾಸಕರಲ್ಲಿ, ಮಂತ್ರಿಗಳಲ್ಲಿ ಇದೆ. ಅದನ್ನು ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಕೆಲವು ಒತ್ತಡಗಳಿಗೋ, ಸರಕಮ್‌ಸ್ಟಾನ್ಸಸ್‌ಗೋ ತಾವು ಒಪ್ಪಿಕೊಳ್ಳುತ್ತೀರಿ, ಆದಕ್ಕೆ ಅವರು ಏನು ಮಾಡುತ್ತಾರೆ ಎಂದರೆ ತಮಗೆ ಅನುಕೂಲವಾಗುವಂಥ ಅಧಿಕಾರಿಗಳನ್ನು ಹಾಕಿಕೊಳ್ಳುತ್ತಾರೆ. ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಇರುತ್ತದೆ, ಡೆಟ್ ರಿಲೀಫ್ ಆ್ಯಕ್ಟ್ ಇರುತ್ತದೆ, ಹೌಸ್ ಸೈಟ್ಸ್ ಇರುತ್ತದೆ, ಇವೆಲ್ಲಾ ಸಮಸ್ಯೆಗಳಿಂದ ಅವರಿಗೆ ಎಫೆಕ್ಟ್ ಆಗುತ್ತಿರುತ್ತದೆ. ಆದ್ದರಿಂದ ಅವರಿಗೆ ಅನುಕೂಲವಾಗುವಂಥ ಅಧಿಕಾರಿಯನ್ನು ಹಾಕಿಕೊಳ್ಳುತ್ತಾರೆ. ನೀವು ಕೊಟ್ಟಂಥ ಪ್ರೋಗ್ರಾಮ್ ಪಾಲಿಸಿ ಪ್ರಕಾರ ಕೆಲಸ ಮಾಡಿಕೊಂಡು ಹೋಗಬೇಕಾಗುತ್ತದೆ. ಅಂಥವರು ಇಲ್ಲ. ಘೋಷಣೆಗಳು ಮಾತ್ರ ಬರೀ ಪುಸ್ತಕದಲ್ಲಿದೆ, ಅವು ಜಾರಿಯಲ್ಲಿ ಇಲ್ಲ. ಹೌಸ್ ಸೈಟ್ಸ್ ಬಗ್ಗೆ ಎಷ್ಟು ಸೈಟ್ಸನ್ನು ಇದುವರೆಗೂ ಡಿಸ್ಟ್ರಿಬ್ಯೂಟ್ ಮಾಡಿದ್ದೀರಿ ? ಡೆಟ್ ರಿಲೀಫ್ ಬಗ್ಗೆ ಬಂದರೆ......

ಶ್ರೀ ರಾಮಕೃಷ್ಣ ಹೆಗಡೆ.—ಹೌಸ್ ಸೈಟ್ಸ್ ವಿಚಾರದಲ್ಲಿ ನನ್ನ ಬಜೆಟ್ ಭಾಷಣದಲ್ಲಿ ನಾನು ಹೇಳಿದ್ದೇನೆ. ಕಳೆದ ಎರಡು ವರ್ಷಗಳಲ್ಲಿ ಇದು ಒಂದು ಕಾರ್ಯಕ್ರಮ ೨೦ ಅಂಶದ ಕಾರ್ಯಕ್ರಮದಲ್ಲಿ ನಾವು ಐದನೇ ನಂಬರ್‌ನಲ್ಲಿ ಬಂದಿದ್ದೇವೆ. ಹೌಸ್ ಸೈಟ್ಸ್, ಬಾಂಡೆಡ್ ಲೇಬರ್ ಈ ಎರಡು ವಿಚಾರದಲ್ಲಿ ಪರ್‌ಫಾರ್ಮೆನ್ಸ್ ಸರಿಯಾಗಿದ್ದರೆ ನಂಬರ್ ೧ ಬರುತ್ತಿತ್ತು. ಆಲ್ ಇಂಡಿಯಾದಲ್ಲಿ ಈಗ ೫ನೇ ನಂಬರ್ ಬಂದಿದೆ. ಹೌಸ್ ಸೈಟ್ಸ್‌ನಲ್ಲಿ ಎಷ್ಟು ಜನರಿಗೆ ಕೊಡಬೇಕಾಗಿತ್ತೋ ಅಷ್ಟು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ವಸತಿಗಾಗಿ ಹುಡುಕಿದಂಥ ಜಾಗ ಅದು ಸರ್ಕಾರದ ಜಾಗ ಅಲ್ಲ. ಅಕ್ವಿಜಿಷನ್ ಮಾಡಬೇಕು ಎಂದು ಹೋದರೆ ಆ ನೋಟೀಸ್‌ಗೆ ಸಂಬಂಧಪಟ್ಟವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದರೂ ಕೂಡಾ ಬಜೆಟ್ ಭಾಷಣದಲ್ಲಿ ನಾನು ಹೇಳಿದ್ದೇನೆ. ಬರುವ ವರ್ಷದ ಕೊನೆಯ ಒಳಗಾಗಿ ಯಾವುದೇ ಒಂದು ಕುಟುಂಬಕ್ಕೆ ನಿವೇಶನ ಇಲ್ಲ ಎಂದು ಹೇಳಲಿಕ್ಕೆ ಇರುವುದಿಲ್ಲ. ಆ ರೀತಿ ಕೆಲಸ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದೇ ರೀತಿ ಬಾಂಡೆಡ್ ಲೇಬರ್ ಬಗ್ಗೆ ಬಂದಾಗ ಇದೂ ಕೂಡಾ ಪ್ರತಿ ವರ್ಷ ಹೆಚ್ಚಾಗುತ್ತಾ ಹೋಗಕೂಡದು. ಅವರನ್ನು ಫ್ರೀ ಮಾಡತಕ್ಕಂಥ ಕೆಲಸ ಯಶಸ್ವಿಯಾಗುವ ಲಕ್ಷಣ ಏನು ಎಂದರೆ ವರ್ಷವರ್ಷಕ್ಕೆ ಅವರ ಸಂಖ್ಯೆ ಕಡಿಮೆಯಾಗುತ್ತಾ ಹೋಗಬೇಕು. ಹೆಚ್ಚಾಗುತ್ತಾ ಹೋಗಕೂಡದು. ಶಿವಮೊಗ್ಗದಲ್ಲಿ ಅಕ್ಕ ತಂಗಿಯರನ್ನು ಎಷ್ಟು ದುಡ್ಡು ತೆಗೆದುಕೊಂಡು ಬಾಂಡೆಡ್ ಲೇಬರರ್ಸ್ ಆಗಿ ಇಟ್ಟುಕೊಂಡಿದ್ದಾರೆ, ಅದರ ಬಗ್ಗೆ ಎನ್‌ಕ್ವೈರಿಯಾಗಿ, ತನಿಖೆಯಾಗಿ ರಿಪೋರ್ಟ್ ಬರುತ್ತದೆ. ನಾನು ಆ ಮಾತನ್ನು ಹೇಳಿದ್ದೇನೆ. ಬಡವರ ಬಗ್ಗೆ ನೀವು ಏನೂ ಮಾಡಿಲ್ಲ ಎಂದು ಹೇಳುತ್ತೀರಿ, ಅದು ಸರಿಯಲ್ಲ ಎಂದು ಹೇಳಲಿಕ್ಕೆ ಬಯಸುತ್ತೇನೆ. ಯಾವ ಯಾವ ಹೊಸ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿದ್ದೇವೆ, ಅದನ್ನು ಮತ್ತೆ ಪುನಃ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ನಿಮಗೆಲ್ಲರಿಗೂ ಅದು ಗೊತ್ತಿದೆ. ಇನ್ನು ಟ್ಯಾಕ್ಸೇಷನ್ ವಿಚಾರದಲ್ಲಿ ಮಾನ್ಯ ಕೃಷ್ಣನ್‌ರವರು ಕೆಲವು ಸೂಚನೆ ಮಾಡಿದರು, ವೆಂಕಟರಾಮಯ್ಯನವರು ಈ ಪ್ರೊಫೆಷನಲ್ ಟ್ಯಾಕ್ಸ್ ಬಗ್ಗೆ ನೀವು ಚುನಾವಣಾ ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ ನಂತರ ಈ ಟ್ಯಾಕ್ಸನ್ನು ತೆಗೆದುಹಾಕುತ್ತೇನೆ ಎಂದು ಹೇಳಿದ್ದೀರಿ. ಅದನ್ನು ತೆಗೆದುಹಾಕಿಲ್ಲ ಎಂದು ಹೇ...ಗೆ. ಅದನ್ನು ನಾನು ಒಪ್ಪುತ್ತೇನೆ, ಅದನ್ನು ಹೇಳಿದ್ದಿದ್ದರು

ನಿಜ. ಅದನ್ನು ತೆಗೆದು ಹಾಕತಕ್ಕಂಥದ್ದು ಅಷ್ಟು ಸೂಕ್ತವಲ್ಲ ಎಂದು ಮೂರು ವರ್ಷದಿಂದಲೂ ಹೇಳುತ್ತಲೇ ಬಂದಿದ್ದೇನೆ. ಎರಡು ಸಾವಿರಕ್ಕಿಂತ ಕಡಿಮೆ ಸಂಬಳ ಇರತಕ್ಕಂಥವರಿಗೆ ಲಾಭವಾಗುವುದಿಲ್ಲ. ತಿಂಗಳಿಗೆ ಎರಡು ಸಾವಿರಕ್ಕಿಂತ ಹೆಚ್ಚು ಯಾರಿಗೆ ಬರುತ್ತದೆಯೋ ಅಂಥವರು ಅತೀ ಹೆಚ್ಚು ಎಂದರೆ ವರ್ಷಕ್ಕೆ ೨೫೦ ರೂಪಾಯಿ ಕೊಡಬೇಕು. ಇದರಿಂದಾಗಿ ನಮ್ಮ ಅಭಿವೃದ್ಧಿ ಕೆಲಸಗಳು ಎಷ್ಟು ವೇಗವಾಗಿ ಹೋಗಬೇಕು, ಅದಕ್ಕಾಗಿ ಅನೇಕ ಸ್ಕೀಮ್‌ಗಳನ್ನು ಜಾರಿಯಲ್ಲಿ ತರಬೇಕಾಗಿದೆ. ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಸ್ಟೇಡಿಯಂ ಮಾಡಬೇಕು, ಈಜುಕೊಳ ಹಾಕಬೇಕು, ಮುನಿಸಿಪಾಲಿಟಿಗಳಿಗೆ ಹೆಚ್ಚು ದುಡ್ಡು ಕೊಡಬೇಕು. ಒಂದೇ ಎರಡೇ ಎಷ್ಟೋ ಕೆಲಸ ಆ ರೀತಿ ಆಗಬೇಕಾಗಿದೆ. ಇದಕ್ಕೆ ೧೦-೧೨ ಕೋಟಿ ರೂಪಾಯಿಗಳು ಬಂದರೆ ಈ ಕೆಲಸವನ್ನು ಮಾಡುವುದಕ್ಕೆ ಆಗುತ್ತದೆ. ಒಂದು ಸೂಚನೆಯನ್ನು ಮಾನ್ಯ ನಾರಾಯಣರಾವ್‌ರವರು ಮಾಡಿದ್ದಾರೆ, ಈ ಹಿಂದೆ ಹೊತ್ತಿಗೆ ಸರಿಯಾಗಿ ತೆರಿಗೆಯನ್ನು ಕೊಟ್ಟಿಲ್ಲ ಎಂದು ಅಂಥವರ ಮೇಲೆ ಪೆನಾಲ್ಟಿ ಹಾಕಿದ್ದಾರೆ, ಆದ್ದರಿಂದ ಆ ಪೆನಾಲ್ಟಿ ಇಂಟರೆಸ್ಟನ್ನು ವೇವ್ ಮಾಡಬೇಕು ಎಂದು ಹೇಳಿದ್ದಾರೆ, ಅದನ್ನು ನಾವು ಮಾಡುತ್ತೇವೆ.

೧೧-೩೫ ಎ.ಎಂ.

ಮತ್ತು ಬಹಳ ವರ್ಷಗಳಿಂದ ಕೊಡದೆ ಇದ್ದಂತಹ ಕೇಸ್‌ಗಳು ಇವೆ. ನಾವು ಒಂದೇ ಸಾರಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಂದವರಿಗೆ ಇನ್‌ಸ್ಟಾಲ್‌ಮೆಂಟ್ ಫೆಸಲಿಟೀಸ್ ಕೊಡುತ್ತೇವೆ ಮತ್ತು ಹಿಂದೆ ಆ ಕಾರಣದಿಂದ ಕೊಡದೆ ಇದ್ದಂತಹ ಪೆನಾಲ್ಟಿ ಮತ್ತು ಇನ್‌ಟೆರೆಸ್ಟ್ ಚಾರ್ಜ್ ಅನ್ನು ವೇವ್ ಮಾಡುವುದಕ್ಕೆ ಒಪ್ಪುತ್ತೇನೆ.

ಮತ್ತು ಸೇಲ್ಸ್ ಟ್ಯಾಕ್ಸ್ ಬಗ್ಗೆ ಅನೇಕ ಸೂಚನೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಎಲ್ಲಾ ಅಫೇನ್ಸ್‌ಗಳಲ್ಲಿ ಐಟಮ್ ಬೈ ಐಟಮ್ ನಾವು ಹೋಗುವುದಿಲ್ಲ. ಸಾಮಾನ್ಯವಾಗಿ ಒಂದು ಶಬ್ದದಲ್ಲಿ ಹೇಳುವುದಾದರೆ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಸಲ ಹೆಚ್ಚು ಕಡಿಮೆ ಅಥವಾ ಇದನ್ನು ರೇಷನ್‌ಲೈಸ್ ಮಾಡುತ್ತೇವೆ. ಅದರಲ್ಲಿ ಕೆಲವಾದರೂ ಸಂಧಾರಣೆಯಿಲ್ಲದೆಂದು ಹೇಳುವುದಿಲ್ಲ. ಕೆಲವು ಸೂಚನೆಗಳನ್ನು ಮಾನ್ಯ ಸದಸ್ಯರುಗಳು ಮಾಡಿದ್ದಾರೆ ಅವುಗಳನ್ನು ಸ್ವಲ್ಪ ಮಟ್ಟಿಗೆ ನಾನು ವಿಚಾರ ಮಾಡುತ್ತೇವೆ. ಸನ್ಮಾನ್ಯ ಆರ್. ವೆಂಕಟರಾಮಯ್ಯನವರು ಹೇಳಿದ್ದಾರೆ ಸಿನಿಮಾ ತೆರಿಗೆ ನಾವು ಜಾಸ್ತಿ ಮಾಡಿದ್ದೇವೆಂದು. ಇಲ್ಲ, ನಾವು ಮಾಡಿಲ್ಲ. ಐದು ಪೈಸೆ ಹೆಚ್ಚು ಮಾಡಿದ್ದೇವೆ. ಅದನ್ನು ಸೇರಿಸಿಕೊಂಡರೂ ಕೂಡ ಬಾಂಬೆ, ಮದರಾಸು, ಡೆಲ್ಲಿ, ಹೈದರಾಬಾದ್ ಮುಂತಾದ ದೊಡ್ಡ ದೊಡ್ಡ ಶಹರುಗಳಲ್ಲಿ ಇದಕ್ಕೆ ಏನು ಚಾರ್ಜ್ ಮಾಡಿದ್ದಾರೆ ಅದಕ್ಕಿಂತ ನಮ್ಮದು ಕಡಿಮೆ ಇದೆಯೆ ಹೊರತು ಜಾಸ್ತಿ ಇಲ್ಲ. ಈಗ ಒಂದು ವಿಚಾರದ ಬಗ್ಗೆ ಸಿನಿಮಾ ನಿರ್ದೇಶಕರು ಮತ್ತು ನಿರ್ಮಾಪಕರು ಪುನಃ ಪುನಃ ಭೇಟಿಯಾಗಿದ್ದಾರೆ. ಸೇಲ್ಸ್ ಟ್ಯಾಕ್ಸ್ ಅನ್ನು ಫಿಲ್ಮ್ ಮೇಲೆ ಹಾಕುತ್ತಾ ಇದ್ದೀರಿ ಅದನ್ನು ರದ್ದು ಮಾಡಬೇಕು. ಅದರ ಬದಲು ಬೇರೆ ರೀತಿಯಿಂದ ಅಷ್ಟೇ ಆದಾಯ ಬರುವಂಥ ಸೂಚನೆ ಮಾಡುತ್ತೇವೆಂದು ಅವರೇ ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಇದನ್ನು ರದ್ದು ಮಾಡಿದ್ದಾರೆಂದು ಹೇಳಿದ್ದಾರೆ. ಈ ರೀತಿ ಅವರು ಮಾಡುವುದಾದರೆ ಇದನ್ನು ರದ್ದು ಮಾಡತಕ್ಕ ವಿಚಾರವನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಕನ್ನಡದ ಬಗ್ಗೆ, ಕನ್ನಡ ಸಾಹಿತ್ಯ ಪರಿಷತ್ತಿನ ಬಗ್ಗೆ, ಮಾನ್ಯ ಇಡಿನಬ್ಬ ಇನ್ನೂ ಡೈನಮಿಕ್ ಆಗಿ ನೀವು ಕೆಲಸ ಮಾಡಬೇಕೆಂದು ಹೇಳಿದರು. ಇದು ನಮ್ಮ ಕೈಯಲ್ಲಿ ಇಲ್ಲ. ಇದರ ಬಗ್ಗೆ ಸ್ವಲ್ಪ ಕಾಂಟ್ರವರ್ಸಿ ಇದೆ. ವಿಚಾರಣಾ ಆಯೋಗದ ಮುಂದೆ ಇದು ಇದೆ. ಇದರ ಬಗ್ಗೆ ಬಂದಿರುವ ಆಪಾದನೆಗಳು ತನಿಖೆ ಆಗುತ್ತಿವೆ, ಇದು ಮುಗಿದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತಿನ, ಕನ್ನಡ ಭಾಷೆಯ ಅಭಿವೃದ್ಧಿಯ ಸಲುವಾಗಿ ಯಾವುದೇ ಕಾರ್ಯಕ್ರಮ ಇರಲಿ, ಯಾವುದೇ ಯೋಜನೆ ಇರಲಿ, ಅದಕ್ಕೆ ಸರ್ಕಾರದ ಸಂಪೂರ್ಣ ಬೆಂಬಲ ಇದೆ ಎಂದು ಹೇಳ ಬಯಸುತ್ತೇನೆ. ಕೆಲವು ಯೋಜನೆಗಳು ಸರ್ಕಾರ ಒಂದರಿಂದಲೇ ಆಗುವುದಕ್ಕೆ ಸಾಧ್ಯ ಇಲ್ಲ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳು ಮತ್ತು ಇನ್ನಿತರ ಕನ್ನಡ ಸಂಘಗಳು ಈ ದಿಸೆಯಲ್ಲಿ ಕೆಲಸ ಮಾಡಲಿಕ್ಕೆ ಮುಂದೆ ಬಂದರೆ ಇದು ಒಂದು ಸಹಾಯ ಎಂದು ನಾನು ತಿಳಿಯುತ್ತೇನೆ ಮತ್ತು ಸಂಪೂರ್ಣ ಬೆಂಬಲವನ್ನು ಅವರಿಗೆ

ಕೊಡುತ್ತೇನೆ. ಕೆಲವು ಹೊಸ ಕಾರ್ಯ ಕ್ರಮಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಇದು ನಮ್ಮ ಕರ್ನಾಟಕದ ಉದ್ದಾಮ ಸಾಹಿತಿಗಳು ಬರೆದ ಎಲ್ಲಾ ಕೃತಿಗಳನ್ನು ಮರು ಪ್ರಕಟಣೆ ಮಾಡುವುದು. ಈಗ ಕುವೆಂಪು, ಶಿವರಾಮಕಾರಂತ, ನಿರಂಜನ, ಮಾಸ್ತಿ ಅವರುಗಳು ಇದ್ದಾರೆ ಹಾಗೂ ಇನ್ನಿತರ ದೊಡ್ಡ ದೊಡ್ಡ ಸಾಹಿತಿಗಳು ಇದ್ದಾರೆ. ಅವರು ಮೂವತ್ತು ಐವತ್ತು ಒಳ್ಳೊಳ್ಳೆಯ ಗ್ರಂಥಗಳನ್ನು ಬರೆದಿದ್ದಾರೆ. ಇದು ಅವರ ಅಮೂಲ್ಯವಾದ ದೇಣಿಗೆ, ಇದು ಎಲ್ಲಾ ಜನರಿಗೆ ಸಿಕ್ಕಬೇಕು ಎಲ್ಲಾ ಜನರು ಇದನ್ನು ಓದಬೇಕು. ಈ ಒಂದು ಉದ್ದೇಶದಿಂದ ನಾವು ಈಗಾಗಲೇ ಎರಡು ಮೂರು ಇಂಥಹ ಮಹಾ ಲೇಖಕರ ಮತ್ತು ಸಾಹಿತಿಗಳ ಕೃತಿಗಳನ್ನು ಅನೇಕ ಸಂಪುಟಗಳಲ್ಲಿ ಒಂದೇ ಸಾರಿ ಪ್ರಕಟ ಮಾಡುವಂತಹ ಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ. ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಇದರ ಹೊರತಾಗಿ ಒಂದು ಹೊಸ ಯೋಜನೆ ನಾವು ಬರುವ ವರ್ಷದಿಂದ ಕೈಗೊಳ್ಳುವವರಿದ್ದೇವೆ. ಕನ್ನಡದ ಈ ಮಹಾಕೃತಿಗಳು ಏನು ಇದೆ ಇವುಗಳನ್ನು ಬೇರೆ ಭಾಷೆಯಲ್ಲಿ ಭಾಷಾಂತರ ಮಾಡುವುದು ಮತ್ತು ಅದೇ ರೀತಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತವಾದಂತಹ ಅಥವಾ ಜ್ಞಾನಪೀಠ ಪ್ರಶಸ್ತಿ ಪಡೆದಂತಹ ಕೃತಿಗಳನ್ನು ಕನ್ನಡದಲ್ಲಿ ಅನುವಾದ ಮಾಡತಕ್ಕದ್ದು ಒಂದು ಹೊಸ ಯೋಜನೆ. ಇದರಿಂದ ಕರ್ನಾಟಕದ ಜನರಿಗೆ ಬೇರೆ ಸಾಹಿತ್ಯದ ಪರಿಚಯುವಾಗುತ್ತದೆ. ಮತ್ತು ನಮ್ಮ ಸಾಹಿತ್ಯದ ಪರಿಚಯು ನಮ್ಮ ದೇಶದ ಬೇರೆ ಭಾಗದ ಜನರಿಗೆ ಆಗಬೇಕು ಎನ್ನತಕ್ಕ ಉದ್ದೇಶ ನಮ್ಮದು ಅದೇ ರೀತಿಯಲ್ಲಿ ಕಲೆಯ ವಿಚಾರವಾಗಿ, ಕಲೆಯ ಅಭಿವೃದ್ಧಿಯ ವಿಚಾರವಾಗಿ ನಮ್ಮ ವಿರೋಧ ಪಕ್ಷದ ನಾಯಕಿಯುವರು ತುಂಬಾ ಆಸಕ್ತಿಯನ್ನು ವಹಿಸಿದ್ದಾರೆ. ಚಿತ್ರಕಲಾ ಪರಿಷತ್ತು ಮತ್ತು ಇನ್ನೂ ಅನೇಕ ಕಲಾ ಶಾಲೆಗಳು ಏನು ಇವೆ ಈ ಎಲ್ಲಾ ಶಾಲೆಗಳು ಒಂದೇ ಒಂದು ಇಲಾಖೆಯ ಕೆಳಗಡೆ ಇದ್ದರೆ ಅನೂಕೂಲವಾಗುತ್ತದೆಂದು ಹೇಳಿ ಅದನ್ನು ಟೆಕ್ನಿಕಲ್ ಎಜುಕೇಷನ್ ಡಿಪಾರ್ಟ್‌ಮೆಂಟ್ ಕೆಳಗಡೆ ತಂದಿದ್ದೇವೆ. ಅವರಿಗೆ ಕಿರುಕುಳ ಆಗಕೂಡದು ಮತ್ತು ಅವರಿಗೆ ತೀವ್ರ ಗತಿಯಲ್ಲಿ ಅವರ ಸಮಸ್ಯೆಗಳು ಬಗೆಹರಿಯಬೇಕು ಎಂಬ ಉದ್ದೇಶ ಇದೆ. ಈ ಕಲೆಯ ಅಭಿವೃದ್ಧಿ ಕೂಡ ಮಾನ್ಯ ಸದಸ್ಯರಿಗೆ......

ಶ್ರೀ ಎಸ್. ಬಂಗಾರಪ್ಪ.—ಅದಕ್ಕಾಗಿ ಕಲಾ ನಿರ್ದೇಕರು ಒಂದೇಒಂದು ಎಂದು ಮಾಡಿ ಎಲ್ಲಾ ಕಲಾ ಶಾಲೆಗಳನ್ನು ಒಂದೇ ಕಡೆ ಮುಂದುವರಿಸಿಕೊಂಡು ಹೋಗಬೇಕು ಹಾಗೂ ಒಂದೇ ಕಡೆ ಇರುವಂತೆ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ಕಲಾ ಶಾಲೆಗಳ ಬೇಡಿಕೆ ಏನಿತ್ತು ಎಂದರೆ ಇದನ್ನು ವರ್ಗಾಯಿಸಿ ಡೈರೆಕ್ಟೊರೇಟ್ ಮಾಡಬೇಕು ಎಂದು ಇದರ ಬಗ್ಗೆ ಯೋಚನೆ ಮಾಡೋಣ, ಮೂರು ವರ್ಷಗಳಲ್ಲಿ ಕನ್ನಡ ಅಕಾಡಮಿಗಳಿಗೆ ಒಂದು ಸಂಕೀರಣ ಮಾಡಬೇಕು, ಒಂದ್ ಕಾಂಪ್ಲೆಕ್ಸ್ ಮಾಡಬೇಕು. ಎಂದು ನಮ್ಮ ಯೋಜನೆ ಇತ್ತು. ಆದರೆ ನಾವು ಈ ವರ್ಷ ಬಜೆಟ್‌ನಲ್ಲಿ ದುಡ್ಡನ್ನು ಒದಗಿಸಿದ್ದರೂ ಕೂಡ ಆ ಕೆಲಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ವರ್ಷ ಕೆಲಸ ಪ್ರಾರಂಭ ಮಾಡುತ್ತೇವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಈ ಎಲ್ಲಾ ಅಕಾಡಮಿಗಳಿಗೆ ಅವರ ಆಫೀಸ್ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ಆಫೀಸ್ ನಡೆಸತಕ್ಕಂತಹ ಅನುಕೂಲತೆ ಮತ್ತು ಆದರ ಜೊತೆಗೆ ವರ್ಕ್‌ಶಾಪ್ ಆಡಿಟೋರಿಯಂ ಇದೆಲ್ಲಾ ಒಂದೇ ಕಡೆ ಇರಬೇಕು ಎಂಬ ಉದ್ದೇಶದಿಂದ ಅದನ್ನು ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಪ್ರವಾಸೋದ್ಯಮದ ವಿಚಾರದಲ್ಲಿ ಒಂದು ಮಾತನ್ನು ನನ್ನ ಹಿಂದಿನ ಭಾಷಣದಲ್ಲಿ ಹೇಳಿದ್ದೆ. ಸರ್ಕಾರ ಇವೊತ್ತಿನ ಯೋಜನಾ ಚೌಕಟ್ಟಿನಲ್ಲಿ ಪ್ರವಾಸೋದ್ಯಮಕ್ಕೆ ವಿಶೇಷವಾದಂತಹ ಪ್ರಾಧಾನ್ಯತೆ ಇಲ್ಲ. ಅಥವಾ ಏನೂ ಪ್ರಾಧಾನ್ಯತೆ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅದಕ್ಕಾಗಿ ಸರ್ಕಾರದ ನೀತಿ ಏನು ಅಂದರೆ ಖಾಸಗಿ ಅವರು ಇದನ್ನು ವಹಿಸಿಕೊಂಡು ಕೊಳ್ಳಲು ಮುಂದೆ ಬಂದರೆ ಪ್ರವಾಸೋದ್ಯಮ ಅವರಿಗೆ ವಹಿಸುತ್ತೇವೆ. ಅವರಿಗೆ ಇನ್‌ಫ್ರಾಸ್ಟ್ರಕ್ಚರ್ ಫೇಸಿಲಿಟೀಸ್ ಕೂಡಾ ಕೊಡುತ್ತೇವೆ. ಹೊರದೇಶಗಳಲ್ಲಿ ಹೋಟೆಲುಗಳನ್ನು ಮಾಡುವುದಾಗಲಿ, ಇದು ನಮ್ಮ ಉದ್ದೇಶ. ಶೃಂಖಲೆ ಮಾಡುವುದಾಗಲೀ ಅಥವಾ ಬೇರೆ ಪ್ರಯತ್ನ ಮಾಡುವುದಾಗಲೀ ಬೇರೆ ಬೇರೆ ದೃಷ್ಟಿಯಿಂದ ಅನುಕೂಲತೆಗಾಗಿ ಅವರು ಮುಂದೆ ಬಂದರೆ ಅವರಿಗೆ ಜಮೀನು ಒದಗಿಸಿಕೊಡುತ್ತೇವೆ. ಬೇರೆತರಹ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್ ಕೊಡುತ್ತೇವೆ. ಕೇಂದ್ರದ ಪ್ರವಾಸೋದ್ಯಮ ಮಂತ್ರಿಗಳು ಬಂದಿದ್ದರು. ಅವರ ಜೊತೆ ನನ್ನ ಚರ್ಚೆ ಆಯಿತು. ಅವರು ನಮ್ಮ ದಕ್ಷಿಣ ಭಾರತದಲ್ಲಿ ಉತ್ತರ

ಭಾರತಕ್ಕಿಂತಲೂ ಹೆಚ್ಚು ಆಕರ್ಷಕವಾದಂಥ ಪ್ರವಾಸಿಗಳ ಕ್ಷೇತ್ರಗಳು, ಆಕರ್ಷಕವಾದ ಸ್ಥಾನಗಳು ಇವೆ, ಹೆಚ್ಚು ಕೆಲಸ ಮಾಡಲಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ನಾನು ಹೇಳಿದೆ ಕರ್ನಾಟಕದ ಬಗ್ಗೆ ಹೇಳುವುದಾದರೆ ನೀವು ಏನು ಕೇಳಿದರೂ ಅದನ್ನು ಕೊಡಲಿಕ್ಕೆ ಸರ್ಕಾರ ಸಿದ್ಧ ಇದೆ. ಈ ವಿಚಾರದಲ್ಲಿ ಎರಡು ಹಿರಿಯ ಅಧಿಕಾರಿಗಳಾಗಲಿ ಅಥವಾ ಬೇರೆ ಅಧಿಕಾರಿಗಳನ್ನು ಕಳಿಸಿಕೊಟ್ಟರೆ ಪಶ್ಚಿಮ ಕರಾವಳಿ ಬಗ್ಗೆ ಅಭಿವೃದ್ಧಿ ಪಡಿಸಲು ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಕರ್ನಾಟಕ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಕರ್ನಾಟಕ ಫೆಸ್ಟಿವಲ್, ಹಬ್ಬ ಎಂದರೆ ಸರಿಹೋಗುವುದಿಲ್ಲ. ಕರ್ನಾಟಕ ಉತ್ಸವವನ್ನು ನಾವು ಡಿಲ್ಲಿಯಲ್ಲಿ ಬರುವ ಹತ್ತನೆ ತಾರೀಖು ಮಾಡಬೇಕೆಂದು ಇದ್ದೇವೆ. ಅದೇ ರೀತಿ ಡಿಲ್ಲಿಯಲ್ಲಿ ಒಂದೇ ಕಡೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಮ್ಮನ್ನು ಕರೆದುಕೊಂಡು ಹೋಗುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಿಮಗೆ ಕರ್ನಾಟಕದ ಸಂಸ್ಕೃತಿ ಪರಿಚಯ ಇಲ್ಲವೇ? ಅಲ್ಲಿಯವರೆಗೆ ಪರಿಚಯ ಮಾಡಿಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಾಸಕರಾದ ನಾವು, ನೀವು ನಡೆಸತಕ್ಕದ್ದನ್ನು ನೋಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಡಿಲ್ಲಿಯಲ್ಲಿ ಅಲ್ಲದೆ ಬೇರೆ ಕಡೆ ಮಾಡಬೇಕು ಎಂಬ ಉದ್ದೇಶ ಇದೆ. ಅವರು ನಾವು ಹಾಕಿದಂತಹ ಕಾರ್ಯಕ್ರಮವನ್ನು ತುಂಬಾ ಮೆಚ್ಚಿದ್ದಾರೆ. ನಾವು ಬೇರೆ ದೇಶಕ್ಕೂ ಇವುಗಳನ್ನು ಕಳುಹಿಸಬಹುದು, ಅಷ್ಟರಮಟ್ಟಿಗೆ ಇದು ಚೆನ್ನಾಗಿದೆ ಅಂತ ಹೇಳಿದರು. ಅದಕ್ಕೆ ನಾನು ಅವರಿಗೆ ಬಹಳ ಋಣಿಯಾಗಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಜೋಗಜಲಪಾತದ ವಿಷಯ ಕೇಳಿದ್ದೆ.

ಶ್ರೀ ರಾಮಕೃಷ್ಣ ಹೆಗಡೆ.—ಹೌದು ನೀವು ಕೇಳಿದ್ದೀರಿ, ಈಗ ಅಲ್ಲಿ ಒಂದು ಸಣ್ಣ ಒಡ್ಡನ್ನು ಹಾಕಿ ನೀರನ್ನು ಸಂಗ್ರಹಿಸಿ ಇಟ್ಟು ಬೇಸಿಗೆ ಕಾಲದಲ್ಲೂ ನೀರನ್ನು ಬಿಡಬೇಕು ಎಂದು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಒಂದು ಯೋಜನೆಯನ್ನು ಮಾಡಿದ್ದೇವೆ. ಅದಕ್ಕೆ ಸುಮಾರು ೮ ಕೋಟಿ ರೂಪಾಯಿ ಆಗುತ್ತದೆಂದು ಅಂದಾಜು ಮಾಡಿದ್ದೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಮಾಡಿದ ಕಾಲದಲ್ಲಿ ೧.೫ ಕೋಟಿ ಖರ್ಚಾಗುತ್ತಿತ್ತು, ಅದನ್ನು ಇಲ್ಲಿಯವರೆಗೆ ಹಾಗೆಯೇ ಉಳಿದಿದೆ. ಇನ್ನೂ ಏಕೆ ಮುಗಿದಿಲ್ಲ ?

ಶ್ರೀ ರಾಮಕೃಷ್ಣ ಹೆಗಡೆ.—ಹೌದು, ಅದಕ್ಕಾಗಿಯೇ ನಾನು ಕೇಳುತ್ತಿದ್ದೇನೆ ನೀವು ಏತಕ್ಕೆ ನಿಮ್ಮ ಕಾಲದಲ್ಲಿಯೇ ಮಾಡಲಿಲ್ಲವೆಂದು? ಮಾಡಿದ್ದಾರೆ ೧.೫ ಕೋಟಿ ರೂಪಾಯಿಗಳಿಗೆ ಮುಗಿಯುತ್ತಿತ್ತು. ಆದರೆ ಈಗ ೮ ಕೋಟಿ ರೂಪಾಯಿ ಆಗುವ ಪ್ರಸಂಗ ಬಂದಿದೆ. ಆದರೆ ಅದನ್ನು ನಾವು ಖಂಡಿತ ಬಿಡುವುದಿಲ್ಲ. ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ.

ಕೊನೆಯದಾಗಿ ಇನ್ನೊಂದು ವಿಷಯ, ಮೊನ್ನೆ ಮಾನ್ಯ ಕೃಷ್ಣನ್‌ರವರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಬಹಳ ನಿಷ್ಠೂರವಾಗಿ ಹೇಳಿದರು. ಅದೇನೆಂದರೆ ನಮ್ಮಲ್ಲಿ ಉದ್ಯೋಗ ನೀತಿ ಸರಿಯಿಲ್ಲವೆಂದು ಅವರು ಹೇಳಿದ್ದು ತಪ್ಪು. ಏಕೆಂದರೆ ಔದ್ಯೋಗಿಕ ನೀತಿಯನ್ನು ನಾವು ೧೯೮೩ನೇ ಇಸವಿಯಲ್ಲಿ ನಾವು ತಯಾರು ಮಾಡಿದ್ದೇವೆ. ಇದರ ಬಗ್ಗೆ ಒಂದಲ್ಲಾ ಎರಡು ಸಲ ಈ ಮನೆಯಲ್ಲಿ ಚರ್ಚೆಯಾಗಿದೆ. ಆದ್ದರಿಂದ ನಾನು ಇದರ ಬಗ್ಗೆ ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವರ ಮನಸ್ಸಿನಲ್ಲಿ ಏನು ಒಂದು ಭಯ ಇದೆ, ಅದು ನನಗೆ ಗೊತ್ತಿಲ್ಲ. ಆದರೆ ನನಗೆ ತಿಳಿದಮಟ್ಟಿಗೆ ಅವರ ಭಯಕ್ಕೆ ಕಾರಣವೇನೆಂದರೆ ನಾವು ಈ ಸೋಪ್ ಅಂಡ್ ಡಿಟರ್ಜೆಂಟ್ ಕಾರ್ಖಾನೆಯನ್ನು ಮಾರಾಟ ಮಾಡುತ್ತೇವೆಂದು. ಇದರ ಬಗ್ಗೆ ಯಾರಾದರೂ ಸೂಚನೆ ಕೊಟ್ಟಿದ್ದಾರೆಯೋ? ಇದನ್ನು ನಾವು ಖಂಡಿತವಾಗಿಯೂ ಮಾರಾಟ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಆದರೆ ಅದರ ಸುಧಾರಣೆಯ ಬಗ್ಗೆ ನಮ್ಮ ಮಾನ್ಯ ಕೈಗಾರಿಕಾ ಮಂತ್ರಿಗಳು ಯೋಚನೆ ಮಾಡುತ್ತಿದ್ದಾರೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಮುಕ್ತರ್ ಉನ್ನಿಸಾ ಬೇಗಂ.—ಅಧ್ಯಕ್ಷರೇ, ಕೆ.ಆರ್. ಮಿಲ್ ಮೈಸೂರು ಇದರ ಬಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಅದರ ಬಗ್ಗೆ ನಾವು ಹೊಸ ಹೊಸ ಮಾರ್ಗವನ್ನು ಕಂಡುಹಿಡಿಯುತ್ತಿದ್ದೇವೆ. ಅದರ ಬಗ್ಗೆ ಸ್ವಲ್ಪ ಆಸ್ಥೆಯನ್ನು ವಹಿಸಿದ್ದೇನೆ. ಇದಕ್ಕೆ ಸ್ವಲ್ಪ ಕಾಲಾವಕಾಶವೇನೋ ಬೇಕು. ಯಾವುದು ಒಂದು ತೀರ್ಮಾನಕ್ಕೆ ಬರುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಕೆಲವು ವರ್ಷಗಳಿಂದ ತಮ್ಮಿಂದ ಇದೇ ರೀತಿಯ ಅಭಿಪ್ರಾಯ ಬರುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೇ, ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳದಿರಲಾರೆ. ಉದಾಹರಣೆಗೆ ಕೋ-ಆಪರೇಟಿವ್ ಕ್ಷೇತ್ರದಲ್ಲಿರತಕ್ಕಂತಹ ಸಕ್ಕರೆ ಕಾರ್ಖಾನೆಗಳು. ಈಗ ಒಂದೊಂದು ಸಕ್ಕರೆ ಕಾರ್ಖಾನೆಯಲ್ಲೂ ೧೦-೧೨ ಕೋಟಿ ರೂಪಾಯಿಗಳ ನಷ್ಟವಾಗುತ್ತಿವೆ. ಇನ್ನು ಕೆಲವು ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಗಳು ನಡೆಯದೇ ಇರತಕ್ಕಂತಹ ಸಂದರ್ಭ ಬಂದಾಗ ಅದನ್ನು ನಾವು ಕಲೆಯಲ್ಲಿಟ್ಟು ಕೊಳ್ಳಲಿಕ್ಕೆ ಸಾಧ್ಯವಿಲ್ಲ. ಆದರೆ ಇವುಗಳ ಬಗ್ಗೆ ಈಗಾಗಲೇ ತೀರ್ಮಾನ ತೆಗೆದು ಕೊಂಡಿದ್ದೇನೆ ಮತ್ತು ಇನ್ನು ಕೆಲವು ಸಕ್ಕರೆ ಕಾರ್ಖಾನೆಗಳ ಬಗ್ಗೆ ಏನಾದರೂ ಆಫರ್ ಬಂದರೆ ಅದನ್ನು ನಾವು ಕನ್‌ಸಿಡರ್ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

ಕೊನೆಯದಾಗಿ ಇನ್ನೊಂದು ಮಾತು, ಅಧ್ಯಕ್ಷರೇ ಮಾನ್ಯ ಕೃಷ್ಣನ್‌ರವರು ನಮ್ಮ ಕೈಗಾರಿಕಾ ಮಂತ್ರಿಯವರನ್ನು ಅಧ್ಯಕ್ಷರೆಂದು ಹೇಳಿದ್ದಾರೆಂದು ಗೊತ್ತಾಯಿತು.

(ಗೊಂದಲ)

ಶ್ರೀ ರಾಮಕೃಷ ಹೆಗಡೆ.-ಅದು ಸರ್ವಥಾ ಸರಿಯಲ್ಲ ಅವರ ದಕ್ಷತೆಯಲ್ಲಿ ಯಾವ ರೀತಿಯೂಕಡಿಮೆ ಇಲ್ಲ, ಇವತ್ತು ಅವರನ್ನು ನಾವು ಮೊದಲಬಾರಿ ನೋಡುತ್ತಿಲ್ಲಾ. ಸುಮಾರು ೨ ವರ್ಷಗಳಿಂದಲೂ ನೋಡುತ್ತಿದ್ದೇವೆ, ಹೀಗಾಗಿ ಇದ್ದಕ್ಕಿದ್ದ ಹಾಗೆ ಅವರು ಹೀಗೆ ಹೇಳುವುದು ಸರಿಯಲ್ಲವೆಂದು ನನ್ನ ಭಾವನೆ, ನಿಜ ಹೇಳಬೇಕಾದರೆ ಅವರು ನನಗಿಂತ ಹೆಚ್ಚು ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹೇಳುತ್ತೇನೆ.

ಒಬ್ಬ ಸದಸ್ಯ.—ಜನತಾ ಲೇಬರ್ ಯೂನಿಯನ್

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.-ಈ ಪಬ್ಲಿಕ್ ಎಂಟರ್‌ಪ್ರೈಸೆಸ್ ಮೇಲೆ ಇರತಕ್ಕಂತಹ ಇಂಡಸ್ಟ್ರೀಗಳು ಏನು ಇವೆ ಇವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ, ಆದರೆ ಇದು ಅಷ್ಟು ಸರಿಯಾಗಿ ಕಾಣುವುದಿಲ್ಲ ಏಕೆಂದರೆ ಗವರ್ನಮೆಂಟ್ ಇಂಡಸ್ಟ್ರೀಸ್ ಬಗ್ಗೆ ಈ ರೀತಿ ಮಾತನಾಡಿದರೆ ನಾಳೆ ..

ಶ್ರೀ ಆರ್. ವೆಂಕಟರಾಮಯ್ಯ.—ಈಗ ಅವರು ನ್ಯಾಷನಲೈಸೇಷನ್ ಬಗ್ಗೆ ಸ್ಪಷ್ಟವಾಗಿ ಹೇಳಿ ಎಂದು ಹೇಳುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ನೀತಿ ಏನು ಈ ಕೆ ಎಸ್ ಐ ಡಿ ಸಿ ಮತ್ತು ಕೆ ಎಸ್ ಎಫ್ ಸಿ ಸಂಸ್ಥೆಗಳು ಇವೆ, ಇವು ಆರ್ಥಿಕ ಸಂಸ್ಥೆಗಳು. ಕೆಎಸ್‌ಐಡಿಸಿ ಹೆಸರೇ ಹೇಳಿದಂತೆ ಕರ್ನಾಟಕ ಸ್ಟೇಟ್ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಅಂಡ್ ಇನ್‌ವೆಸ್ಟ್‌ಮೆಂಟ್ ಕಾರ್ಪೋರೇಷನ್. ಈಗ ನಾವು ಏನು ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ ಅದು ಶಾಶ್ವತ ಇನ್‌ವೆಸ್ಟ್‌ಮೆಂಟ್ ಮಾಡುವಂತದ್ದಲ್ಲ, ಯಾವಾಗ ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ ಎಂದರೆ, ಪ್ರಾರಂಭ ಕಾಲದಲ್ಲಿ ಸ್ವಲ್ಪ ಮಟ್ಟಿಗೆ ಅವರಿಗೆ ಸಹಾಯವಾಗಲಿ ಎಂದು ಇನ್‌ವೆಸ್ಟ್ ಮಾಡುವುದು. ಅದು ಆದಮೇಲೆ ಪ್ರೊಡಕ್ಷನ್ ಶುರುವಾಗಿ ಲಾಭವನ್ನು ಪಡೆಯುವಾಗ ಆ ಇನ್‌ವೆಸ್ಟ್‌ಮೆಂಟನ್ನು ವಾಪಸ್ ತೆಗೆದುಕೊಂಡು ಬೇರೆಯದನ್ನು ಹಾಕಬೇಕು. ಅದನ್ನು ರೀರೋಲ್ ಮಾಡಬೇಕು. ಅದು ಅಲ್ಲದೆ ಹೋದರೆ ನಮಗೆ ಕೇವಲ ೧-೨ ಕೋಟಿ ಹಾಕಿ ನಡೆಸತಕ್ಕಂಥ ಇಂಡಸ್ಟ್ರೀಸ್‌ನಲ್ಲಿ ಎಷ್ಟು ಲಾಭ ಬರುತ್ತದೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈ ನೀತಿಯಾದರೆ ನಮಗೆ ಏನೂ ಆಕ್ಷೇಪಣೆ ಇಲ್ಲ. ಏಕೆಂದರೆ ಈ ಕೆಎಸ್‌ಐಡಿಸಿ ಇರುವುದು ಪ್ರಾರಂಭದಲ್ಲಿ ತಾವು ಹೇಳಿದ ಪ್ರಕಾರ ಜಾಯಿಂಟ್, ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಈ ರೀತಿ ಇದ್ದರೆ ನಾವು ಯಾರು ಅಬ್ಜಕ್ಟ್ ಮಾಡುವುದಿಲ್ಲ. ಆದರೆ ದಿಸ್ ಇನ್‌ವೆಸ್ಟ್‌ಮೆಂಟ್ ಎಂದು ಒಂದುಪೇಸಿಯಾಲಜಿಯನ್ನು ತಾವು ಬಜೆಟ್‌ನಲ್ಲಿಉಪಯೋಗಮಾಡಿದಾಗ ನಮಗೆ ಏನು ಅರ್ಥವಾಯಿತೆಂದರೆ ಪಬ್ಲಿಕ್ ಸೆಕ್ಟಾರ್‌ಗೆ ಏನು ಇನ್‌ವೆಸ್ಟ್ ಮಾಡಿದ್ದಾರೆ not Joint Sector not investment in the KSIDC for Ex : Mysore Paper mill ಇದೆ

ಆದರ ಬಗ್ಗೆ ಹೋರಾಟ ನಡೆಯಿತು ತಮಗೆ ಗೊತ್ತಿದೆ. There was a time about 8 years back, some party from Calcutta, wanted to capture Mysore Paper Mills. Suppose you withdraw the investment, that capitalist will capture that Mysore Paper Mills and the public sector enterprise will be estabilised. If this is your reply, we are happy.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ರಿಪ್ಲೈ ಇರತಕ್ಕಂಥದನ್ನು ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್‌ನ್ನು ನಾವು ಸುಮ್ಮಸುಮ್ಮನೆ ಯಾರಿಗೂ ಹಸ್ತಾಂತರ ಮಾಡತಕ್ಕಂಥದ್ದಾಗಲಿ ಅಥವಾ ಕಲ್ಕತ್ತದವರಿಗೋ, ದೆಹಲಿಯವರಿಗೋ ಕೊಡತಕ್ಕಂಥದ್ದು ನಮ್ಮ ನೀತಿಯಲ್ಲ, ಆದರೆ ನಾವು ಯಾವ ಒಂದು ಇಂಡಸ್ಟ್ರಿಯನ್ನಾಗಲಿ, ಅಥವಾ ಒಂದು ಅಂಡರ್‌ಟೇಕಿಂಗ್ ಸಂಸ್ಥೆಯನ್ನು ನಾವು ಯಾವ ಉದ್ದೇಶಕ್ಕೆ ಸ್ಥಾಪನೆ ಮಾಡಿದ್ದೇವೆ, ಆ ಉದ್ದೇಶ ಸಾಧನೆ ಅದು ಸಫಲವಾಗುವ ರೀತಿಯಲ್ಲಿ ಅದನ್ನು ನಡೆಸಿಕೊಂಡು ಹೋಗಬೇಕು. ಕೆಲವು ವೇಳೆ ಡೆಡ್ ಇನ್‌ವೆಸ್ಟ್‌ಮೆಂಟ್ ಕೂಡ ಇರುತ್ತದೆ. ಆದುದರಿಂದ ಇರತಕ್ಕಂಥ ಪಬ್ಲಿಕ್ ಸೆಕ್ಟರ್‌ಗಳನ್ನು ತೆಗೆದುಕೊಂಡು, ಇದೆ ಮುಖ್ಯವಾದ Mysore Paper Mill ಇದೆ ಇದನ್ನು ಬೇರೆ ಯಾರಿಗೂ ಹಸ್ತಾಂತರ ಮಾಡತಕ್ಕಂಥದ್ದಲ್ಲ.

SRI J. H. PATEL —They think that disinvestment means privatisation Which is not so We have two different matters.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವಂಥ ಮುಖ್ಯವಾದ ಎಲ್ಲಾ ವಿಷಯಗಳಿಗೆ ನಾನು ಉತ್ತರ ಕೊಟ್ಟಿದ್ದೇನೆ. ಈ ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳಿಗೂ ಮತ್ತು ಅವರು ಕೊಟ್ಟಿರುವ ಸೂಚನೆಗಳಿಗೂ ನಾನು ಕೃತಜ್ಞತನಾಗಿದ್ದೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೆ, ಈ ಬಾರಿಯು ನನ್ನ ಫಜೀತಿ ಆದೆ. ಒಂದು ಸಾರಿ ಇವರ ಹೆಲಿಕ್ಯಾಪ್ಟರ್ ಬರಲಿಲ್ಲ. ಒಂದು ಸಾರಿ ಯಾವುದೋ ಡೆಲಿಗೇಷನ್ ಬಂತು. ಈ ಸಾರಿ ನಾನು ಮಾತನಾಡುವಾಗ ನಮ್ಮ ಮುಖ್ಯಮಂತ್ರಿಗಳು ಇರಲಿಲ್ಲ. ಇಂತಹ ದುರಾದೃಷ್ಟ ನನಗೆ ಬಂದು ಬಿಡ್ತು. ನಾನು ಹೆಂಗಸರ ಬಗ್ಗೆ ಕೇಳಿದೆ ಒಂದು ನಕಾರ ಶಬ್ದ ನನಗೆ ಉತ್ತರ ಬರಲಿಲ್ಲ. ಆಮೇಲೆ ಇವರು ಇವರ ಅಧಿಕಾರಿಗಳ ಸಂಬಂಧ ಹೇಳಿದರು. ಮತ್ತೆ ಅವರು ಹೇಳಿದರು. ನಾನು ಒಂದು ಪತ್ರ ಬಂದರೂ ಅದನ್ನು ಇನ್‌ವೆಸ್ಟಿಗೇಟ್ ಮಾಡಿಸುತ್ತೇನೆಂದು, ನಾನು ಪರ್ಟಿಕ್ಯೂಲರಾಗಿ ಹೆಲ್ತ್ ಸೆಕ್ರೆಟರಿ ಅವರಿಗೆ ಒಂದು ಪತ್ರ ಬರೆದಿದ್ದೆ. ಮತ್ತೆ ಮುಖ್ಯಮಂತ್ರಿಗಳಿಗೂ ಇದರ ಬಗ್ಗೆ ಬರೆದಿದ್ದೆ. ಅಧ್ಯಕ್ಷರೆ, ತಮಗೆ ಹಾಗೂ ಎಲ್ಲರಿಗೂ ಗೊತ್ತಿರುವ ಹಾಗೆ ಸಾಧರಣವಾಗಿ ನಾನು ಎಲ್ಲಾ ಮಂತ್ರಿಗಳ ಕೋಣೆಗೂ, ಮನೆಗಳಿಗೂ ಹೋಗತಕ್ಕ ಸ್ವಭಾವದವಳಲ್ಲ. ಏನಾದರೂ ಕೆಲಸ ಇದ್ದರೆ ಹೋಗಬೇಕು, ಅವರನ್ನು ಕೇಳಿ, ಅದನ್ನು ಮಾಡಿಸಿಕೊಡಿ ಎಂದು ಹೇಳಿಬಿಟ್ಟು ಬರುವುದು ನನ್ನ ಸ್ವಭಾವ. ಅವರ ಸಮಯವನ್ನು ಹಾಳು ಮಾಡಲು ನನಗೆ ಇಷ್ಟವಿಲ್ಲ. ನನ್ನ ಸಮಯವನ್ನು ಹಾಳು ಮಾಡಿಕೊಳ್ಳಲು ನನಗೆ ಇಷ್ಟವಿಲ್ಲ. ನಾನು ಮಂತ್ರಿಗಳ ಹತ್ತಿರ ಸಹಾಯ ಕೇಳುವ ಸ್ವಭಾವದವಳಲ್ಲ, ಒಂದು ಸಾರಿ ಮುಖ್ಯ ಮಂತ್ರಿಯವರ ಹತ್ತಿರ ಒಂದು ಮೂಗು ಮಗುವನ್ನು ಕರೆದುಕೊಂಡು ಹೋಗಿದ್ದೆ. ಇದರ ತಂದೆಯನ್ನು ಎಲ್ಲೋ ಬೇರೆ ಕಡೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಮಗೂಗೆ ಟ್ರೀಟ್‌ಮೆಂಟ್ ಕೊಡಬೇಕಾಗಿರುವುದರಿಂದ ಅವರ ಅಪ್ಪನನ್ನು ಇಲ್ಲಿಗೇ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ಹೇಳಿದ್ದೆ. ಅವನನ್ನು ದುರಾದೃಷ್ಟವಶಾತ್ ಕೆಂಗೇರಿಗೆ ಟ್ರಾನ್ಸ್‌ಫರ್ ಆಯಿತು. ಬೆಂಗಳೂರು ಸುತ್ತ ಮುತ್ತ ಎಲ್ಲಾದರೂ ಟ್ರಾನ್ಸ್‌ಫರ್ ಮಾಡಿಕೊಡಿ ಎಂದು ನಾನು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೆ. ಟ್ರಾನ್ಸ್‌ಫರ್ ಏನೋ ಆಯಿತು, ಆದರೆ, ಟ್ರಾನ್ಸ್‌ಫರ್ ಮಾಡುವ ಅಧಿಕಾರಿಯ ಉದ್ಧಟತನ ಎಷ್ಟು ? ಚೀಫ್ ಮಿನಿಸ್ಟರ್ ಕಾಗದ ಬರೆದಿದ್ದಾರಾ ಬರೀಲಿ ಎಂದು ಹೇಳೋಣ ಮುಖ್ಯಮಂತ್ರಿಯವರು ಈ ಕೇಸ್‌ನ್ನು ಸಿಂಪೆತಿಟಿಕ್ ಆಗಿ ಕನ್ಸಿಡರ್ ಮಾಡಿ ಎಂದು ಬರೆದಿದ್ದರು. ಚೀಫ್ ಮಿನಿಸ್ಟರ್ ಬರೆದರೆ ಏನಂತೆ ಎನ್ನುವ ಮಾತುಗಳನ್ನು ಆ ಅಧಿಕಾರಿ ಹೇಳುವುದನ್ನು ನನ್ನ ಕಿವಿಯಲ್ಲೇ ಕೇಳಿಸಿಕೊಂಡಿದ್ದೇನೆ. ಅಂಥ ಅಧಿಕಾರಿ ಇರುವುದರಲ್ಲಿ ಪ್ರಯೋಜನ ಇಲ್ಲವೆಂದು ಹೇಳಬೇಕಾಗುತ್ತದೆ. ನಾನು ಅಧಿಕಾರಿಯ ಮಗಳೇ. ಯಾವ ಅಧಿಕಾರಿಗಳ ಮೇಲೆ ಆಕ್ರೋಶ ವ್ಯಕ್ತಪಡಿಸಿ ಅವರುಗಳ

ಮರ್ಯಾದೆ ತೆಗೆಯುವುದು ನನ್ನ ಧೋರಣೆಯಲ್ಲ. ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ಏನು ಪ್ರಯೋಜನ ಈ ಅಧಿಕಾರಿ ಯಾವಾಗಲೂ ಲವಲವಿಕೆಯಾಗಿ ಇರುವುದಿಲ್ಲ. ಎನ್ನುವ ಮಾತನ್ನು ನಾನು ಕೇಳಿದ್ದೇನೆ. ಈ ಅಂದರೆ ಸೆಕ್ರೆಟರಿ ಎಷ್ಟು ಕರಪ್ಟ್ ಇದ್ದಾರೋ ನಮ್ಮ ಹತ್ತಿರ ಯಾರಾದರೂ ಬಂದು ಟ್ರಾನ್ಸ್‌ಫರ್ ಮಾಡಿಸಿಕೊಡಿ ಎಂದು ಕೇಳಿದಾಗ ನಾವು ಹೇಳಿದರೆ ಟ್ರಾನ್ಸ್‌ಫರ್ ಮಾಡುವುದಿಲ್ಲ ಎಂದು ಹೇಳುತ್ತೇವೆ. ಅವರೇ ಟ್ರಾನ್ಸ್‌ಫರ್ ಮಾಡಿಸಿಕೊಂಡು ನಮ್ಮ ನಾಲ್ಕು ಸಾವಿರ ಈ ಕೆಲಸ ಮಾಡಿತು. ನಮ್ಮ ಎರಡು ಸಾವಿರ ಈ ಕೆಲಸ ಮಾಡಿತೆಂದು ನಮ್ಮ ಹತ್ತಿರ ಬಂದು ಹೇಳುತ್ತಾರೆ. ಇಂಥ ಅಧಿಕಾರಿಗಳನ್ನು ಇಟ್ಟುಕೊಂಡು ಏನು ಪ್ರಯೋಜನ ಪ್ರತಿಯೊಬ್ಬ ಡಾಕ್ಟರು ಸಹ ಈ ಅಂಡರ್ ಸೆಕ್ರೆಟರಿ ಮತ್ತು ಡಿ.ಹೆಚ್.ಒ.ಗೆ ಪ್ರತಿ ತಿಂಗಳೂ ಇನ್ನೂರು, ಮುನ್ನೂರು ರೂಪಾಯಿಗಳನ್ನು ಕೊಡಬೇಕಂತೆ ಇದರ ಬಗ್ಗೆ ನಾನು ನಿನ್ನೆ ಎಲ್ಲಾ ಹೇಳಿದೆ. ಆದರೆ ತಾವು ಇರಲಿಲ್ಲ. ಮಾಸ್ಕನ್ನು ಸದನದಲ್ಲಿ ತೋರಿಸಿದ್ದೇನೆ, ಅದಕ್ಕೆ ಎಷ್ಟು ದುಡ್ಡು ಕೊಟ್ಟಿದ್ದಾರೆ ಎಂದು ಹೇಳಿದೆ ಒಂದೊಂದು ಮಾಸ್ಕ್‌ಗೆ ೫೫ ರೂಪಾಯಿ ಬೆಲೆ ಹಾಕಿದ್ದಾರೆ ಬೋರ್ಡ್ ಬರೆಸಿರುವುದನ್ನು ಹೇಳಿದ್ದೇನೆ, ವೇಪ್ರಿನ್ ಮತ್ತು ಬೆಡ್‌ಶಿಟ್‌ಗಳಿಗೆ ೫೦ ರೂಪಾಯಿ ಹಾಕಿದ್ದಾರೆ. ಇದು ಸರಿಯಲ್ಲ ಹೆಲ್ತ್ ಡಿಪಾರ್ಟ್‌ಮೆಂಟ್ ಬಗ್ಗೆ ಉತ್ತರ ಕೊಡುವಾಗ ಮಾನ್ಯ ಕೃಷ್ಣಪ್ಪನವರು ಬಹಳ ದೊಡ್ಡದಾಗಿ ಹೇಳಿ ನಮ್ಮನ್ನು ನಗಿಸಿ ಬಿಟ್ಟು ಹೋದರು. ನಗಿಸುವುದು ಸರಿಯಲ್ಲ, ಹೆಲ್ತ್ ಡಿಪಾರ್ಟ್‌ಮೆಂಟಿನಲ್ಲಿ ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು, ಅಧಿಕಾರಿಗಳ ಮೇಲೆ ನನಗೆ ಕೋಪ ಇಲ್ಲ. ಯಾವ ಅಧಿಕಾರಿಯನ್ನೂ ಹಾಳು ಮಾಡಬೇಕೆನ್ನುವ ಇಚ್ಛೆ ನನಗೆ ಇಲ್ಲ. ಇಲಾಖೆಗಳಲ್ಲಿ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬುದನ್ನು ತಮ್ಮ ನಜರಿಗೆ ತಂದಿದ್ದೇನೆ. ಅದನ್ನು ತಾವು ಸರಿ ಮಾಡಿ. ಇನ್ನು ಎರಡನೆಯದಾಗಿ 'ಟೇಪ್ ಎಪಿಸೋಡ್' ಬೈರೇಗೌಡರು ಟೇಪ್ ಮಾಡಿದ್ದ ಹಗರಣದ ಬಗ್ಗೆ ದೇಸಾಯಿ ಕಮಿಷನ್‌ನವರು ಸರ್ಕಾರಕ್ಕೆ ರಿಪೋರ್ಟನ್ನು ದಿನಾಂಕ ೨೨-೨-೧೯೮೭ರಂದು ಕೊಟ್ಟಿದ್ದಾರೆಂದು ನಮಗೆ ತಿಳಿದು ಬಂದಿದೆ, ಆ ವರದಿಯನ್ನು ಸದನದ ಮುಂದೆ ಇಡಿ, ಇದನ್ನು ನಮ್ಮ ಖರ್ಗೆಯವರು ಡಿಮ್ಯಾಂಡ್ ಮಾಡಿದ್ದಾರೆ. ಮೊದಲು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಅದನ್ನು ನೋಡುತ್ತೇವೆಂದು ಹೇಳಿದ್ದೀರಿ. ೨೨ನೇ ಫೆಬ್ರವರಿ ತಿಂಗಳಿನಿಂದ ಕ್ಯಾಬಿನೆಟ್ ಮೀಟಿಂಗ್ ಸೇರಿಲ್ಲವೆ? ಯಾರ ಮೇಲೆ ತಪ್ಪು ಇದ್ದರೂ ಸರಿ, ಆ ರಿಪೋರ್ಟ್‌ನ್ನು ಸದನದ ಮುಂದೆ ಇಡಿ. ಇವರ ಮೇಲೆ ಇರಲಿ, ಅವರ ಮೇಲೆ ಇರಲಿ. ಡಿಸ್ಕ್ರಿಮಿನೇಷನ್ ಇಲ್ಲದೆ ವರದಿಯನ್ನು ಸಾರ್ವಜನಿಕರ ಮುಂದೆ ಇಡಿ. ಅದರ ಬಗ್ಗೆ ಜನಕ್ಕೆ ಗೊತ್ತಾಗಬೇಕು. ಆಮೇಲೆ ಟೂರಿಸಂ ಬಗ್ಗೆ ತಾವು ಕೆಲವು ವಿಷಯಗಳನ್ನು ಹೇಳಿದ್ದೀರಿ. ತಮಗೆ ಗೊತ್ತಿದ್ದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಗೋಪಾಲಸ್ವಾಮಿ ಬೆಟ್ಟ ಇದೆ. ಈ ಬೆಟ್ಟವನ್ನು ಟೂರಿಸ್ಟ್ ಸೆಂಟರ್ ಆಗಿ ಮಾಡಬೇಕು. ಮಾನ್ಯ ನಜೀರ್ ಸಾಬ್‌ರವರ ಹತ್ತಿರವೂ ಇದನ್ನು ಮಾಡಿ ಎಂದು ಬರೆದುಕೊಂಡೆ ಆದರೆ ಮಾಡಲಿಲ್ಲ. ತಾವು ಸಹ ಗೋಪಾಲಸ್ವಾಮಿ ದೇವಾಸ್ಥಾನಕ್ಕೆ ಹೋಗಿ ಬಂದಿದ್ದೀರಿ ಈ ಬೆಟ್ಟದಲ್ಲಿ ಡಬಲ್ ಗಾರ್ಡನ್ ಬೆಳೆಸುವುದಕ್ಕೂ, ಟ್ರಾಪಿಕಲ್ ಫ್ರೂಟ್ಸ್ ಬೆಳೆಯುವುದಕ್ಕೂ ಒಳ್ಳೆಯ ವಾತಾವರಣ ಇದೆ. ಕೊಲ್ಲೂರಿನಲ್ಲಿ ಇರುವಂಥ ವಾತಾವರಣ ಇಲ್ಲಿ ಇದೆ, ಕಾಫಿ ಬೆಳೆ ಬೆಳೆಯುವುದಕ್ಕೂ ಆಗುತ್ತದೆಂದು ಹೇಳುತ್ತಾರೆ. ಇಂಥ ಅನುಕೂಲ ಇರತಕ್ಕಂಥ ಗೋಪಾಲಸ್ವಾಮಿ ಬೆಟ್ಟವನ್ನು ಟೂರಿಸ್ಟ್ ಸೆಂಟರ್ ಆಗಿ ಮಾಡದೇ ಹೋದರೆ ನನ್ನ ಮನಸ್ಸಿಗೆ ನೋವಾಗುತ್ತದೆ. ಅದನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎರಡನೆಯ ತಾರೀಖಿನಿಂದ ಇಲ್ಲಿ ನಾಮಿನೇಷನ್ ಬಗ್ಗೆ ಚರ್ಚೆ ನಡೆಯುತ್ತಿದೆ ಆದರಿಂದ ಇಲ್ಲಿ ಚರ್ಚೆ ಆಗುವುದಕ್ಕೆ ಮೊದಲೇ ನೀವು ನಾಮಿನೇಷನ್ ಮಾಡುವುದಕ್ಕೆ ಹೋಗಬಾರದು. ಇದೆ ೨೮ನೇ ತಾರೀಖು ಜಿಲ್ಲಾಪರಿಷತ್ ಮೀಟಿಂಗ್ ಇದೆ. ಆದ್ದರಿಂದ ತಾವು ಆ ಸಮಯದಲ್ಲಿ ನಾಮಿನೇಷನ್ ಮಾಡುವ ಸಾಹಾಸಕ್ಕೆ ಹೋಗುವುದಿಲ್ಲವೆಂದು ನಾನು ನಂಬಿಕೊಂಡಿದ್ದೇನೆ. ಮತ್ತೆ ಹೆಣ್ಣುಮಕ್ಕಳ ಅಭಿವೃದ್ಧಿಗೆ ನೀವು ಏನು ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ ಇಲ್ಲಿ ವಿಮನ್ಸ್ ಹಾಸ್ಟಲ್ ಬಗ್ಗೆ ಹೇಳುವುದನ್ನು ಬಿಟ್ಟರೆ ಬೇರೆ ಏನನ್ನೂ ಸಹಾ ಹೇಳಿಲ್ಲ. you cannot keep 51%women idle

ಶ್ರೀ ರಾಮಕೃಷ್ಣ ಹೆಗಡೆ.—ನಾವು ಹೆಣ್ಣುಮಕ್ಕಳ ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡುತ್ತೇವೆಂದು ಅನೌನ್ಸ್ ಮಾಡಿದ್ದೇವೆ. ಈ ವಿಚಾರ ಬರುವ ಕ್ಯಾಬಿನೆಟ್ ಮೀಟಿಂಗ್ ಮುಂದೆ ಬರುತ್ತಿದೆ ಅಲ್ಲಿ ಇದನ್ನು ಅಪ್ರೂವ್ ಮಾಡುತ್ತೇವೆ. ನಾನು ಮೊನ್ನೆ ಕೇರಳಕ್ಕೆ ಹೋಗುವಾಗ ಬಂಡೀಪುರದಲ್ಲಿ ಒಂದು ರಾತ್ರಿ ತಂಗಿದ್ದೆ ಆ ಸಮಯದಲ್ಲಿ ನಾನು ಗೋಪಾಲಸ್ವಾಮಿಬೆಟ್ಟಕ್ಕೂ ಹೋಗಿದ್ದೆ ೧೨ ವರ್ಷಗಳ

ಹಿಂದೆ ಒಂದು ಸಲ ಅಲ್ಲಿಗೆ ಹೋಗಿದ್ದೆ. ಅದು ಒಂದು ಸುಂದರ ಸ್ಥಳ ಅದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆ ಸ್ಥಳದ ಬಗ್ಗೆ ಅವರಿಗೆ ಇರುವಷ್ಟೇ ಪ್ರೀತಿ ನನಗೂ ಸಹ ಇದೆ ಜೊತೆಗೆ ಅದು ಗುಂಡ್ಲುಪೇಟೆಗೆ ಬಹಳ ಹತ್ತಿರದಲ್ಲಿದೆ.

ಶ್ರೀ ಎಸ್. ಬಂಗಾರಪ್ಪ.—ಅದು ಗುಂಡ್ಲುಪೇಟೆಗೆ ಹತ್ತಿರದಲ್ಲಿದೆ ಎಂಬ ಕಾರಣದಿಂದ ಆ ರೀತಿ ಹೇಳುತ್ತಿದ್ದೀರಾ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಆ ಜಾಗ ಸೊರಬಕ್ಕೆ ಹತ್ತಿರದಲ್ಲಿ ಇದ್ದಿದ್ದರೆ ಅವರು ಆ ರೀತಿ ಹೇಳುತ್ತಿರಲಿಲ್ಲ.

ಶ್ರೀ ರಾಮಕೃಷ್ಣಹೆಗಡೆ.—ಆ ಕಾರಣದಿಂದ ನಾನು ಹೇಳುತ್ತಿಲ್ಲ ಅದು ಒಂದು ಅತ್ಯಂತ ಸುಂದರವಾದ ಸ್ಥಳವಾಗಿದೆ ಪಶ್ಚಿಮಘಟ್ಟ ಅಭಿವೃದ್ಧಿಗಾಗಿ ೬೬ ಲಕ್ಷ ರೂಪಾಯಿಗಳ ಒಂದು ಯೋಜನೆ ಇದೆ. ಈ ವರ್ಷ ನಾವು ೨೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಾವು ಪಶ್ಚಿಮಘಟ್ಟ ಯೋಜನೆ ಎಂದು ಏನು ಹೇಳುತ್ತೇವೆ, ಆ ಒಂದು ಯೋಜನೆಯ ಕೆಳಗೆ ಇದು ಸಹ ಬರುತ್ತದೆ. ಈ ಹಣವನ್ನು ಅರಣ್ಯ ಇಲಾಖೆಯವರು ಮತ್ತು ಬೇರೆಬೇರೆ ಇಲಾಖೆಯವರು ಖರ್ಚು ಮಾಡುತ್ತಾರೆಯೇ ಹೊರತು ಬೇರೆ ಯಾರೂ ಖರ್ಚು ಮಾಡುವುದಿಲ್ಲ ಈ ಸ್ಥಳ ಇವರಿಗೆ ಎಷ್ಟು ಆಕರ್ಷಣೀಯವಾಗಿಯೋ ಅಷ್ಟೇ ನನಗೂ ಆಕರ್ಷಣೀಯವಾಗಿ ಕಂಡಿದೆ ಆದ್ದರಿಂದ ಇದನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲಾಗುವುದು.

ಶ್ರೀ ಪಿ. ವೆಂಕಟರಾಮಯ್ಯ.—ನಾನು ನಿನ್ನೆ ದಿವಸ ಇಲ್ಲಿ ಒಂದು ಗಂಭೀರವಾದ ಸಮಸ್ಯೆಯನ್ನು ಎತ್ತಿದ್ದೆ. ಅದಕ್ಕೆ ಉತ್ತರ ಬರಲಿಲ್ಲ ಎಂ.ಎಲ್.ಎ. ಒಬ್ಬರು ಜನತಾ ಮನೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಿಕೊಡಬೇಕೆಂದು ಬಿ.ಡಿ.ಒ. ಅವರಿಗೆ ಪತ್ರ ಬರೆದರೆ ಆ ಅಧಿಕಾರಿ......

ಶ್ರೀ ಜಿ. ಬಸವಣ್ಣಪ್ಪ.—ಆ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ಗೆ ಸರಿಯಾಗಿ ನಡೆದುಕೊಳ್ಳಬೇಕು ಎಂದು ಈಗಾಗಲೇ ಎಚ್ಚರಿಕೆ ಕೊಡಲಾಗಿದೆ. ಶಾಸಕರು ಪತ್ರ ಬರೆಯುವಾಗ ರಾಜಕೀಯ ಮಾಡಬೇಡಿ ಎಂದು ಬರೆದಿದ್ದಾರೆ. ಆದ್ದರಿಂದ ನೀವು ಸಹ ಸರಿಯಾಗಿ ಪತ್ರ ಬರೆಯಬೇಕಾಗಿತ್ತು.

ಶ್ರೀ ಪಿ. ವೆಂಕಟರಾಮಯ್ಯ.—ಅಂದರೆ ನೀವು ಶಾಸಕರಿಗೇ ಎಚ್ಚರಿಕೆ ಕೊಡುತ್ತಿದ್ದೀರಾ ?

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಹಾಗಿದ್ದರೆ ಶಾಸಕರುಗಳಿಗೆ ಒಂದು ಟ್ರೈನಿಂಗ್ ಕ್ಲಾಸ್ ನಡೆಸಿ.

ಶ್ರೀ ಪಿ. ವೆಂಕಟರಾಮಯ್ಯ.—ಇಲ್ಲಿ ಈ ಬಿ.ಡಿ.ಒ. ಶಾಸಕರೊಬ್ಬರಿಗೆ ಯಾವ ರೀತಿ ಪತ್ರ ಬರೆದಿದ್ದಾರೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಮನಿಸಿ ನೋಡಬೇಕು. ಶಾಸಕರು ಪತ್ರ ಬರೆಯುವಾಗ ಪ್ರಾರಂಭದಲ್ಲಿ ಮಾನ್ಯರೇ ಎಂದು ಬರೆದಿದ್ದಾರೆ. ಆದರೆ ಈ ಅಧಿಕಾರಿ ಶಾಸಕರಿಗೆ ಪತ್ರ ಬರೆಯುವಾಗ ಪ್ರಾರಂಭದಲ್ಲಿ ಏನನ್ನೂ ಬರೆಯದೆ ನಮಗೆ ಕಾಗದ ಬರೆಯುವುದಕ್ಕೆ ಬರುವುದಿಲ್ಲ ಪತ್ರ ಬರೆಯುವುದನ್ನು ರೂಢಿಸಿಕೊಳ್ಳಿ ಎಂದು ಬರೆದಿದ್ದಾರೆ. ಇದು ಸರಿಯೇ ? ಈ ಶಾಸಕರು ತಮ್ಮ ಪತ್ರದಲ್ಲಿ ಜನತಾ ಮನೆಗಳನ್ನು ಕಟ್ಟಿದ್ದೀರಿ, ಅದಕ್ಕೆ ಪವರ್ ಕೊಡಿ, ಇಲ್ಲದಿದ್ದರೆ ರಾಜಕೀಯ ಬರುತ್ತದೆ ಎಂದು ಬರೆದಿದ್ದಾರೆ. ಇದಕ್ಕೆ ಉತ್ತರವಾಗಿ ಈ ಅಧಿಕಾರಿ ಒಂದು ರೀತಿಯ ನಿರ್ಲಕ್ಷ್ಯ ಮನೋಭಾವದಿಂದ ಪತ್ರ ಬರೆದಿದ್ದಾರೆ ತಮ್ಮ ವರ್ಗವನ್ನು ಈ ಪತ್ರದ ಮೂಲಕ ತೋರಿಸಿದ್ದಾರೆ. ಇಂತಹ ಅಧಿಕಾರಿಗಳ ಮೇಲೆ ನೀವು ಕ್ರಮ ತೆಗೆದುಕೊಳ್ಳದಿದ್ದರೆ ನಾವೇ ಈ ಅಧಿಕಾರಿಗಳಿಗೆ ಸರಂಡರ್ ಆದಂತೆ ಆಗುತ್ತದೆ.

ಶ್ರೀ ರಾಮಕೃಷ್ಣಹೆಗಡೆ.—ಮಾನ್ಯ ಅಧ್ಯಕ್ಷರೇ, ಶಾಸಕರಾದವರು ಏನೇ ಬರೆದಿರಲಿ, ಆ ಅಧಿಕಾರಿ ಆ ರೀತಿ ಬರೆಯತಕ್ಕದ್ದು ಯೋಗ್ಯವಲ್ಲ ಶಾಸಕರು ಏನಾದರೂ ಒಮ್ಮೆ ತಪ್ಪಾಗಿ ಪತ್ರ ಬರೆದರೂ ಸಹ ಅಧಿಕಾರಿಗಳಾದವರು ತಮ್ಮ ಅಧಿಕಾರದ ಇತಿಮಿತಿಯನ್ನು ನೋಡಿಕೊಂಡು ಉತ್ತರ ಕೊಡಬೇಕು. ಶಾಸಕರು ಜನತೆಯ ಪ್ರತಿನಿಧಿಗಳು ಎಂಬುದನ್ನು ಅಧಿಕಾರಿಗಳು ಮರೆಯಬಾರದು ಶಾಸಕರಿಗೆ ಸಲ್ಲತಕ್ಕಂಥ ಗೌರವವನ್ನು ಇವರು ಸಲ್ಲಿಸಬೇಕು ಈ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಅಧಿಕಾರಿಗೆ ಈ ರೀತಿ ಮಾಡಿದ್ದು ಸರಿಯಲ್ಲ, ಇನ್ನು ಮುಂದೆ ಸರಿಯಾಗಿ ನಡೆದುಕೊಳ್ಳಬೇಕು ಎಂದು ತಿಳಿಸಿದ್ದೇವೆ. ಅವರು ಬರೆದ ಪತ್ರದ ನಕಲು ನನ್ನ ಹತ್ತಿರ ಇದೆ.

ಶ್ರೀ ಪಿ. ವೆಂಕಟರಾಮಯ್ಯ.—ಈ ಅಧಿಕಾರಿಗೆ ಶಿಕ್ಷೆ ಕೊಡಬೇಕು ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಇದು ರಿಪೀಟ್ ಆಗುತ್ತದೆ ಇಲ್ಲದೇ ಹೋದರೆ ಯಾರು 'ಓ' ಎಂದು ಹೇಳುತ್ತಿದ್ದಾರೋ ಅವರು ಬಿಡಿಎ ಅವರನ್ನು ಸರಿ ಮಾಡಿಕೊಂಡಿದ್ದಾರೋ ಏನೋ ಗೊತ್ತಿಲ್ಲ ಅವರಿಗೂ ಈ ರೀತಿ ಆದರೆ ಆಗ ಗೊತ್ತಾಗುತ್ತದೆ ಆ ಮೇಲೆ ನಾನು ಒಂದು ಸಮಸ್ಯೆಯನ್ನು ರೈಸ್ ಮಾಡಿದ್ದೆ, ಅದಕ್ಕೆ ತಾವು ಆನ್ಸರ್ ಮಾಡಲಿಲ್ಲ ಅದೇನೆಂದರೆ ಭಾರತದಲ್ಲಿ ಕರ್ನಾಟಕ ರಾಜ್ಯವು ಜನಸಂಖ್ಯೆಯಲ್ಲಿ ೮ನೇ ಸ್ಥಾನ ವಿಸ್ತೀರ್ಣದಲ್ಲಿ ೭ನೇ ಸ್ಥಾನ ಪಡೆದಿದ್ದಾರೂ ಸಂಪನ್ಮೂಲಗಳ ವರ್ಗಾವಣೆಯಲ್ಲಿ ೧೫ನೇ ಸ್ಥಾನದಲ್ಲಿದೆ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯೋ ಎಕನಾಮಿಕ್ಸ್ ಸ್ಟಡೀಸ್‌ರವರು ಕರ್ನಾಟಕಕ್ಕೆ ಬಹಳ ಮೋಸವಾಗಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಮೊನ್ನೆ ಬಜೆಟ್ ಮೇಲೆ ಮಾತನಾಡುವಾಗ ಕೂಡ ಹೇಳಿದ್ದೆ ೩೦೦, ೪೦೦ ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆಯೆಂದು ಲೆಕ್ಕಾಚಾರ ಹೇಳಿದೆ ಆದ್ದರಿಂದ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಪ್ರೊಟೆಸ್ಟ್ ಮಾಡಬೇಕು. ನಮ್ಮ ಕರ್ನಾಟಕಕ್ಕೆ ಏನು ಬರಬೇಕೋ ಅದನ್ನು ಅವರು ಕ್ಲಿಯರಾಗಿ ಹೇಳಿದ್ದಾರೆ ರಾಜಕೀಯ ದೃಷ್ಟಿಯಿಂದ ಈ ರೀತಿ ಕರ್ನಾಟಕಕ್ಕೆ ಮೋಸವಾಗುತ್ತಿದೆ ಎಂದು ಹೇಳಿದ್ದಾರೆ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಸಮಾಧಾನ ಹೇಳಬೇಕು ಎಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಯಾವ ಒಂದು ಡಾಕ್ಯುಮೆಂಟನ್ನು ಅವರು ಹಿಡಿದು ಕೊಂಡಿದ್ದಾರೋ ಅದರಲ್ಲಿರತಕ್ಕಂಥ ಮಾಹಿತಿ, ಅಂಕಿ ಸಂಖ್ಯೆ ನಮ್ಮ ಬಜೆಟ್‌ನಲ್ಲಿ ತೆಗೆದುಕೊಂಡದ್ದು ನಾವು ಕೊಟ್ಟಿದ್ದೇವೆ ಅದರಲ್ಲಿ, ಡಿಸ್ಕ್ರಿಷಿನರಿ ಗ್ರಾಂಟ್ ಕೊಡುವುದರಲ್ಲಿ ಎಷ್ಟು ವ್ಯತ್ಯಾಸವಾಗುತ್ತದೆ, ಮತ್ತು ಕೆಲವು ರಾಜ್ಯಗಳಿಗೆ ಏನು ಅನ್ಯಾಯವಾಗುತ್ತದೆ ಎನ್ನುವುದನ್ನು ನಾನು ಹೇಳಿದ್ದೇನೆ ಇದು ಹೊಸ ವಿಚಾರ ಅಲ್ಲ. ನಿನ್ನೆ ಕೌನ್ಸಿಲ್‌ನಲ್ಲಿ ಈ ಮಾತನ್ನು ಹೇಳಿದ್ದೇನೆ ಫೈನಾನ್ಸ್ ಕಮಿಷನ್‌ನವರು ಮತ್ತು ಯೋಜನಾ ಆಯೋಗದವರು ಬೇರೆ ಬೇರೆ ರಾಜ್ಯಗಳಿಗೆ ನಾನ್‌ಪ್ಲಾನ್ ಮತ್ತು ಪ್ಲಾನ್ ಅಸಿಸ್ಟೆನ್ಸ್‌ನ್ನು ಕೊಡತಕ್ಕಂಥ ವಿಚಾರದಲ್ಲಿ ಹೊಸ ಗೈಡ್‌ಲೈನ್ಸ್ ಹೊಸ ಕ್ರೈಟೀರಿಯ ಹಾಕಿಕೊಳ್ಳಬೇಕು, ಈಗಿರತಕ್ಕಂಥ ನಾರ್ಮ್ಸ್ ಸರಿಯಿಲ್ಲ ಅದರಲ್ಲಿ ಕೆಲವೇ ರಾಜ್ಯಗಳಿಗೆ ಅನುಕೂಲವಾಗತಕ್ಕಂಥ ನಾರ್ಮ್ಸ್ ಇದೆ. ಅದನ್ನು ಬದಲಾಯಿಸಬೇಕು ಎಂದು ನಾನು ಆಗಲೇ ಹೇಳಿದ್ದೇನೆ ನಮ್ಮ ದುರ್ದೈವ, ಕಳೆದ ೧೫ ವರ್ಷಗಳಿಂದಲೂ ಈ ಒಂದು ವಿಚಾರದಲ್ಲಿ ನಮಗೆ ಅನ್ಯಾಯವಾಗುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಸರ್ಕಾರೀ ಉನ್ನತಾಧಿಕಾರಿಗಳ ಬಗ್ಗೆ ಹೇಳಿದ್ದಾರೆ. ಇವರು ಬೇರೆ ರಾಜ್ಯಗಳಿಗಿಂತ ಉತ್ತಮವಾದ ಕೆಲಸ ಮಾಡುತ್ತಾರೆ ಎಂದು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ ಬೇರೆ ರಾಜ್ಯಗಳಿಗಿಂತ ಇಲ್ಲಿ ಕೇಳಬಾರದು ಎಂಬ ದೃಷ್ಟಿಯಿಂದ ಕೆಲವು ನಿರ್ದಿಷ್ಟವಾದ ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೊದಲನೆಯದು ಕುಲಕರ್ಣಿ ಅಂದರೆ ಸೆಕ್ರೆಟರಿ ಎನ್ನುವವರೊಬ್ಬರು ಸರಂಡರ್ ಲೀವನ್ನು ಎರಡು ಸಾರಿ ಪಡೆದಿದ್ದಾರೆ ಕಣ್ಣುಮುಚ್ಚಿಕೊಂಡು ಉನ್ನತಾಧಿಕಾರಿಗಳು ಈ ರೀತಿ ಗೊತ್ತಿಲ್ಲದೆ ಪಡೆದುಕೊಂಡ ಸಂಗತಿಯಲ್ಲಿ ವಾಪಸ್ ಕಟ್ಟಿಸಿಕೊಂಡರೂ ಆಗುವುದಿಲ್ಲ. ಇಂಥಾದ್ದರ ಬಗ್ಗೆ ಸುಪ್ರೀಂಕೋರ್ಟ್ ಡಿಷಿಷನ್ ಇದೆ ಅದರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಬೇಕಾಗುತ್ತದೆ. ಆದುದರಿಂದ ಅವರಿಂದ ಹಣವನ್ನು ವಾಪಸ್ ಕಟ್ಟಿಸಿಕೊಳ್ಳುವುದಿಲ್ಲ ವಾರ್ನ್ ಮಾಡುವುದಿಲ್ಲ ಅವರ ಮೇಲೆ ಸರಿಯಾದಂಥ ಕ್ರಮ ತೆಗೆದುಕೊಳ್ಳದೇ ಹೋದರೆ ಎಷ್ಟರ ಮಟ್ಟಿಗೆ ಇದು ಸರಿಹೋಗುತ್ತದೆ ? ಅಂತಹವರನ್ನು ಉಳಿಸಿಕೊಂಡು ಹೋದರೆ ಸರ್ಕಾರಕ್ಕೆ ಗೌರವ ಬರುತ್ತದೆಯೇ ? ನಾನು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎನ್ನುವುದನ್ನು ದಯಮಾಡಿ ತಿಳಿಸಬೇಕು ಮತ್ತೆ ಹಲ್ಲುಪುಡಿ ಬಗ್ಗೆ ನಾನು ಹೇಳಿದ್ದೆ. ರೈತರಿಗೆ ಸಂಬಂಧಪಟ್ಟಹಾಗೆ ಹಲ್ಲುಪುಡಿ ಬಗ್ಗೆ ಹೇಳಿದ್ದೆ ಇದರ ಬಗ್ಗೆ ವಾಣಿಜ್ಯ ತೆರಿಗೆ ಬೇರೆ ರಾಜ್ಯಗಳಲ್ಲಿ ೭-೮ ಪರ್ಸೆಂಟ್ ಇದೆ ಇಲ್ಲಿ ೧೩ ಪರ್ಸೆಂಟ್ ಬೀಳುತ್ತದೆ ಇದರ ಬಗ್ಗೆ ಹೇಳಬೇಕು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೆ ಮಾನ್ಯ ಮುಖ್ಯ ಮಂತ್ರಿಗಳ ಸಬ್ಜೆಕ್ಟ್ ಮೇಲೆ ಭಾಷಣ ಮಾಡುವಂಥ ಛಾನ್ಸ್ ಸಿಗಲಿಲ್ಲ ಒಂದು ವಿಷಯದ ಬಗ್ಗೆ ನಾನು ಹೇಳುತ್ತೇನೆ ಗುಲ್ಬರ್ಗದಲ್ಲಿ ನಾವು ಶಾಸಕರು ಕೂಡಿ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಷನ್, ಒಂದು ಸೊಸೈಟಿ ಮಾಡಿದ್ದೇವೆ ಈಗಾಗಲೇ ಸರ್ಕಾರದವರು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿ ಸ್ಟೂಡೆಂಟ್ಸ್ ಒಳ್ಳೆಯ ಕಲಾ

ಪ್ರದರ್ಶನವನ್ನು ಮಾಡುತ್ತಾ ಇದ್ದಾರೆ ಸುಮಾರು ೪೦-೫೦ ಲಕ್ಷದ ಬಿಲ್ಡಿಂಗ್ ಕಟ್ಟುತ್ತಾ ಇದ್ದಾರೆ. ಉತ್ತರ ಕರ್ನಾಟಕದಲ್ಲಿ ಆ ಒಂದು ಇನ್‌ಸ್ಟಿಟ್ಯೂಷನ್ ಇದೆ ಮತ್ತು ಬೆಂಗಳೂರಿನಲ್ಲಿ ಒಂದು ಇದೆ. ಇಲ್ಲಿದ್ದರೂ ತಾವು ೧೦ ಲಕ್ಷ ಗ್ರಾಂಟನ್ನು ಕೊಟ್ಟಿದ್ದೀರಿ ಆ ಇನ್‌ಸ್ಟಿಟ್ಯೂಷನ್‌ಗೆ ಕೇಳಿದಾಗ ಅಲ್ಲಿ ಇನ್ನೂ ಗ್ರಾಂಟ್ ಬಂದಿಲ್ಲ ಎಂದು ಹೇಳಿದರು ದಯವಿಟ್ಟು ಈ ವರ್ಷ ೫-೧೦ ಲಕ್ಷ ಗ್ರಾಂಟ್ ಕೊಟ್ಟರೆ ಉತ್ತರ ಕರ್ನಾಟಕಕ್ಕೆ ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ ಎನ್ನುವುದು ನನ್ನ ಮನವಿ.

SRI MOHAMMED LIQUDDIN BURANUDDIN.—I woulu like to know from the Hon. Chief Minister as to what action is taken on the report of the Minorities Commission. What action the Government is going to take on the Hundekar Committee report pertaining to the re-organisation of the district ? Whether the Hundekar Committee recommendation has been accepted and whether the Government is taking any action for the implementation of that report ? What action Government is going to take on the Goodwala Commission report ?

ಶ್ರೀ ರಾಮಕೃಷ್ಣ ಹೆಗಡೆ.—ಈ ಎರಡು ಕಮೀಷನ್ ವರದಿಗಳ ಮೇಲೆ ಸಧ್ಯದಲ್ಲಿಯೇ ಒಂದು ನಿರ್ಣಯ ಮಾಡುವವರಿದ್ದೇವೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆ ಮುಕ್ತಾಯವಾಯಿತು......

(ಗೊಂದಲ)

ಅಧ್ಯಕ್ಷರು —೨೮ ಜನ ಮಾತನಾಡಿದ್ದಾರೆ. ಪ್ರಮುಖರು ಮಾತನಾಡಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ ಸ್ವಾಮಿ, ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ರಾಮಪ್ಪ.—ಪಾಯಿಂಟ್ ಆಫ್ ಆರ್ಡರ್, ಪ್ರಮುಖರು ಎಂದರೆ ಯಾರು ?

ಅಧ್ಯಕ್ಷರು.—ವಿರೋಧ ಪಕ್ಷದ ನಾಯಕರು, ಸಿ.ಪಿ.ಐ. ನಾಯಕರು, ಸಿ.ಪಿ.ಎಂ. ನಾಯಕರು.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ನಾನು ಕೇಳಿದ ಕ್ಲಾರಿಫಿಕೇಷನ್‌ಗೆ ತಮ್ಮ ಉತ್ತರ ಬರಲಿಲ್ಲ.

ಶ್ರೀ ಎಂ. ರಾಮಪ್ಪ.—ಪ್ರಮುಖರು ಅಂದರೆ ಯಾರು ಯಾರು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು.—ಪ್ರಮುಖರು ಅಂದರೆ ಪಕ್ಷದ ನಾಯಕರು ಅವರಿಗೆ ಅವಕಾಶ ಕೊಡಬೇಕಾದದ್ದು ನನ್ನ ಕರ್ತವ್ಯ. ಎಲ್ಲರಿಗೂ ಕೊಡಬೇಕೆಂದರೆ ಈ ಕಡೆ ಇರುವವರಿಗೂ ಕೊಡಬೇಕಾಗುತ್ತದೆ. ಮಾನ್ಯ ಪಾಟೀಲರೇ ಈ ವಿಷಯವನ್ನು ಮುಗಿಸೋಣ ಎಂದರೆ ಹೀಗೆ ಮಾಡಿದರೆ ಹೇಗೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ನನ್ನ ಕ್ಲಾರಿಫೀಕೇಷನ್‌ಗೆ ಉತ್ತರ ಕೊಡಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಸದಸ್ಯರು ಕುಲಕರ್ಣಿಯವರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದರ ವಿವರ ತರಿಸಿಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಗಲಾಟೆಯಲ್ಲಿ ಶಾಣಪ್ಪನವರು ಏನು ಹೇಳಿದರು ಎನ್ನುವುದು ಕೇಳಲಿಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ಗುಲ್ಬರ್ಗದಲ್ಲಿರುವಂಥ ಒಂದು ಫೈನ್ ಆರ್ಟ್ಸ್ ಸಂಸ್ಥೆಗೆ ೪೦-೫೦ ಲಕ್ಷ ರೂಪಾಯಿಗಳನ್ನು ಕೊಡಿಸುತ್ತೇವೆಂದು ಹೇಳಿದ್ದಿರಿ. ಈಗಾಗಲೇ ಬೆಂಗಳೂರಿನಲ್ಲಿರುವಂಥ ಸೊಸೈಟಿಗೆ ಕೊಟ್ಟಿದ್ದೀರಿ. ಹಿಂದೆ ೧೯೮೩ರಲ್ಲ ೫ ಲಕ್ಷ ಕೊಟ್ಟಿದ್ದೀರಿ. ಈ ವರ್ಷ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಕೊಡುತ್ತೇವೆಂದು ಹೇಳಿದ್ದೇನೆ.

SMT. MUKTHARUNNISA.— Sir, when the incident occurred in Mysore our Hon'ble Chief Minister visited there and we are very happy. At that time Hon'ble Cheif Minister declared judicial enquiry into the incident but so far nothing has happened. Secondly, our Hon'ble Chief Minister just said that there was a meeting held regarding reopening of K. R. Mills. I was not present but my only request which is lying since 3 years, the workers are put to great hardship. Therefore, I urge upon the Government to take over the mill as has been done in the case of Mahadeswara Textile Mills, Hubli.

೧೨–೧೦ ಪಿ.ಎಂ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್,......

(ಗೊಂದಲ)

ಶ್ರೀಮತಿ ಮುಕ್ತರುನ್ನೀಸಾ.—ಅಧ್ಯಕ್ಷರೆ, ನನಗೆ ಉತ್ತರ ಬರಲಿಲ್ಲ, ನಮ್ಮನ್ನು ನೋಡಿದ ತಕ್ಷಣ ಖುಷಿ ಅವರಿಗೆ......

(ಗೊಂದಲ)

ಶ್ರೀ ಜೆ. ಹೆಚ್. ಪಟೇಲ್.—ಕೆ. ಆರ್. ಮಿಲ್ ಬಗ್ಗೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಇದು ಸರ್ಕಾರದ ನೇರ ಹೊಣೆ ಅಲ್ಲದಿದ್ದರೂ, ಖಾಸಗಿ ಕಂಪನಿ ಆದಾಗ್ಯೂ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರ ಹಿತದೃಷ್ಟಿಯಿಂದ ನಾವು ದೂರ ಹೋಗಬೇಕೋ ಅಷ್ಟು ದೂರ ಹೋಗಿ ಐ.ಡಿ.ಬಿ.ಐ. ಸಂಸ್ಥೆಯಿಂದ ಹಣಕಾಸು ಸವಲತ್ತು ಕೊಡಿಸಲಿಕ್ಕೆ ತಯಾರಿದ್ದರೂ ಈಗ ಇರತಕ್ಕ ಕಂಪನಿ ಮಾಲೀಕರು ಮುಂದೆ ಬರಲಿಲ್ಲ. ಹಲವಾರು ಸಮಸ್ಯೆಗಳನ್ನು ಸರ್ಕಾರದ ಮುಂದೆ ಅವರು ಇಟ್ಟರು, ಅವುಗಳನ್ನು ಪರಿಹರಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡಿದರೂ ಅವರು ಮುಂದೆ ಬರಲಿಲ್ಲ. ಬೇರೆ ಯಾರಾದರೂ ಇದ್ದಾರೆಯೋ ಎಂದು ಹುಡುಕಿಸಿದಾಗ ಬಿನ್ನಿ ಕಂಪನಿ ಮಾಲೀಕರು ಇದನ್ನು ನಡೆಸಲಿಕ್ಕೆ ಉತ್ಸುಕರಾಗಿದ್ದಾರೆಂದು ತಿಳಿಯಿತು. ಅವರದು ಕೆಲವೊಂದು ಷರತ್ತುಗಳು ಇದೆ. ಆ ಷರತ್ತುಗಳ ಬಗ್ಗೆ ಜಾಗರೂಕತೆಯಿಂದ ನೋಡಿ ಮಾಡಬೇಕಾಗುತ್ತದೆ. ಈಗ ಇರತಕ್ಕ ಮಾಲೀಕರು ಮತ್ತು ಅವರಿಗೂ ಸೇರಿಸಿ ಏನಾದರೂ ಮಾಡಿ ಪರಿಹಾರ ಕಂಡು ಹಿಡಿಯಲಿಕ್ಕೆ ಸರ್ಕಾರ ಸಂಪೂರ್ಣ ಪ್ರಯತ್ನವನ್ನು ನಡೆಸುತ್ತಿದೆ. ಮಾನ್ಯ ಸದಸ್ಯರು ಸರ್ಕಾರದ ಮೇಲೆ ಹೇಳಲಿಕ್ಕೂ ಒಂದು ಮಿತಿ ಇರಬೇಕು. ಖಾಸಗಿ ಕಂಪನಿಯವರನ್ನು ನಾವು ವಾರಂಟ್ ಕೊಟ್ಟು ಹಿಡಿದು ತರಿಸಲಿಕ್ಕೆ ಬರುವುದಿಲ್ಲ. ಖಾಸಗಿ ಕಂಪನಿಯ ಮೇಲೆ ಎಷ್ಟು ಒತ್ತಡ ತರಬೇಕೋ ಅಷ್ಟು ತಂದಿದ್ದೇವೆ.

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ.—ಖಾಸಗೀ ಕಂಪನಿಯ ಮೇಲೆ ಒತ್ತಡ ತರಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.— ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್, ಮಾನ್ಯ ನಾರಾಯಣ್‌ಕುಮಾರ್ ಅವರು ಮಧ್ಯೆ ಮಾತನಾಡಬಾರದು ಎಂದು ತಿಳಿಸಬೇಕು.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾತನಾಡುವಾಗ ಅವರು ಗಂಭೀರವಾಗಿ ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಕೆ. ಎಸ್. ನಾಗರತ್ನಮ್ಮ.—ಅದನ್ನು ಮುಂಚ್ಚಿಸಿದರೆ, ಅಲ್ಲಿ ಕೆಲಸ ಮಾಡತಕ್ಕವರಿಗೆ ಏನೇನು ಪರಿಹಾರ ಸಿಕ್ಕಬೇಕೋ ಅದಾದರೂ ಸಿಕ್ಕುತ್ತದೆ. ಅವರ ಕೈಯಲ್ಲಿ ಆಗದೇಹೋದರೆ ಅದನ್ನು ಕ್ಲೋಸ್ ಮಾಡಿಸಿ.

ಶ್ರೀ ಜೆ. ಹೆಚ್. ಪಟೇಲ್.—ಆ ಕಂಪನಿಯನ್ನು ಕ್ಲೋಸ್ ಮಾಡಲಿಕ್ಕೆ ನಮ್ಮ ಕೈಯಲ್ಲಿ ಇಲ್ಲ. ಅವರು ಕ್ಲೋಸ್ ಮಾಡಿದರೆ ಅಲ್ಲಿರತಕ್ಕ ನೌಕರರಿಗಾದರೂ ಪರಿಹಾರ ಸಿಕ್ಕುತ್ತದೆ. ಕ್ಲೋಸ್ ಮಾಡಿಸಲಿಕ್ಕೆ ಅವರು ಸಿಕ್ಕುತ್ತಿಲ್ಲ. ಸರ್ಕಾರದ ವತಿಯಿಂದ ನಡೆಸಲಿಕ್ಕೆ ಸರ್ಕಾರದ ವತಿಯಿಂದ ಸಹಾಯ ಮಾಡಲಿಕ್ಕೆ ನಾವು ಮುಂದೆ ಬಂದರೂ ಅವರು ಬರುತ್ತಿಲ್ಲ. ಹಲವಾರು ಮಾರ್ಗಗಳಿಂದ ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಪ್ರಯತ್ನ ಮಾಡುತ್ತೇವೆ. ಬಿನ್ನಿ ಕಂಪನಿಯವರು ಇದನ್ನು ನಡೆಸಲಿಕ್ಕೆ ಮುಂದೆ ಬಂದಿದ್ದಾರೆ ಅವರ ಜೊತೆ ಮಾತುಕತೆ ನಡೆಸುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಖಾದಿ ಗ್ರಾಮೋದ್ಯೋಗ ಮಂಡಲಿಯಿಂದ ಹಣ ಸಹಾಯವನ್ನು ಪಡೆದು ಕೆಲವು ಹಳ್ಳಿಗಳಲ್ಲಿ ಈ ಕೊಟ್ಟಣದ ಅಕ್ಕಿಯನ್ನು ಮಾಡುತ್ತಿದ್ದಾರೆ. ಇದು ಗೃಹ ಕೈಗಾರಿಕೆಗೆ ಸಂಬಂಧಪಟ್ಟದ್ದುದು. ಇವೊತ್ತು ಗೃಹ ಕೈಗಾರಿಕೆಗೆ ಉತ್ತೇಜನ ಕೊಡಬೇಕೆನ್ನುವುದು ಮೂಲ ಉದ್ದೇಶ ಇದೆ. ಇವೊತ್ತು ಯಾರು ಖಾದಿ ಗ್ರಾಮೋದ್ಯೋಗ ಇಲಾಖೆಯಿಂದ ಹಣ ಸಹಾಯ ಪಡೆದು ಕೊಟ್ಟಣದ ಅಕ್ಕಿ ಮಾರತಕ್ಕವರಿದ್ದಾರೋ ಅವರ ಮೇಲೆ ಭತ್ತ ಕೊಳ್ಳುವಾಗ ಒಂದೂ ಕಾಲು ಪರ್ಸೆಂಟ್ ಟ್ಯಾಕ್ಸ್ ಹಾಕಿರುವುದು ಇದೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೆ. ಇವೊತ್ತು ಗ್ರಾಮಗಳಲ್ಲಿ ಉದ್ಯೋಗವನ್ನು ಆಧಾರವಾಗಿಟ್ಟುಕೊಂಡು ಗ್ರಾಮಗಳು ಬೆಳೆಯಬೇಕಾಗುತ್ತದೆ. ಗ್ರಾಮಗಳಲ್ಲಿ ಉದ್ಯೋಗ ಸಿಕ್ಕಬೇಕೆಂದು ಹೇಳುತ್ತೇವೆ. ಇದು ಮಹಿಳೆಯರು ಮಾಡತಕ್ಕ ಕೆಲಸ ಇವರಿಗೆ ತೊಂದರೆಯಾಗುತ್ತಿದೆ. ಗೃಹ ಕೈಗಾರಿಕೆಗಳಿಗೆ ಉತ್ತೇಜನ ಕೊಡಬೇಕು ಎಂದು ಹೇಳುವುದು ಇದೆ. ಇವೊತ್ತು ಅವರಿಗೆ ಒಂದೂಕಾಲು ಪರ್ಸೆಂಟ್ ಟ್ಯಾಕ್ಸ್ ಹಾಕುವುದು ಏನು ಇದೆ ಅದು ಸರಿಯಲ್ಲ. ಖಾದಿ ಗ್ರಾಮೋದ್ಯೋಗದಿಂದ ಹಣ ಸಹಾಯ ತೆಗೆದುಕೊಂಡು ಈ ಕೆಲಸ ಮಾಡತಕ್ಕವರಿಗೆ ಈ ಟ್ಯಾಕ್ಸ್ ವಿನಾಯ್ತಿ ಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಕೇಳಿದ ವಿಚಾರಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಕ್ಲಾರಿಫಿಕೇಷನ್ ಕೇಳಿಯೇ ಇಲ್ಲ.

ಅಧ್ಯಕ್ಷರು. ಈಗ ಟೈಂ ಎಷ್ಟಾಗಿದೆ ಎನ್ನುವುದು ನಿಮಗೆ ಗೊತ್ತಾಗುವುದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ಮಾನ್ಯ ವಿರೋಧಪಕ್ಷದ ನಾಯಕಿಯವರು ಕೇಳಿದಂಥ ಪ್ರಶ್ನೆ ಅದು. ಅದು ತಮ್ಮ ಗಮನಕ್ಕೆ ಬರಲಿಲ್ಲವೆಂದು ಕಾಣಿಸುತ್ತದೆ. ೨೮ನೇ ತಾರೀಖು ಜಿಲ್ಲಾ ಪರಿಷತ್ ಸದಸ್ಯರ ಮೀಟಿಂಗ್‌ನ್ನು ಇವರು ಕರೆದಿದ್ದಾರೆ. ಅವೊತ್ತಿನ ದಿವಸ ಈ ನಾಮಿನೇಷನ್ ಬಗ್ಗೆ ಇವರು ಯೋಚನೆ ಮಾಡುವುದಕ್ಕೆ ಅವಕಾಶ ಇದೆ. ಆದರೆ ನಾಮಿನೇಷನ್‌ಗೆ ಸಂಬಂಧಪಟ್ಟಂತೆ ಈ ಸದನದಲ್ಲಿ ನಾವು ಬರುವ ೨ನೇ ತಾರೀಖು ಚರ್ಚೆಯನ್ನು ಇಟ್ಟುಕೊಂಡಿದ್ದೇವೆ. ಆದ್ದರಿಂದ ನನ್ನ ಒಂದು ಸಲಹೆ ಏನೆಂದರೆ, ೨ನೇ ತಾರೀಖು ನಾವು ಇಲ್ಲಿ ಏನು ಚರ್ಚೆಯನ್ನು ಇಟ್ಟುಕೊಂಡಿದ್ದೇವೆ ಆ ಚರ್ಚೆ ಆಗುವವರೆಗೂ ಜಿಲ್ಲಾ ಪರಿಷತ್ ಸದಸ್ಯರ ಮೀಟಿಂಗ್‌ನ್ನು ಮುಂದಕ್ಕೆ ಹಾಕಬೇಕು. ಇಲ್ಲದಿದ್ದರೆ ನಾವು ೨ನೇ ತಾರೀಖು ನಾಮಿನೇಷನ್ ಬಗ್ಗೆ ಮಾತನಾಡುವುದು ಅಥವಾ ಅಲ್ಲಿ ಅವರು ಸದಸ್ಯರನ್ನು ನಾಮಿನೇಟ್ ಮಾಡಿಕೊಳ್ಳುವುದು ಇದೆಲ್ಲಾ ಆದರೆ ಅದು ಸರಿ ಹೋಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈ ಅಧಿಕಾರ ಜಿಲ್ಲಾ ಪರಿಷತ್ತಿಗೆ ಕಾಯಿದೆಯ ಪ್ರಕಾರ ಇದೆ. ನಾವು ಇದರಲ್ಲಿ ಕೈ ಹಾಕುವುದಕ್ಕೆ ಬರುತ್ತದೆಯೋ ಇಲ್ಲವೋ ಎಂಬುದನ್ನು ಕಾಯಿದೆ ತಜ್ಞರನ್ನು ಕೇಳಿ ನಂತರ ಒಂದು ನಿರ್ಣಯಕ್ಕೆ ಬರುತ್ತೇವೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ರೂಲ್ಸ್‌ನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ರೂಲ್ಸ್‌ನ್ನು ತಿದ್ದುಪಡಿ ಮಾಡಿದ್ದು ಮುಗಿದು ಹೋಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇನ್ನೂ ನೀವು ನೋಟಿಫಿಕೇಷನ್ ಹೊರಡಿಸಬೇಕು, ಆಬ್ಜೆಕ್ಷನ್ಸ್ ಕಾಲ್‌ಫರ್ ಮಾಡಬೇಕು, ಇದಕ್ಕೆಲ್ಲಾ ಇನ್ನೂ ಟೈಂ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ, ಇಲ್ಲ, ಟೈಂ ಮುಗಿದು ಹೋಗಿದೆ. ಪ್ರಿಲಿಮಿನರಿ ನೋಟಿಫಿಕೇಷನ್ ಇಷ್ಯೂ ಆಗಿದೆ, ಆಬ್ಜೆಕ್ಷನ್ಸ್ ಕಾಲ್‌ಫರ್ ಮಾಡಿದ್ದೂ ಆಗಿದೆ, ನಂತರ ಅದಕ್ಕೆ ಆಬ್ಜೆಕ್ಷನ್ನೂ ಬಂದಿದೆ...

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಬೇಡಿಕೆ ಸಂಖ್ಯೆ ೧೧, ೧೨ ೧೩, ೧೬, ೧೭...

(ಗೊಂದಲ)

(ಸುಮಾರು ೧೦-೧೨ ಜನ ಸದಸ್ಯರು ವಿರೋಧಪಕ್ಷದ ಕಡೆಯಿಂದ ಒಟ್ಟಿಗೇ ನಿಂತು ಮಾತನಾಡ ತೊಡಗಿದರು.)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ —ಈ ರೂಲ್ಸ್‌ಗೆ ನಾವು ಆಬ್ಜೆಕ್ಷನ್ಸ್ ಫೈಲ್ ಮಾಡಿದ್ದೇವೆ. ನಾವು ಹೇಳುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು...

ಶ್ರೀ ಎಸ್. ಬಂಗಾರಪ್ಪ.—ಇದು ಬಹಳ ಸೀರಿಯಸ್ ಮ್ಯಾಟರ್. ನೀವು ಅಧ್ಯಕ್ಷರಾಗಿದ್ದು ಕೊಂಡು ಡಿಮ್ಯಾಂಡ್ಸ್‌ನ್ನು ಬಡಬಡ ಅಂತ ಮತಕ್ಕೆ ಹಾಕಿದರೆ ಹೇಗೆ ? ಇದರ ಬಗ್ಗೆ ಇಲ್ಲಿ ನಾವು ಧರಣಿ ಯನ್ನು ಮಾಡಿದ್ದೂ ತಮಗೆ ಗೊತ್ತಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದಕ್ಕೋಸ್ಕರವೇ ನಾವು ಇಲ್ಲಿ ಧರಣಿ ಮಾಡಿದ್ದೇವೆ, ಅಷ್ಟೊಂದು ಹೋರಾಟ ಮಾಡಿದ್ದೇವೆ....

ಶ್ರೀ ಎಸ್. ಬಂಗಾರಪ್ಪ.—ಅವತ್ತು ನಾವು ಅಷ್ಟೊಂದು ಕಷ್ಟಪಟ್ಟು ಹೋರಾಟ ಮಾಡಿದ್ದೇವೆ. What is this ?

ಅಧ್ಯಕ್ಷರು.—ವಾಟ್ ಈಸ್ ದಿಸ್ ಅಂದರೆ ಏನರ್ಥ ? ತಾವು ದಯವಿಟ್ಟು ಕುಳಿತುಕೊಳ್ಳಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಾಮಿನೇಷನ್‌ನ್ನು ಮಾಡತಕ್ಕದ್ದು ಸರ್ಕಾರ ಅಲ್ಲ. ಜಿಲ್ಲಾ ಪರಿಷತ್ತಿಗೆ ಈ ಮನೆಯಲ್ಲಿ ಪಾಸ್ ಮಾಡಿದಂಥ ಮಸೂದೆಯ ಪ್ರಕಾರ ಅಧಿಕಾರವನ್ನು ಕೊಟ್ಟಿದೆ. ಆದ್ದರಿಂದ ನೀವು ಇಂಥ ದಿವಸವೇ ಮಾಡಿ, ಅಥವಾ ಇಂಥ ದಿವಸ ಮಾಡಬೇಡಿ ಎಂದು ನಾವು ಅವರಿಗೆ ಹೇಳುವುದಕ್ಕೆ ಮೊದಲಾಗಿ ನಮ್ಮ ಅಧಿಕಾರ ಇದೆಯೋ ? ಇಲ್ಲವೇ ? ಎಂದು ಲಾ ಸೆಕ್ರೆಟರಿಯವರನ್ನೂ ಮತ್ತು ಅಡ್ವೋಕೇಟ್ ಜನರಲ್‌ರವರನ್ನೂ ಕರೆಯಿಸಿ ಕೊಂಡು ಕೇಳುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಹೇಳುವುದು ಕಾನೂನು ಪ್ರಕಾರ ಸರಿ. ಇಲ್ಲಿ ಪ್ರಶ್ನೆ ಏನಿದೆ ಎಂದರೆ, ಪ್ರಮುಖವಾದ ೨ ವಿಚಾರಗಳಿವೆ. ಈ ಸದನದಲ್ಲಿ ಇಲ್ಲದಿರತಕ್ಕ ವಿಚಾರವನ್ನು ನಾವು ಕೇಳುವುದಿಲ್ಲ. ರಿವೈಸ್ಡ್ ರೂಲ್ಸ್‌ನ್ನು ತಯಾರು ಮಾಡಿದ್ದೀರಿ. ಬ್ಯಾಕ್‌ವರ್ಡ್‌ಕ್ಲಾಸ್ ಯಾರು ಯಾರು ಎಂದು ಪ್ರಿಸ್ಕ್ರೈಬ್ ಮಾಡಿದ್ದೀರಿ. ನೀವು ರೂಲ್ಸ್‌ನ್ನು ಪ್ಲೇಸ್ ಮಾಡಿದ್ದೀರಿ. ಅದಕ್ಕೆ ಮಾನ್ಯ ಕೆ. ಹೆಚ್. ಪಾಟೀಲ್‌ರವರು ಆಬ್ಜೆಕ್ಷನ್ಸ್ ಫೈಲ್ ಮಾಡಿದ್ದಾರೆ. ಈಗ ಅದು ಈ ಸದನದ ಮುಂದಿದೆ...

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ರೂಲ್ಸ್ ಫ್ರೇಂ ಆಗಿದೆ. ೩೦ ದಿವಸದೊಳಗಾಗಿ ನಾವು ಆಬ್ಜೆಕ್ಷನ್ಸ್‌ನ್ನು ಫೈಲ್ ಮಾಡಿದ್ದೇವೆ. ಆದ್ದರಿಂದ ಡ್ರಾಫ್ಟ್ ನೋಟಿಫಿಕೇಷನ್ ಫೈನಲೈಸ್ ಆಗಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.— ಈಗ ಸೆಷನ್ ನಡೆಯದೆ ಇದ್ದರೆ, ಈ ಸದನದ ನಿಯಮದ ಪ್ರಕಾರ ಆಕ್ಷೇಪಣೆ ಸಲ್ಲಿಸದೆ ಇದ್ದಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳತಕ್ಕಂಥದ್ದು ಸರಿ. ಈಗ we have filed objections... ಎರಡನೆಯದಾಗಿ, ಈ ಬಗ್ಗೆ ಸದನದ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ನಾಮಿನೇಷನ್ ಬಗ್ಗೆ

ಚರ್ಚೆ ಮಾಡಬೇಕೆಂದು, ತಾವು ಒಪ್ಪಿದ್ದೀರಿ. ಸದನ ಒಪ್ಪಿಕೊಂಡಿದೆ. ಸದನಕ್ಕೆ ಸಾರ್ವಭೌಮತ್ವ ಇದೆ ಎಂದು ಹೇಳುವಾಗ ಎರಡು ಪ್ರಶ್ನೆ ಬಂದಿವೆ, ಸದನ ಸಾರ್ವಭೌಮತ್ವವೆಂದು ಹೇಳುವಾಗ ಅಬ್ಜಕ್ಷನ್ ಇರುವಾಗ ಇದನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಅವಸರಕ್ಕೆ ಏತಕ್ಕೆ ಹೋದಿರಿ ? ಕೋರ್ಟಿನಲ್ಲಿಯಾದರೂ ಇದ್ದಿದ್ದರೆ, ಇದು ಕೋರ್ಟಿನಲ್ಲಿರತಕ್ಕಂಥ ವಿಚಾರ ಅದರ ಬಗ್ಗೆ ಚರ್ಚೆ ಮಾಡಬಾರದು ಎಂದು ಇದೆ. ಆದರೆ ಸದನದಲ್ಲಿ ಚರ್ಚೆ ಮಾಡಿರತಕ್ಕಂಥದ್ದು, ನಾವೇ ಕಾನೂನು ಮಾಡಿರತಕ್ಕಂಥದ್ದನ್ನು, ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅವಸರ ಮಾಡುತ್ತೇವೆಂದು ಹೇಳಿದರೆ ಸಾರ್ವಭೌಮತ್ವದ ಪ್ರಶ್ನೆ ಎಲ್ಲಿ ಬರುತ್ತದೆ ? ಇದು ಒಂದು ಪ್ರಶ್ನೆ. ಎರಡನೆಯ ಪ್ರಶ್ನೆ ಏನೆಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಗೆ ನಾವು ನೋಟೀಸ್ ಕೊಟ್ಟದ್ದು ಮಾತ್ರವಲ್ಲ, ಸದನದ ನಾಯಕರು ತಾವು ಕೂಡ ಇದ್ದು ನಾವು ಕೂಡ ಇದ್ದು ನಾಮಿನೇಷನ್ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿ. ಇದು ನಿನ್ನೆ ತೀರ್ಮಾನವಾಯಿತು. The date is fixed. That is on 2nd we are going to discuss on the issue. So, it pertains to the rules framed by the Government. It doesn't pertain to rule framed by the Zilla Parishad. ಸರ್ಕಾರ ಮಾಡಿದಂಥ ನಿಯಮದ ಬಗ್ಗೆ ಇಲ್ಲಿ ಚರ್ಚೆ ಎರಡನೇ ತಾರೀಖು ಆಗಿರುವಾಗ ಜಿಲ್ಲಾ ಪರಿಷತ್ತು ಏನು ಮಾಡಿದ್ದೇವೆ, ಅವರಿಗೆ ಸ್ವಯಂ ಅಧಿಕಾರ ಇದೆ, ಅವರು ಸ್ವತಂತ್ರವಾಗಿ ವರ್ತನೆ ಮಾಡುತ್ತಾರೆಂದು ಹೇಳಿದರೆ ಸರ್ಕಾರ ಏತಕ್ಕೆ ಇರಬೇಕು ? ಈ ಸದನ ಏತಕ್ಕೆ ಇರಬೇಕು ? ಎರಡು ಪ್ರಶ್ನೆಗಳು ಚರ್ಚೆಗೆ ಇರುವಾಗ ನಾಮಿನೇಷನ್‌ನ್ನು ಕಾನೂನು ಪ್ರಕಾರ ಮಾಡುತ್ತೇವೆಂದರೆ ಕಾನೂನು ಮಾಡತಕ್ಕಂಥ ನಾವು ಸದನದ ಒಂದು ಸಾರ್ವಭೌಮತ್ವವನ್ನು ತುಳಿದು ಕಾನೂನು ಮಾಡುತ್ತೇವೆ, ಅವರಿಗೆ ಅಧಿಕಾರ ಕೊಟ್ಟು ಬಿಟ್ಟಿರುತ್ತೇವೆಂದು ಹೇಳಿದರೆ ಅಸೆಂಬ್ಲಿ ಏತಕ್ಕೆ ಇರಬೇಕು. ನಾವು ಇಲ್ಲಿ ಏತಕ್ಕೆ ಇರಬೇಕು ? ಸದನದ ಸಾರ್ವಭೌಮತ್ವಕ್ಕೆ ಯಾವ ಬೆಲೆಯನ್ನು ಕೊಟ್ಟಂತಾಗುತ್ತದೆ. ಅಂಥ ಒಂದು ಸಾರ್ವಭೌಮತ್ವವನ್ನು ತಿರಸ್ಕರಿಸಿದಂತಾಯಿತು, ತುಚ್ಛೀಕರಿಸಿದಂತಾಯಿತು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇದು ಸದನದ ಮುಂದೆ ಇಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ ಅದಕ್ಕಾಗಿ ತಾಂತ್ರಿಕವಾಗಿ ಸರ್ಕಾರವನ್ನು ಆಳಿಕೊಂಡು ಹೋಗುತ್ತೇವೆಂದು ಹೇಳತಕ್ಕಂಥ ಪ್ರಶ್ನೆಯಲ್ಲ. ಈಗ ಸದನದ ಸಾರ್ವಭೌಮತ್ವದ ವಿಚಾರದಲ್ಲಿ ನೈತಿಕವಾಗಿ, ಕಾನೂನುಬದ್ಧವಾಗಿ ಎತ್ತಿ ಹಿಡಿಯತಕ್ಕಂಥ ಕೆಲಸ ತಾವು ಮಾಡಬೇಕು. ತಾಂತ್ರಿಕತೆಯಿಂದ ಇದನ್ನು ವಿಶ್ಲೇಷಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡದೆಹೋದರೆ ಸದನದ ಸಾರ್ವಭೌಮತ್ವಕ್ಕೆ ಲವಲೇಶವೂ ಗೌರವವನ್ನು ಕೊಡುತ್ತಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ನಾನು ಆ ಮನೆಯಲ್ಲಿ ಟಿ. ವಿ.ಯಲ್ಲಿ ಕೇಳುತ್ತಾ ಇದೆ. ಸದನದ ಮುಂದೆ ಬಂದಿರತಕ್ಕಂಥ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ಆದರೆ ಮಾನ್ಯ ಸದಸ್ಯರು ಸಭೆಯು ಸಾರ್ವಭೌಮತ್ವದ ಪ್ರಶ್ನೆಯನ್ನು ಮಾಡುತ್ತಿದ್ದಾರೆ. ಸನ್ಮಾನ್ಯ ಮೊಯಿಲಿಯವರೂ ಕೂಡ ಮಂತ್ರಿಮಂಡಲದಲ್ಲಿ ಇದ್ದವರು, ಮಂತ್ರಿಗಳಾಗಿದ್ದವರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಕಥೆಯನ್ನೆಲ್ಲ ಹೇಳುವುದು ಬೇಡ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹಾಗಾದರೆ ಎಲ್ಲವನ್ನು ಬರೆದುಕೊಡಿ.

(ಗೊಂದಲ)

ನಾನು ಹೇಳಬೇಕಾದ ವಿಚಾರವನ್ನು ಹೇಳಿದೆ. ಹಾಗಾದರೆ ಮಾನ್ಯ ವೀರಪ್ಪಮೊಯಿಲಿಯವರು ಸಚಿವರಾಗಿರಲಿಲ್ಲವೇ ?

(ಗೊಂದಲ)

ತಮಗೂ ಗೊತ್ತು ಸದನದ ಮುಂದೆ ನೋಟಿಫಿಕೇಶನ್‌ನ್ನು ಇಟ್ಟಿಲ್ಲವೆಂದು ಯಾವಾಗ ನೋಟಿಫಿಕೇಶನ್ ಬರುತ್ತದೆಂದರೆ ಫೈನಲ್ ನೋಟಿಫಿಕೇಶನ್ ಇನ್ನೂ ಆದಮೇಲೆ ಈ ಸದನದಲ್ಲಿ ಇರತಕ್ಕಂಥದ್ದು ಇರುತ್ತದೆ. ಕಾನೂನು ಇರತಕ್ಕಂಥದ್ದು ಕೂಡ ಯಾವುದೇ ಒಂದು ನೋಟಿಫಿಕೇಶನ್ ಸರ್ಕಾರದಿಂದ

ಫೈನಲ್ ನೋಟಿಫಿಕೇಶನ್ ಇಷ್ಯೂ ಆದಮೇಲೆಯೇ ಸದನದ ಮುಂದೆ ಇರತಕ್ಕಂಥದ್ದು. ಇದು ಇವತ್ತಿನ ದಿವಸ ನಾವು ಡ್ರಾಫ್ಟ್ ನೋಟಿಫಿಕೇಶನ್ ಇಷ್ಯೂ ಮಾಡಿದ್ದೇವೆ. ಅದಕ್ಕೆ ಅಬ್‌ಜಕ್ಷನ್ ಹಾಕುವವರು ಶಾಸಕರು, ಸಾರ್ವಜನಿಕರು ಹಾಕಿದ್ದಾರೆ. ಆ ಅಬ್‌ಜಕ್ಷನ್ ಅನ್ನು ವೆರಿಫೈ ಮಾಡಿ ಯಾವುದನ್ನು ಒಪ್ಪಬೇಕು, ಯಾವುದನ್ನು ಬಿಡಬೇಕು ಎಂದು ನೋಡಿ ಫೈನಲ್ ನೋಟಿಫಿಕೇಷನ್ ಅನ್ನು ಇವತ್ತು ಇಷ್ಯೂ ಮಾಡುತ್ತಿದ್ದೇವೆ. ಅದು ಇಷ್ಯೂ ಆದಮೇಲೆ ಅದನ್ನು ಸದನದ ಮುಂದಿಡುತ್ತೇವೆ. ಸದನದ ಮುಂದಿಟ್ಟಾಗ ತಮ್ಮ ಅಭಿಪ್ರಾಯಗಳನ್ನು ತಾವು ಹೇಳಬಹುದು. ಆದರೆ ನಿಯಮಗಳ ಪ್ರಕಾರ ಈ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಸದನದ ಮುಂದೆ ಆ ವಿಷಯ ಇಲ್ಲ; ಆ ವಿಷಯವನ್ನು ನಾವು ಇಟ್ಟಿಲ್ಲ. ಇವತ್ತು ನೋಟಿಫಿಕೇಷನ್ ಇಷ್ಯೂ ಮಾಡುತ್ತೇವೆ. ಅದು ನಿಯಮಗಳ ಪ್ರಕಾರ ಸಭೆಯ ಮುಂದೆ ಬರುವಾಗ ಬರುತ್ತದೆ. ಆದರೂ ಅದು ಚರ್ಚೆ ಮಾಡುವ ವಿಷಯ ಅಲ್ಲ. ಏನಾದರೂ ಅದಕ್ಕೆ ತಿದ್ದುಪಡಿ ಇದ್ದರೆ ತಿದುಪಡಿಗಳನ್ನು ಕೊಡುವುದಕ್ಕೆ ಹಕ್ಕಿದೆಯೇ ಹೊರತು ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಆ ದೃಷ್ಟಿಯಿಂದ ನಾವು ಸಭೆಯ ಸಾರ್ವಭೌಮತ್ವವನ್ನು ನಿಯಮಗಳನ್ನು ಉಲ್ಲಂಘಿಸಿಲ್ಲ. ನಾವು ಸಭೆಯ ಮುಂದೆ ಇನ್ನೂ ಇಟ್ಟಿಲ್ಲ. ಸುಮ್ಮನೆ ತಪ್ಪುಕಲ್ಪನೆಯಿಂದ ವಿಚಾರ ಮಾಡುವುದು ಬೇಡ ಎಂದು ಹೇಳುತ್ತೇನೆ. ತಾವು ಮಂತ್ರಿಗಳಾಗಿದ್ದವರು. ಇಂಥ ಡ್ರಾಫ್ಟ್ ನೋಟಿಫಿಕೇಷನ್‌ಗಳನ್ನು ನಿಮ್ಮ ಕಾಲದಲಿ ಸಭೆಯ ಮುಂದಿಟ್ಟದ್ದು ಇದ್ದರೆ ಹೇಳಿ. ಫೈನಲ್ ನೋಟಿಫಿಕೇಷನ್ ಆದಮೇಲೆ ಸದನದ ಮುಂದಿಡುತ್ತೇನೆ. ಇವತ್ತು ಫೈನಲ್ ನೋಟಿಫಿಕೇಷನ್ ಅನ್ನು ಇಷ್ಯೂ ಮಾಡುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಬೇಡಿಕೆಗಳನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಹೀಗಿದೆ.

"೩೧-೩-೧೯೮೮ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧೧, ೧೨, ೧೩, ೧೬, ೧೭, ೧೮, ೨೦, ೨೧, ೩೮, ೩೯, ೪೦, ೪೧, ಮತ್ತು ೪೨ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರ್ಮಾಡಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರ್ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ–೧೧ ಯುವಜನ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೪೨,೩೩,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೧೨–ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೮೯,೧೯,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೩–ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳ

ರಾಜ್ಯಪಾಲರ ಶಿಫಾರಸನ ಮೇರೆಗೆ ೩೧-೩-೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೩೬,೮೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೬–ವಿಮೆ ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೫೮,೬೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೭–ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೩೩,೫೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೮–ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯು ೧,೬೯೪,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೦–ವಿವಿಧ ಸಾಮಾನ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧ ,೩7 ೦೫,೦೦೦ ರೂ,ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪,೫೦,೦೦,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ–೨೭ ವಾರ್ತಾ ಮತ್ತು ಪ್ರಚಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೯೫,೩೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪೨,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೮–ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೪.೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೯–ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೮ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೦೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು,

ಅಭಿಯಾಚನೆ ಕ್ರಮಾಂಕ–೪೦ ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೮೦ ೯೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ–೪೧ ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯,೫೮,೮೬,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೨–ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೨೬,೬೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

Supplementary Estimates for 1986-87

ಮಂಡನಾ ಪ್ರಸ್ತಾವ

ಅಧ್ಯಕ್ಷರು.—ಈಗ ಅನುಪೂರಕ ಅನುದಾನ ಬೇಡಿಕೆಗಳ (೨ನೇ ಕಂತು) ಮೇಲಿನ ಪ್ರಸ್ತಾವವನ್ನು ಮುಖ್ಯ ಮಂತ್ರಿಗಳು ಮಂಡಿಸುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೆಲೆಕ್ಸ್ ಮೆಸೇಜ್ ಕಳುಹಿಸಿ ಎಲೆಕ್ಷನ್ ಅನ್ನು ವಿತ್ ಹೋಲ್ಡ್ ಮಾಡಿಲ್ಲವೆ ? ಆ ರೀತಿ ಇದನ್ನು ಏತಕ್ಕೆ ಮಾಡುವುದಕ್ಕಾಗುವುದಿಲ್ಲ ?

ಅಧ್ಯಕ್ಷರು.—ಆ ವಿಚಾರ ಆಗಲೇ ಮುಕ್ತಾಯವಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೀತಿ ಮಾಡಿದರೆ ನಾವು ಮಾತನಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು.—ಈಗ ನಾನು ಏನೂ ಮಾಡುವುದಕ್ಕಾಗುವುದಿಲ್ಲ, ಈಗ ಪ್ರಸ್ತಾವವನ್ನು ಮಂಡಿಸುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಅದನ್ನು ಪ್ರೊಟೆಸ್ಟ್ ಮಾಡಿ ವಾಕ್‌ಔಟ್ ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ತರಹ ಆದರೆ ಕಾರ್ಯಕಲಾಪ ಮಾಡುವುದು ಕಷ್ಟವಾಗುತ್ತದೆ

(ಈ ಹಂತದಲ್ಲಿ ಮಾನ್ಯ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲ ಸಭಾತ್ಯಾಗ ಮಾಡಿದರು)

ಶ್ರೀ ಜೆ. ಹೆಚ್. ಪಟೇಲ್.—ವಾಕ್‌ಔಟ್ ಮಾಡಿದವರಿಗೆ ಹಾಗೆಯೇ ಕೇರಳ ತನಕ ಹೋಗಿ ಬರಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಎರಡನೇ ಕಂತಿನ ಅನುಪೂರಕ ಬೇಡಿಕೆಗಳು ಏನಿವೆ ಇದರಲ್ಲಿ ಸರ್ಕಾರದಿಂದ ಖರ್ಚಾಗತಕ್ಕದ್ದು ೯೬.೨೬ ಕೋಟಿ ರೂಪಾಯಿಗಳು. ಇದು ಅವಶ್ಯಕವಾಗಿ ವರ್ಷದ ಮಧ್ಯದಲ್ಲಿ ಖರ್ಚು ಮಾಡಬೇಕಾದ ಹಣಕ್ಕೆ ಸಂಬಂಧಪಟ್ಟದ್ದಾಗಿದೆ. ಮಾನ್ಯ ಸಭೆ ಈ ಬೇಡಿಕೆಗಳಿಗೆ ಅನುಮತಿ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.